of time. Government have also decided that foodgrains should be issued at the rate of 5 Kgs. per adult per month with effect from 1-5-1966 to all the residents of towns with a population of 5,00) and above which are not already covered by the schemes mentioned above.

Government have also decided to issue 5 Kgs. of foodgrains per adult per month in respect of rural artisans and agricultural labour having no lands of their own. In the meanwhile they will continue to get foodgrains on an *ad hoc* basis as hitherto.

The total quantity of foodgrains that would be issued for the month of April 66 to identified categories of population would come to 5,550 tonnes of Rice, 13,580 tonnes of Wheat, 8,370 tonnes of Milo and 1,348 tonnes of Jowar. In addition to this, 3,200 tonnes of Rice 22,500 tonnes of Wheat, 11,000 tonnes of Milo and 4,000 tonnes of Jowar and such quantities of other foodgrains as are procured locally and as could be made available to the deficit districts from the surplus districts will be issued through Fair Price Shops.

During the month of May and the further months the total issues will continue at this rate but a portion of the issues made as on *ad hoc* basis during April 66 will be given to certain identified categeries of population like people in the towns with a population of 5,000 and over and village Artisans and Agricultural Labour in other areas. Statement-A shows the quantities of foodgrains proposed to be issued in April 66; Statement-B shows the quantities of foodgrains proposed to be issued in May and in the further months; Statement-C shows the issue prices at the retail points of the foodgrains which are being issued through Fair Price Shops.

I will keep some statements on the table of this House for the use of the Hon'ble Members.

2-30 P.M.

Statement "A" shows the quantities of foodgrains proposed to be issued in April 1966. Statement "B" shows the quantities of food-grains proposed to be issued in May 1966 and in the further months. Statement "C" shows the issue price at the retail point from fair price shops.

Sri S. SIVAPPA (Sravanabelagola).—What is the total quantity for each month?

Sri B. D. JATTI.—All these figures are in the statements. I will place them on the Table. If Hon'ble Members want further details, I will give them.

[Mr. Deputy Speaker in the Chair.]

BUDGET ESTIMATES FOR 1966-67—DEMANDS FOR GRANTS.

Demand Nos. 15 and 53

(Contd.)

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಗಳೇ, ಈಗತಾನೇ ಆಹಾರ ಮಂತ್ರಿಗಳು ತಮ್ಮ ಇಲಾಖೆಗೆ ಸಂಬಂಧಪಟ್ಟಂಥ ಬೇಡಿಕೆಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಆಹಾರ

(ಶ್ರೀ ಎಸ್. ಶಿವಪ್ಪ)

ಇಲಾಖೆಯ ಸಿಬ್ಬಂದಿ ಮತ್ತು ಹಂಚಿಕೆ ವ್ಯವಸ್ಥೆಗಾಗಿ ಖರ್ಚು ಮಾಡತಕ್ಕ ಹಣದ ಬೇಡಿಕೆಗಳನ್ನು ಈ ಸಭೆಯ ಮುಂದೆ ಇಟ್ಟಿರತಕ್ಕ ಈ ಸಮಯದಲ್ಲಿ ನಾನು ಈ ಬೇಡಿಕೆಯನ್ನು ಅತಿ ತೀವ್ರವಾಗಿ ವಿರೋಧ ಮಾಡುತ್ತಾ ಸರ್ಕಾರ ಈ ಆಹಾರದ ವಿಷಯದಲ್ಲಿ ಎಷ್ಟುಮಟ್ಟಿಗೆ ವಿಫಲವಾಗಿದೆ ಮತ್ತು ತೀರ ಹದ ಗೆಟ್ಟಿರತಕ್ಕ ಪರಿಸ್ಥಿತಿಯನ್ನು ಸರಿಮಾಡುವುದಕ್ಕೆ ತನ್ನ ಅಸಮರ್ಥತೆಯನ್ನು ತೋರಿಸಿಕೊಟ್ಟಿದೆ ಎಂಬು ದನ್ನು ಹೇಳುವವನಾಗಿದ್ದೇನೆ. ಮೈಸೂರು ದೇಶದಲ್ಲಿ ಎಂದೂ ಕಾಣದ ಆಹಾರದ ಅಭಾವ ಇವತ್ತು ನಮಗೆ ಕಂಡುಬರುತ್ತಾ ಇದೆ. ಎಲ್ಲಾ ಕಡೆಯಲ್ಲೂ ಕೂಡ ಇಡೀ ಮೈಸೂರು ದೇಶದಾದ್ಯಂತ ಇದನ್ನು ನೋಡುತ್ತಾ ಇದ್ದೇವೆ. ಇವತ್ತು ಆಹಾರ ಸಚಿವರು ಮತ್ತು ಹಣಕಾಸಿನ ಸಚಿವರು ಅವರ ಬಡ್ಜೆಟ್ ಭಾಷಣದಲ್ಲಿ ಹೇಳಿದಂತಹ ಹೇಳಿಕೆಗಳನ್ನು ನೋಡಿದರೆ ಮೈಸೂರು ದೇಶದ ಆಹಾರದ ಕೊರತೆ ಸರ್ವೇಸಾಧಾರಣವಾಗಿ 4—5 ಲಕ್ಷ ಟನ್ ಕೊರತೆ ಇದ್ದದ್ದು ಈ ವರ್ಷ ಸುಮಾರು 19–20 ಲಕ್ಷ ಟನ್ ಕೊರತೆ ಇರುವುದನ್ನು ಇವತ್ತಿನ ದಿವಸ ಮೈಸೂರು ದೇಶದಲ್ಲಿ ನೋಡುತ್ತಾ ಇದ್ದೇವೆ. 20 ಲಕ್ಷ ಟನ್ ಆಹಾರದ ಕೊರತೆ ಎಂದರೆ, ಮೈಸೂರು ದೇಶದ ಜನಸಂಖ್ಯೆಯಲ್ಲಿ ಸುಮಾರು ಮೂರನೇ ಒಂದು ಭಾಗ ಆಹಾರದ ಅಭಾವಕ್ಕೆ ಒಳಗಾಗಿದ್ದಾರೆ. ಎಂದರೆ ಸುಮಾರು 85 ಅಥವಾ 90 ಲಕ್ಷ ಜನಗಳಿಗೆ ಆಹಾರವನ್ನು ಒದಗಿಸತಕ್ಕ ಜವಾಬ್ದಾರಿಯನ್ನು ಮೈಸೂರು ದೇಶ ಇವೊತ್ತು ಹೊತ್ತಿದೆ.

ಈ ಆಹಾರದ ಪ್ರಶ್ನೆಯನ್ನು ಇವತ್ತು ಚರ್ಚೆ ಮಾಡತಕ್ಕ ಕಾಲದಲ್ಲಿ ಇದನ್ನು 3 ಭಾಗವಾಗಿ ವಿಂಗಡಣೆ ಮಾಡಿ ಹೇಳಬೇಕಾಗಿದೆ. ಒಂದು ಆಹಾರದ ಉತ್ಪನ್ನ, ಎರಡನೆಯದು ಹಂಚಿಕೆ, ಮತ್ತು ಮೂರನೆಯದು ಕನ್‌ಸ್ಯೂಮರ್ಸ್. ಈ ಬಗ್ಗೆ ಸರ್ಕಾರ ಎಷ್ಟುಮಟ್ಟಿಗೆ ತನ್ನ ಸಮರ್ಥನೆ ಮಾಡಿ ಕೊಂಡಿದೆ ? ಈ ಮೂರು ಅಂಗಗಳಲ್ಲಿ ಎಷ್ಟುಮಟ್ಟಿಗೆ ಮೈಸೂರು ಸರ್ಕಾರ ವಿಫಲಗೊಂಡಿದೆ ಎಂಬು ದನ್ನು ಕಳಕಳಿಯಿಂದ ಹೇಳಬೇಕಾಗಿದೆ. ಎಲ್ಲಾ ಸೌಕರ್ಯಗಳೂ ಸರಿಯಾಗಿದ್ದಾಗ ಮಳೆ ಬೆಳೆ ಚೆನ್ನಾಗಿದ್ದಾಗ ಅವತ್ತೂ ಕೂಡ ಇಲ್ಲಿ 4-5 ಲಕ್ಷ ಟನ್ ಕೊರತೆ ಇತ್ತು. ಇವತ್ತು, ಮಳೆ ಬೆಳೆ ಹೋಗಿ ಬರಗಾಲ ಬಂದು ದೇಶದಲ್ಲಿ ಜನ ಬೆಂಡಾಗಿರತಕ್ಕ ಸಮಯದಲ್ಲಿ 20 ಲಕ್ಷ ಟನ್ ಕೊರತೆ ಇರತಕ್ಕ ಈ ಸನ್ನಿವೇಶದಲ್ಲಿ ಸರ್ಕಾರದಲ್ಲಿರತಕ್ಕ ತಾವು ಏನು ಮಾಡಿದ್ದೀರಿ ಎಂಬುದನ್ನು ಹೇಳುವುದಾದರೆ ಬಹುಶಃ ನಿಮಗೆ ಜನಗಳ ಪರಿಚಯ ಇಲ್ಲವೋ ಅಥವಾ ಇವತ್ತು ಜನ ಎಷ್ಟು ಹಸಿವಿನಿಂದ ನರಳುತ್ತಾ ಇದ್ದಾರೆ ಎಂಬ ಚಿತ್ರವನ್ನು ತಾವು ಕಾಣದವರಾಗಿದ್ದೀರೋ ತಿಳಿಯದಾಗಿದೆ. ಮುಂದೆ ಮಾಡುತ್ತೇವೆ ಎಂದು ಹೇಳಿ ಚಂದ್ರನನ್ನು ಆಕಾಶದಲ್ಲಿ ತೋರಿಸುವ ರೀತಿಯಲ್ಲಿ ಅಂಕಿಅಂಶಗಳನ್ನು ಈ ಸಭೆಯ ಮುಂದೆ ಇಟ್ಟಿರಿ. ಈಗಾಗಲೇ ಸುಮಾರು 4 ತಿಂಗಳಾಯಿತು. 4 ತಿಂಗಳಿನಿಂದ ಏನು ಕಾರ್ಯವನ್ನು ಈ ಸರ್ಕಾರ ಮಾಡಿತು ಎಂಬುದನ್ನು ಕೇಳಬೇಕಾಗಿದೆ ? ಮೈಸೂರು ದೇಶದ ಜನ ವಲಸೆ ಹೋಗಿದ್ದಾರೆ, ತಾಲ್ಲೂಕುಗಳನ್ನು ಬಿಟ್ಟು ಹೊರಗೆ ಹೋಗಿದ್ದಾರೆ. ಮೈಸೂರು ದೇಶದಲ್ಲಿರತಕ್ಕ ಜನ ಅರ್ಧ ಸತ್ತು ಹೋಗಿದೆ, ನಾಶವಾಗಿದೆ, ಕೆಂಗೆಟ್ಟು ಕಂಗಾಲಾಗಿದ್ದಾರೆ. ಅಂತಹ ಸಮಯದಲ್ಲಿ ಏನು ಮಾಡಿತು ಸರ್ಕಾರ ಎಂಬುದನ್ನು ನೋಡಬೇಕಾಗಿದೆ. ಇದು ಕೇವಲ ಉತ್ಪ್ರೇಕ್ಷೆಯ ಪ್ರಶ್ನೆಯಲ್ಲ. ಇವತ್ತು ದೇಶದಲ್ಲಿರತಕ್ಕ ಯಥಾಸ್ಥಿತಿ, ಏನು ಒಂದು ಪರಿಸ್ಥಿತಿ ದೇಶದಲ್ಲಿದೆ ಎಂಬುದನ್ನು ಇವತ್ತು ಪರಿಚಯ ತಾವು ಮಾಡಿಕೊಳ್ಳಬೇಕಾಗಿದೆ. ಇವತ್ತು 20 ಲಕ್ಷ ಟನ್ ಆಹಾರದ ಅಭಾವ ಇದೆ ಎಂದು ಹೇಳಿ ದ್ದೀರಿ. 4 ತಿಂಗಳಿನಿಂದ ಸರ್ಕಾರದವರು ಆಗಿಂದಾಗ್ಗೆ ಈ ಶಾಸನ ಸಭೆಯ ಮುಖಾಂತರ ಆಹಾ ರದ ಕೊರತೆಯನ್ನು ನೀಗಿಸಲು ಪ್ರತಿಹಳ್ಳಿಯಲ್ಲೂ ಕೂಡ ಆಹಾರ ಕೇಂದ್ರಗಳನ್ನು ತೆಗೆಯುತ್ತೇವೆ! ಆಹಾರವನ್ನು ಹಂಚಿಕೆ ಮಾಡುತ್ತೇವೆ, ಬೆಲೆ ಇಳಿಸುತ್ತೇವೆ ಎಂದು ಇತ್ಯಾದಿ ಇತ್ಯಾದಿಯಾಗಿ ಈ ಸಭೆಗೆ ಹೇಳುತ್ತಲೇ ಬಂದಿದ್ದಾರೆ. ಇವತ್ತಿನ ದಿವಸ ಕಟ್ಟಕಡೆಯದಾಗಿ ಆಹಾರ ಸಚಿವರನ್ನು ಕೇಳು ತ್ತೇನೆ. 20 ಲಕ್ಷ ಟನ್ ಕೊರತೆ ಇರತಕ್ಕ ಈ ದೇಶದಲ್ಲಿ ಎಷ್ಟು ಲಕ್ಷ ಟನ್ ಅಕ್ಕಿಯ ಕೊರತೆ ಇದೆ, ಎಷ್ಟು ಲಕ್ಷ ಟನ್ ರಾಗಿಯ ಕೊರತೆ ಇದೆ. ಎಷ್ಟು ಲಕ್ಷ ಟನ್ ಹುರುಳಿಯ ಕೊರತೆ ಇದೆ? ಎಷ್ಟು ಲಕ್ಷ ಟನ್ ಕಡಲೆಯ ಕೊರತೆ ಇದೆ? ಈ ಒಂದು ಅಂಕಿಯನ್ನು ಕೊಡಿ ಎಂಬ ಪ್ರಶ್ನೆಯನ್ನು ಮಾಡು ತ್ತೇನೆ. ಇವತ್ತು ಈ ಅಂಕಿ ಇಲ್ಲ. ತಮಗೆ ಬೇಕಾದ ರೀತಿಯಲ್ಲಿ ಉಡಾಫೆ ಮಾತನಾಡುತ್ತಾ ಇದ್ದೀರಿ. ರಾಗಿ ಇಲ್ಲದೆ ಎಷ್ಟು ಜನ ಕಷ್ಟ ಪಡುತ್ತಾ ಇದ್ದಾರೆ ಎಂಬ ಅಂಕಿ ಕೊಟ್ಟ ಪಕ್ಷದಲ್ಲಿ ಭರೆ ಈ ಸರ್ಕಾರದಲ್ಲಿ ಅಂಕಿ ಅಂಶ ಇದೆ, ಅಂಕಿ ಅಂಶ ಇಟ್ಟಿದ್ದಾರೆ ಎಂದು ಹೇಳುತ್ತೇನೆ. ತಮ್ಮಲ್ಲಿ ಜೋಳದ ಕೊರತೆ ಎಷ್ಟು ಇದೆ! ರಾಗಿಯ ಕೊರತೆ ಎಷ್ಟು ಇದೆ ಎನ್ನುವಂತಹ ಅಂಕಿ ಇಲ್ಲ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಎಲ್ಲಿಂದ ತರಬೇಕು? ಏನು ಮಾಡಬೇಕು ?

ಶ್ರೀ ಎಸ್. ಶಿವಪ್ಪ,—ಏನು ಮಾಡಬೇಕೆಂದು ಕೇಳಿದರೆ ನಾನೇನು ಹೇಳಲಿ? ಚೈನಾದವರು ನುಗ್ಗಿ ಬರುತ್ತಾ ಇದ್ದಾರೆ ಏನು ಮಾಡಬೇಕು ಎಂದು ಕೇಳಿದರೆ ನಾನೇನು ಹೇಳಲಿ? ಎಲ್ಲಿಂದ ತರಬೇಕು, ಏನು ಮಾಡಬೇಕು ಎಂದು ಅವರು ಕೇಳುವುದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರನ್ನು ಕೇಳುವುದು ಅಕ್ಕಿ ಕೊರತೆ ಇದೆ, ರಾಗಿ ಕೊರತೆ ಇದೆ ಅದನ್ನು ಎಲ್ಲಿಂದ ತರಬೇಕು ಎಂಬುದನ್ನು ಹೇಳಿ ?

ಶ್ರೀ ಎಸ್. ಶಿವಪ್ಪ.—ಹೋದ ಸೆಪ್ಟೆಂಬರ್‌ನಲ್ಲಿ ಪಾಕಿಸ್ತಾನದವರ ಆಕ್ರಮಣ ಆಯಿತು, ಎಲ್ಲಿಂದ ತರೋಣ, ಏನು ಮಾಡೋಣ ಎಂದು ಕೇಳಿದರೆ ನಾನೇನು ಹೇಳಲಿ ? ತಾವು ಸರ್ಕಾರದ ಜವಾಬ್ದಾರಿಯನ್ನು ಹೊತ್ತಿರತಕ್ಕ ಕಾಲದಲ್ಲಿ ಎಲ್ಲಿಂದ ತರಬೇಕು, ಏನು ಮಾಡಬೇಕೆಂದು ನನ್ನನ್ನು ಪ್ರಶ್ನೆ ಮಾಡಿದರೆ, ನಾನು ಹೇಳಬೇಕೆಂದರೆ ಆಗ ನಾವೂ ನೀವೂ ಜಾಗ ಬದಲಾಯಿಸಬೇಕಾಗುತ್ತದೆ. ಆಗ ಉತ್ತರವನ್ನು ಹೇಳುತ್ತೇನೆ ಈಗ ಅಲ್ಲ. ಈಗ ತಾವು ಆ ಜವಾಬ್ದಾರಿಯನ್ನು, ಹೊಣೆಗಾರಿಕೆಯನ್ನು ಹೊತ್ತಿದ್ದೀರಿ.

Sri S. NIJALINGAPPA.—The Member should say wherefrom we should get ragi, because it is not produced in Mysore.

ಶ್ರೀ ಎಸ್. ಶಿವಪ್ಪ.—ರಾಗಿ ಎಷ್ಟು ಲಕ್ಷ ಟನ್ ಕೊರತೆ ಇದೆ, ಅಕ್ಕಿ ಎಷ್ಟು ಲಕ್ಷ ಟನ್ ಕೊರತೆ ಇದೆ ಎಂಬ ಲೆಕ್ಕವನ್ನು ಇವತ್ತು ಮೊದಲು ಕೊಡಿ ಎಂದು ಕೇಳುತ್ತೇನೆ. ನಿಮ್ಮಲ್ಲಿ ಆ ಲೆಕ್ಕವೇ ಇಲ್ಲ. ಎಷ್ಟು ಲಕ್ಷ ಟನ್ ಅಕ್ಕಿಯ ಕೊರತೆ ಇದೆ ಎಂಬ ಅಂಕಿ ಕೊಡಿ ಎಂದರೆ ಎಲ್ಲಿಂದ ತರೋಣ ಎಂದರೆ ನಾನೇನು ಹೇಳಲಿ ? ಅಂಕಿ ಇದೆಯೇ ತಮ್ಮ ಹತ್ತಿರ ಎಂದು ಕೇಳುತ್ತೇನೆ. ಅಂಕಿಯೇ ಇಲ್ಲ. ಈಗಾಗಲೇ ಮಾನ್ಯ ಆಹಾರ ಸಚಿವರು ಯಾವ ರೀತಿ ಆಹಾರವನ್ನು ಶೇಖರಣೆ ಮಾಡುತ್ತೇವೆ ಎಂಬ ವಿಷಯವನ್ನು ಹೇಳಿದ್ದಾರೆ. ಸುಮಾರು 88 ಸಾವಿರ ಟನ್ ಆಹಾರವನ್ನು ಪ್ರೊಕ್ಯೂರ್ ಮಾಡಿದ್ದೇವೆ ಎಂದು ಹೇಳಿದರು. ಇವತ್ತು ಪ್ರೊಕ್ಯೂರ್ ಮಾಡಿರತಕ್ಕ ರೀತಿಯಲ್ಲೂ ಕೂಡ ದೊಡ್ಡ ಲೋಪ ಇದೆ. ಲೆವೀ ಸಿಸ್ಟಂ ಹಾಕಿದ್ದೀರಿ. ಅದಕ್ಕೆ ಬೆಲೆಯನ್ನು ನಿಗದಿ ಮಾಡಿದ್ದೀರಿ. ಇದರಲ್ಲೂ ಕೂಡ ಲೋಪದೋಷಗಳು ಬೇಕಾದಷ್ಟು ಇವೆ. ಗೇಣಿದಾರ ಎಂದರೆ, ಯಾವನು ಬೆಳೆಯುತ್ತಾನೋ ಅವನು ಲೆವಿ ಕೊಡಬೇಕೆಂದು ಮಾಡಿದ್ದೀರಿ. ಗೇಣೀದಾರನ ಹತ್ತಿರ ವಸೂಲು ಮಾಡಬಹುದೇ ಹೊರತು ಗೇಣೀದಾರ ಅವನು ಬೆಳೆದದ್ದನ್ನು ತೆಗೆದುಕೊಂಡು ಹೋಗಿ ಯಾವ ಜಮೀನ್ದಾರನಿಗೆ ಕೊಡುತ್ತಾರೋ ಆ ಜಮೀನ್ದಾರನಿಂದ ವಸೂಲು ಮಾಡುವ ಹಕ್ಕು ತಮಗೆ ಇಲ್ಲ. ಏಕೆಂದರೆ ಅವನು ಕಲ್ಟಿವೇಟರ್ ಅಲ್ಲ. ಈ ಒಂದು ಲೋಪ ನಿಮ್ಮ ಆರ್ಡರ್‌ನಲ್ಲಿದೆ. ಪ್ರೈಸ್ ಸ್ಟ್ರಕ್ಚರ್‌ನಲ್ಲಿ ಕೂಡ ರೈತನಿಂದ ಕೊಳ್ಳತಕ್ಕ ಬೆಲೆ ಮತ್ತು ಮಾರತಕ್ಕ ಬೆಲೆ ಇವೆರಡರಲ್ಲೂ ಕೂಡ ತಾವು ಬಹಳ ದೊಡ್ಡ ಅಂತರವನ್ನು ಇಟ್ಟಿದ್ದೀರಿ. ಒಂದು ಕ್ವಿಂಟಾಲ್ ಅಕ್ಕಿಗೆ ಕೊಳ್ಳುವುದಕ್ಕೂ ಮಾರುವುದಕ್ಕೂ ಇರತಕ್ಕ ಅಂತರ ಸುಮಾರು 20 ರೂಪಾಯಿ ಇದೆ. ಇದರಿಂದ ಯಾವ ರೈತನಿಗೂ ಕೂಡ ಸರ್ಕಾರಕ್ಕೆ ಕೊಡಬೇಕೆನ್ನತಕ್ಕ ಉತ್ತೇಜನ ಇಲ್ಲ. ಮಾರಾಟ ಮಾಡತಕ್ಕ ಕಾಲದಲ್ಲಿ ತಾವು ತಮ್ಮ ಸಿಬ್ಬಂದಿ ಖರ್ಚು, ಕಮಿಷನ್ ಖರ್ಚು ಅದನ್ನೆಲ್ಲಾ ಹಾಕುತ್ತೀರಿ. ಹಾಗಿರುವಾಗ ಒಂದು ಕ್ವಿಂಟಾಲ್ ಅಕ್ಕಿಗೆ 20 ರೂಪಾಯಿ ವ್ಯತ್ಯಾಸ ಇದೆ ಎಂದರೆ ಇದು ಎಂತಹ ಸರ್ಕಾರ ಆಯಿತು ? ಇದನ್ನು ತಾವು ಯೋಚನೆ ಮಾಡಬೇಕು. ಒಂದು ಕ್ವಿಂಟಾಲ್ ಅಕ್ಕಿಯನ್ನು ಕನ್‌ಸ್ಯೂಮರ್‌ಗೆ ಹಂಚಬೇಕಾದರೆ ಕೊಳ್ಳುವುದಕ್ಕೂ ಮತ್ತು ಮಾರುವುದಕ್ಕೂ ಇರತಕ್ಕ ಅಂತರ 20 ರೂಪಾಯಿ ಅಂದರೆ ಬಹುಶಃ ಅವನನ್ನು ಯಾವ ಗೋಳಿಗೆ ಸಿಕ್ಕಿಸುತ್ತ ಇದ್ದೀರಿ ಎಂಬುದನ್ನು ಯೋಚನೆ ಮಾಡಬೇಡವೇ ? 20 ರೂಪಾಯಿ ಅಂತರ ಎಂದರೆ ಇದು ಎಂತಹ ವ್ಯಾಪಾರ? ಇದಕ್ಕಿಂತಲೂ ಅನ್ಯಾಯದ ಪರಮಾವಧಿ ಮತ್ತೇನು ಇದೆ ? ಮಾನ್ಯ ಸಚಿವರಿಗೆ ಹೇಳುತ್ತೇನೆ ಇದೇ 20 ರೂಪಾಯಿಗಳನ್ನು ತಾವು ಬೆಳೆಯುವವನಿಗೆ ಕೊಟ್ಟಿದ್ದರೆ ಅವನಿಗೆ ಎಷ್ಟೋ ಸಂತೋಷವಾಗುತ್ತಾ ಇತ್ತು. ಹೆಚ್ಚು ಬೆಳೆಯುವುದಕ್ಕೆ ಅವನಿಗೆ ಉತ್ತೇಜನವಿರುತ್ತಾ ಇತ್ತು. ಕೊಳ್ಳುವವನಿಗೂ ರಿಯಾಯಿತಿ ಇಲ್ಲ, ಬೆಳೆದಿರತಕ್ಕವನಿಗೂ ರಿಯಾಯಿತಿ ಇಲ್ಲ ಮಧ್ಯವರ್ತಿ ಜನಕ್ಕೆ 20 ರೂಪಾಯಿ ಹಂಚುತ್ತೇವೆ ಎಂದರೆ ಇದರ ಅರ್ಥವೇನು ? ಕೋಟ್ಯಾಂತರ ರೂಪಾಯಿ ವ್ಯವಹಾರ ಮಾಡತಕ್ಕ ಕಾಲದಲ್ಲಿ ಎಷ್ಟು ಕೋಟಿ ರೂಪಾಯಿ ಈ ಮಧ್ಯವರ್ತಿ ಕೆಲಸ ಮಾಡತಕ್ಕವರಿಗೆ ಖರ್ಚಾಗುತ್ತದೆ ಎಂಬ ಲೆಕ್ಕವನ್ನು ತಾವು ದಯವಿಟ್ಟು ಹೇಳಿ.

ಈ ದಿವಸ ಒಂದು ಕ್ವಿಂಟಾಲಿಗೆ 20 ರೂಪಾಯಿಯಂತೆ ಒಂದು ಲಕ್ಷ ಟನ್ ಶೇಖರಿಸಿದ್ದರೆ ಎರಡು ಕೋಟಿ ರೂಪಾಯಿ ದೊರೆಯುತ್ತದೆ. ಈ ರೀತಿ ಕೊಳ್ಳುವ ಬೆಲೆಗೂ ಮಾರಾಟದ ಬೆಲೆಗೂ ವ್ಯತ್ಯಾಸವಿದ್ದರೆ ಅದರ ಪರಿಣಾಮವೇನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇದು ಸರಿಯಲ್ಲ. ಒಂದು ವ್ಯವಸ್ಥಿತ ರೀತಿ ನೀತಿ ಇಲ್ಲ, ಬೆಂಗಳೂರಿನಲ್ಲೇ ಒಂದು ನೀತಿ, ಇತರ ಕಡೆಗಳಲ್ಲೇ ಒಂದು ನೀತಿ. ಹೋಲ್‌ಸೇಲರ್ಸ್ ಮತ್ತು ರೀಟೆಲರ್ಸ್ ನೇಮಕ ಮಾಡುವಾಗ ಸರಿಯಾದ ನೀತಿಯನ್ನನುಸರಿಸಿರುವುದಿಲ್ಲ. ಒಟ್ಟು ವ್ಯಾಪಾರವನ್ನು ದೊಡ್ಡ ದೊಡ್ಡ ವ್ಯಾಪಾರಿಗಳಿಗೆ ಮತ್ತು ಸಹಕಾರ ಸಂಘಗಳಿಗೆ ವಹಿಸುತ್ತೇವೆಂದು ಹೇಳಿದ್ದರು. ಹೋದ ಅಧಿವೇಶನದಲ್ಲಿ ಖಾಸಗಿ ವರ್ತಕರಿಗೆ ಒಟ್ಟು ವ್ಯಾಪಾರ ಮಾಡುವುದನ್ನು ವಹಿಸುವ ವಿಚಾರ ಪುನರ್ವಿಮರ್ಶೆ ಮಾಡುವುದಾಗಿ ಹೇಳಿದ್ದರು. ಅದರೆ

(ಶ್ರೀ ಎಸ್. ಶಿವಪ್ಪ)

ಈಗ ಮಾಡಿರುವುದೇನು ? ಕೇವಲ 10-12 ಜನ ವರ್ತಕರಿಗೆ ಒಟ್ಟು ವ್ಯಾಪಾರವನ್ನು ವಹಿಸಿರುವಾಗ ಹಿಂದಿದ್ದವರಿಗೆ ಕೊಟ್ಟಿಲ್ಲ, ಸೊಸೈಟಿಗಳಿಗೆ ಸಹ ಒಟ್ಟು ವ್ಯಾಪಾರ ವಹಿಸಿದೆ. ವ್ಯಾಪಾರದಲ್ಲಿ ಅನುಭವವಿರುವವರಿಗೇಕೆ ವಹಿಸಲಿಲ್ಲ? ಹತ್ತಾರು ವರ್ಷಗಳಿಂದ ಕೋಟಿಗಟ್ಟಲೆ ವ್ಯಾಪಾರ ಮಾಡುತ್ತಿರುವವರು ನಗರದಲ್ಲಿ ಯಾರಿದ್ದಾರೋ ಅವರನ್ನು ಬಿಟ್ಟು ಮಿಲಿಟರಿ ಹೋಟೆಲ್‌ಗೆ, ಹೆಚ್ಚು ಅನುಭವವಿಲ್ಲದವರಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ ? ಇದರಿಂದ ಕುಳಿತ ಕಡೆ ಅವರಿಗೆ ತಿಂಗಳಿಗೆ ಕಮಿಷನ್ 20 ಸಾವಿರ ರೂಪಾಯಿ ಬರುತ್ತದೆ. ಅವರನ್ನು ತೆಗೆದು ಹೋಲ್‌ಸೇಲ್ ವ್ಯಾಪಾರವನ್ನು ಪೂರ್ಣವಾಗಿ ಸಹಕಾರ ಸಂಘಗಳಿಗೇ ವಹಿಸಿ, ಅದನ್ನು ಒಪ್ಪುತ್ತೇನೆ. ಅದನ್ನು ಬಿಟ್ಟು ಬೇಕಾದವರಿಗೆ ಕೆಲವರಿಗೆ ಕೊಡುವುದು, ಕೆಲವರಿಗೆ ಕೊಡದಿರುವುದು ಸರಿಯಲ್ಲ. ಇದು ಅನ್ಯಾಯ. ಇದರಿಂದ ಒಂದು ಕಡೆ ವರ್ತಕರಿಗೆ ಅನ್ಯಾಯ, ಇನ್ನೊಂದು ಕಡೆ ಎಲ್ಲವನ್ನೂ ಸಹಕಾರ ಸಂಘಗಳಿಂದಲೇ ನಡೆಸುತ್ತೇವೆಂದು ಹೇಳುವಂತೆ ಮಾಡುತ್ತಿಲ್ಲ. ಹೀಗೆ ಮನಸ್ಸಿಗೆ ಬಂದಹಾಗೆ ಬೇಕಾದ ವರ್ತಕರಿಗೆ ಕೊಡುವ ನೀತಿಯನ್ನು ಬದಲಾಯಿಸಬೇಕು. ಮಂತ್ರಿಗಳು ವಾಸಮಾಡುವ ಬೆಂಗಳೂರು ನಗರದಲ್ಲೇ ಇಷ್ಟು ಅನ್ಯಾಯವಾಗುವಾಗ ಬೇರೆ ಕಡೆ ಎಷ್ಟಾಗ ಬಹುದು ಎಂಬುದನ್ನು ಯೋಚನೆ ಮಾಡಬೇಕು. ಸಹಕಾರ ಸಂಘಗಳು ಕೂಡ ಅನೇಕ ಪ್ರಭಾವಗಳಿಗೊಳಗಾಗಿ ಈ ದಿವಸ ಎಷ್ಟುಮಟ್ಟಿಗೆ ಕೆಲಸ ಮಾಡುತ್ತೇವೆ ಎಂಬುದನ್ನು ಸಹ ಗಮನಿಸಬೇಕು, ಅವು ಸತ್ಯದಿಂದ ಕೆಲಸ ಮಾಡುತ್ತಿಲ್ಲ.

ಅನೇಕರು ಲಕ್ಷಗಟ್ಟಲೆ ಹಣವನ್ನು ಆಹಾರ ಇಲಾಖೆಯಿಂದ ತೆಗೆದುಕೊಂಡು ಭತ್ತ ಕೊಂಡು ಮಾರಿದ್ದಾರೆ. ಆದರೆ ಹೋಗಿ ನೋಡಿದಾಗ ಖಾಲಿ ಗೋಡೌನುಗಳನ್ನು ತೋರಿಸಿದ್ದಾರೆ. ಹೀಗೆ ಫುಡ್ ಕಾರ್ಪೊರೇಷನ್ ಕೊಟ್ಟ ಹಣವನ್ನು ಸೊಸೈಟಿಗಳವರು ತೆಗೆದುಕೊಂಡು ಅದನ್ನು ವ್ಯಾಪಾರದಲ್ಲಿ ತೊಡಗಿಸಿ ಲಾಭ ಸಂಪಾದನೆ ಮಾಡಿರುವರು, ಬತ್ತ ಶೇಖರಣೆ ಮಾಡಿಲ್ಲ. ಅವರ ಮೇಲೆ ಕ್ರಮ ಕೈಕೊಂಡಿರುವುದೇನು ? ಈ ಸಭೆಯಲ್ಲಿ ಹೀಗೆ ಅನ್ಯಾಯ ಮಾಡಿದ್ದಾರೆಂದು ಅನೇಕ ಸಲ ಹೇಳಿದ್ದೇವೆ. ಈ ದಿವಸ ಪ್ರಭಾವಕ್ಕೊಳಗಾಗಿ ಲಕ್ಷಗಟ್ಟಲೆ ಬಡವರ ಹಣವನ್ನು ಮನಬಂದ ಹಾಗೆ ಖರ್ಚು ಮಾಡುತ್ತಿದ್ದಾರೆ. ಇದರಿಂದ ಕೆಲವರು ಲಕ್ಷಗಟ್ಟಲೆ ಹಣ ಸಂಪಾದನೆ ಮಾಡುವುದಕ್ಕೆ ಅವಕಾಶವಾಗಿ ಹಣದ ಉಬ್ಬರಕ್ಕೆ ಕಾರಣವಾಗಿದೆ, ಬೆಲೆಗಳು ಗಗನಕ್ಕೇರಿವೆ. ಬೆಲೆ ಹತೋಟಿಯಲ್ಲಿಲ್ಲ, ಒಂದು ಕಡೆ ಸರಕಾರ ಕಂಟ್ರೋಲ್ ದರದಲ್ಲಿ ಮಾರುತ್ತಿದೆ, ಮತ್ತೊಂದು ಕಡೆ ಅಂಗಡಿಗಳಲ್ಲಿ ಮನಸ್ಸಿಗೆ ಬಂದ ದರದಲ್ಲಿ ಮಾರಾಟವಾಗುತ್ತಿದೆ. ಸರಕಾರ 92 ಪೈಸೆಗೆ ಒಂದು ಕೆ.ಜಿ.ಯಂತೆ ಕೊಡುವುದು, ಇನ್ನೊಂದು ಕಡೆ ಕೆ.ಜಿ.ಗೆ. ಒಂದೂವರೆ ರೂಪಾಯಿನಂತೆ ಮಾರಾಟ ಮಾಡುವುದು—ಈ ರೀತಿ ಇದೆ. ಸರಕಾರ ಒಬ್ಬರಿಗೆ ತಿಂಗಳಿಗೆ ಎರಡು ಕೆ.ಜಿ.ಯೋ ಏನೋ ಕೊಡುತ್ತದೆ. ಇದು ಗೊಂದಲಕ್ಕೆ ಕಾರಣವಾಗಿದೆ, ನ್ಯಾಯಕ್ಕೆ, ನೀತಿಗೆ ದೇಶದಲ್ಲಿ ಮನ್ನಣೆ ಇಲ್ಲ. ಇದರಿಂದ ಕೆಲವರು ಎಷ್ಟು ಬೇಕಾದರೂ ಸಂಪಾದಿಸಲು ಅವಕಾಶವಿದೆ. ಬೆಲೆ ಹತೋಟಿಯಲ್ಲಿ ಇಲ್ಲ, ಒಂದು ರೀತಿಯಲ್ಲಿ ಲೀಗಲೈಸ್ಡ್ ಬ್ಲಾಕ್ ಮಾರ್ಕೆಟಿಂಗ್ ನಡೆಯುತ್ತಿದೆ. ಎಷ್ಟಕ್ಕೆ ಬೇಕಾದರೂ ಮಾರಬಹುದು. ನ್ಯಾಯವಾದ ಬೆಲೆಗೆ ಎರಡು ಕೆ.ಜಿ. ಮಾತ್ರ ಕೊಡುತ್ತಾರೆ, ಹೆಚ್ಚಿಗೆ ಬೇಕಾದ್ದನ್ನು ಹೆಚ್ಚು ಬೆಲೆ ಕೊಟ್ಟು ತೆಗೆದುಕೊಳ್ಳಬೇಕು. ಈ ರೀತಿ ಅನ್ಯಾಯ ಪರಂಪರೆ ದೇಶದಲ್ಲಿ ಬೆಳೆಯುತ್ತಿದೆ. ಇದಿರಬಾರದು, ಇದಿರುವವರೆಗೂ ಆಹಾರ ಸಮಸ್ಯೆ ಪರಿಹಾರವಾಗುವುದಿಲ್ಲ. ಹಂಚಿಕೆ ವ್ಯವಸ್ಥೆ ಕಟ್ಟುನಿಟ್ಟಾಗಿಲ್ಲದಿದ್ದರೆ ಬೆಲೆ ಏರಿ ಜನತೆ ಬಹಳ ಕಷ್ಟಪಡಬೇಕಾಗುತ್ತದೆ ; ಬೆಲೆ ಹಿಡಿತದಲ್ಲಿಡುವುದಕ್ಕೆ ಸಾಧ್ಯವಾಗುವುದಿಲ್ಲ. ಸರಕಾರದವರು ನಿಶ್ಶಕ್ತರಾಗಿ ಬೆಲೆ ಹತೋಟಿಯಲ್ಲಿಡಲು ಕೈಲಾಗದೆ ಏರುವುದಕ್ಕೆ ಅವಕಾಶ ಮಾಡಿದ್ದಾರೆ. ಹಳ್ಳಿಗರ ಸ್ಥಿತಿ ಬಹಳ ಕಷ್ಟದಲ್ಲಿದೆ, ಅವರ ಹತ್ತಿರ ಹಣವಿಲ್ಲ. ಹೊಟ್ಟೆ ತುಂಬ ತಿನ್ನಲು ಆಹಾರವಿಲ್ಲ. ಕೊಳ್ಳಬೇಕಾದರೆ ಹಿಂದೆ ಕೊಡುತ್ತಿದ್ದ ದರ ಎರಡರಷ್ಟು ಬೆಲೆ ಕೊಡಬೇಕು, ಒಂದು ಕಿಲೋ ಅಕ್ಕಿಗೆ ರೂ. 1-50 ಕೊಡಬೇಕಾಗಿದೆ. ಸಂಪಾದನೆ, ಸಂಬಳ ಹೆಚ್ಚದೆ ಒಂದೇ ರೀತಿಯಲ್ಲಿದೆ. ಆಹಾರ ಧಾನ್ಯಗಳ ಬೆಲೆ ಒಂದಕ್ಕೆ ಮೂರರಷ್ಟು ಹೆಚ್ಚಿರುವಾಗ ಹೊಟ್ಟೆ ತುಂಬಿಸಿಕೊಳ್ಳುವುದು ಹೇಗೆ? ಸರಕಾರದವರು ಈ ಸಮಸ್ಯೆಯನ್ನು ಬಗೆಹರಿಸಲು ನಿಶಕ್ತರಾಗಿದ್ದಾರೆ. ಬೆಲೆ ಹತೋಟಿ ಮಾಡಬೇಕಾದರೆ ಸರಕಾರ ಮುಂದೆ ಬಂದು ಎಲ್ಲಾ ವಹಿವಾಟನ್ನೂ ಅದೇ ವಹಿಸಿಕೊಳ್ಳಬೇಕು ; ಇಡೀ ಆಹಾರದ ವ್ಯಾಪಾರ ಸರಕಾರದ ಹತೋಟಿಯಲ್ಲೇ ಇರಬೇಕು, ಶೇಖರಣೆ, ಹಂಚಿಕೆ ಕೊನೆಯವರೆಗೂ ಸರಕಾರವೇ ವಹಿಸಿಕೊಂಡರೆ ಅನುಕೂಲವಾಗಲು ಸಾಧ್ಯವಿಲ್ಲ. ಒಂದು ಕಡೆ ಒಂದು ನೀತಿ, ಮತ್ತೊಂದು ಕಡೆ ಮತ್ತೊಂದು ನೀತಿ ಅನುಸರಿಸದೆ ಬೆಲೆ ನಿಗದಿ ಮಾಡಿ ಒಂದೇ ಸಮನಾಗಿ ಹಾಗೆ ಮಾಡದಿದ್ದರೆ ಹಂಚುವುದಕ್ಕಾಗುವುದಿಲ್ಲ.

ಬೆಂಗಳೂರು ನಗರದಲ್ಲಿ ಎಂಟು ಕೆ.ಜಿ. ಆಹಾರವನ್ನು ಕೊಡಲು ಏರ್ಪಾಡು ಮಾಡುತ್ತೇವೆಂದು ಹೇಳಿದ್ದಾರೆ. ಹಳ್ಳಿಗಳಿಗೆ ಐದು ಕೆ.ಜಿ. ಕೊಡುವ ಏರ್ಪಾಡು ಮಾಡುತ್ತೇವೆಂದು ಹೇಳಿದ್ದಾರೆ. ಹಳ್ಳಿಗಳಲ್ಲಿ ಓಪನ್ ಮಾರ್ಕೆಟ್ಟಿನಲ್ಲಿ ಕೊಳ್ಳಬಹುದೆಂದು ಅಲ್ಲಿಗೆ ಕಡಮೆ ಒದಗಿಸಬಹುದು. ಆದರೆ ಇದು ಯಾವ ನ್ಯಾಯ ? ಐದು ಸಾವಿರ ಜನಸಂಖ್ಯೆಗೆ ಮೇಲ್ಪಟ್ಟು ಇರತಕ್ಕಂಥ ಹಳ್ಳಿಗಳಿಗೆ ಇನ್‌ಫಾರ್ಮಲ್ ರೇಶನಿಂಗ್ ವ್ಯವಸ್ಥೆ ಮಾಡುತ್ತೇವೆಂದು ಹೇಳಿದರು. ನಮ್ಮ ಮೈಸೂರು ದೇಶದಲ್ಲಿ ಶೇಕಡ ಎಂಭತ್ತರಷ್ಟು ಭಾಗ ಜನ ಹಳ್ಳಿಗಳಲ್ಲಿ ಇದ್ದಾರೆ. ನಮ್ಮ ರಾಜ್ಯದಲ್ಲಿ 27,000 ಹಳ್ಳಿಗಳಿವೆ. ಐದು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರತಕ್ಕ ಹಳ್ಳಿಗಳು ಎಷ್ಟು ಇವೆ ? ನಾನು ಹೇಳುವುದೇನೆಂದರೆ, ಹಳ್ಳಿಗಳಲ್ಲಿ ಇರತಕ್ಕಂಥ ಶೇಕಡ ಎಂಭತ್ತರಷ್ಟು ಜನ ಈ ಇನ್‌ಫಾರ್ಮಲ್ ರೇಶನಿಂಗ್ ಆಡಳಿತಕ್ಕೆ ಒಳಪಡದೇ ಅವರು ಹೊರಗೆ ಇರುತ್ತಾರೆ. ಸರಕಾರ ಈ ನೀತಿ ಅನುಸರಿಸುವುದರಿಂದ ಶೇಕಡ 80 ರಷ್ಟು ಜನಕ್ಕೆ ಅನುಕೂಲತೆ ಸಿಕ್ಕುವುದಿಲ್ಲ, ಇದರಿಂದ ಅವರಿಗೆ ತೊಂದರೆಯಾಗುತ್ತದೆ. ಸರಕಾರದ ಆಹಾರ ಹಂಚಿಕೆ ವ್ಯವಸ್ಥೆ ಯಶಸ್ವಿಯಾಗಬೇಕಾದರೆ ನಮ್ಮ ಭಾರತ ದೇಶ ಒಂದು ಯುನಿಟ್ಟಾಗಿ ಪರಿಗಣಿಸಬೇಕು. ಜೋನಲ್ ಸಿಸ್ಟಂ (Zonal System) ಮಾಡದೆ ಎಲ್ಲ ರಾಜ್ಯಗಳೂ ಸೇರಿ ಒಂದು ಯೂನಿಟ್ ಮಾಡಿ ವ್ಯವಸ್ಥೆ ಮಾಡದೇ ಇದ್ದರೆ ಸಮಗ್ರವಾಗಿ ಈ ಆಹಾರ ಹಂಚಿಕೆ ನೀತಿಯನ್ನು ಯಶಸ್ವಿಯಾಗಿ ಜಾರಿಗೆ ತರಲು ಸಾಧ್ಯವಿಲ್ಲ. ಕೇಂದ್ರ ಸರಕಾರದ ಮೇಲೆ ನೀವು ಪ್ರಭಾವ ಬೀರಿ ದಕ್ಷಿಣ ಇಂಡಿಯಾದ ಎಲ್ಲ ರಾಜ್ಯಗಳಿಗೆ ಒಂದೇ ಒಂದು ಜೋನು ಇರುವುದಕ್ಕೆ ಪ್ರಯತ್ನ ಮಾಡಬೇಕು. ನಿಮಗೆ ಕೇಂದ್ರದ ಮೇಲೆ ಪ್ರಭಾವ ಬೀರುವ ಶಕ್ತಿ ಇದೆಯೋ ಇಲ್ಲವೇ ಎಂಬುದು ಈ ಯೋಜನೆ ಎಷ್ಟರ ಮಟ್ಟಿಗೆ ಕಾರ್ಯಗತವಾಗುತ್ತದೆ ಎಂಬುದರ ಮೇಲೆ ಇದೆ. ಅನೇಕ ಸಲ ನಮ್ಮ ರಾಜ್ಯದವರು ಮಂತ್ರಿಗಳು ದಾನಶೂರಕರ್ಣ ಆಗುತ್ತಾರೆ. ಹೇರಳವಾಗಿ ವಿದ್ಯುತ್ ಶಕ್ತಿ ಇದೆ ಎಂದು ದಕ್ಷಿಣ ವಲಯಕ್ಕೆಲ್ಲಾ ವಿದ್ಯುತ್ ಶಕ್ತಿ ಕೊಡುತ್ತೇವೆಂದು ದಾನಶೂರ ಕರ್ಣನಂತೆ ಒಪ್ಪಿಕೊಂಡುಬಿಟ್ಟಿರಿ. ಅಕ್ಕಿಯ ವಿಚಾರದಲ್ಲಿ ದಕ್ಷಿಣ ಭಾರತಕ್ಕೆ ಒಂದೇ ಜೋನು ಇರತಕ್ಕದ್ದು ಎಂದು ಏತಕ್ಕೆ ಪ್ರತಿಪಾದನೆ ಮಾಡಲಿಲ್ಲ ? ನಿಮ್ಮ ಹತ್ತರ ಏನಾದರೂ ಇದ್ದರೆ ಅದನ್ನು ಕಸಿದುಕೊಳ್ಳುತ್ತಾರೆ. ಇಂಥ ಸಂದರ್ಭದಲ್ಲಿ ಏನು ಮಾಡಬೇಕು ಹೇಗೆ ಮಾಡಬೇಕು ಗೊತ್ತಾಗುವುದಿಲ್ಲವೇ ? ಕೇಂದ್ರದ ಮೇಲೆ ಪ್ರಭಾವ ಬೀರತಕ್ಕಂಥ ಶಕ್ತಿ ಧಾತಿ ನಿಮಗೆ ಇರಬೇಕು. ಅಂಥ ಸಾಮರ್ಥ್ಯವನ್ನು ಮೈಸೂರು ದೇಶ ಪಡೆಯಬೇಕು. ಅಕ್ಕಿಯ ವಲಯದ ವಿಚಾರದಲ್ಲಿ ದಕ್ಷಿಣ ಭಾರತಕ್ಕೆ ಒಂದೇ ಒಂದು ಯೂನಿಟ್ ಮಾಡದೇ ಇದ್ದರೆ ಜನರಿಗೆ ಅಕ್ಕಿ ಸಿಕ್ಕುವುದಿಲ್ಲ. ಜನ ಸಾಯುವಂಥ ಪರಿಸ್ಥಿತಿ ಬರುತ್ತದೆ ಎಂದು ಹೇಳುತ್ತೇನೆ. ಆದುದರಿಂದ ನೀವು ಪ್ರಭಾವವಂತರಾಗಿ ದಕ್ಷಿಣ ಭಾರತಕ್ಕೆ ಅಕ್ಕಿಯ ವಿಚಾರದಲ್ಲಿ ಒಂದೇ ಯೂನಿಟ್ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಆಹಾರದ ಬಗ್ಗೆ ನೀವು ಮಾಡಿದ ಕೆಲಸ ಏನು ಅಂದರೆ ಜನತೆಯ ಮುಂದೆ ಅನೇಕ ಸ್ಲೋಗನ್ಸ್ ಇಟ್ಟಿದ್ದೀರಿ. ಸೋಮವಾರ ಸಾಯಂಕಾಲ ಒಂದು ಊಟ ಬಿಡಿ. ತರಕಾರಿ ಹಣ್ಣು ಜಾಸ್ತಿ ತಿನ್ನಿ. ಇಂಥ ಸ್ಲೋಗನ್ಸ್‌ನಿಂದ ಏನು ಪ್ರಯೋಜನ ಹೇಳಿ. ಮಂತ್ರಿಗಳಾದವರು ತಾವೇ ಸ್ವತಃ ಆಚರಣೆ ಮಾಡುತ್ತಿಲ್ಲ. ಕಾರವಾರ ಜಿಲ್ಲೆಯಲ್ಲಿ ಒಂದು ಸೋಮವಾರ ರಾತ್ರಿ ಮಂತ್ರಿಗಳು ಟ್ರಾವಲರ್ಸ್ ಬಂಗಲೋನಲ್ಲಿ ಭವ್ಯ ಭೋಜನ ಸುಖಲೋಲುಪರಾಗಿ ಮಾಡಿದರು ಎಂಬ ಸಮಾಚಾರವನ್ನು ಪತ್ರಿಕೆಯಲ್ಲಿ ಓದಿದ್ದೇನೆ. ತಾವೇ ಸ್ವತಃ ಮಂತ್ರಿಗಳು ಕಾರ್ಯಗತ ಮಾಡದೇ ಇದ್ದರೆ ಏನು ಪರಿಣಾಮವಾಗುತ್ತದೆ ಎಂದು ಅವರನ್ನು ಕೇಳುತ್ತೇನೆ. ದಸರಾ ಹಬ್ಬ ಆಚರಿಸುವುದು ಬೇಡ, ಪ್ರದರ್ಶನ ಬೇಡ ಮೆರವಣಿಗೆ ಬೇಡ ಎಂದು ಹೋದ ವರ್ಷ ನಿಲ್ಲಿಸಿದ್ದೀರಿ. ಆದರೆ ನಿಮ್ಮ ವರ್ಧಂತಿ ಉತ್ಸವ ಸರಾಗವಾಗಿ ನಡೆಯುತ್ತಿದೆ. ವರ್ಧಂತಿ ಉತ್ಸವದ ದಿನ ಕೇಕ್ ಕತ್ತರಿಸುವ ಸಮಾರಂಭ ನಡೆಯಿತು. ಈ ವರ್ಷ ಕಾಂಗ್ರೆಸ್ ವಸ್ತು ಪ್ರದರ್ಶನ ಜರುಗುವುದು ನಿಲ್ಲಲಿಲ್ಲ. ನಿಮ್ಮ ಭೋಗಕ್ಕೆ ಏನೇನು ಬೇಕೋ ಅದೆಲ್ಲವೂ ನಡೆಯಬೇಕು. ನಿಮ್ಮ ವರ್ಧಂತಿ ಉತ್ಸವ ನಿಂತು ಹೋಯಿತೇ ? ಪುನಃ ಈ ವರ್ಷ ವರ್ಧಂತಿ ಉತ್ಸವ ಮಾಡುವುದಕ್ಕೆ ಸನ್ನಾಹ ಮಾಡುತ್ತಿದ್ದಾರೆ. ಇದು ಯಾವ ನೀತಿ ? ನಿಮ್ಮ ನೆನಪಿಗೆ ಒಂದು ವಿಷಯ ತಂದುಕೊಡುತ್ತೇನೆ. ಹಿಂದಕ್ಕೆ ಆಹಾರವಿಲ್ಲದೆ ಫ್ರೆಂಚ್ ದೇಶದಲ್ಲಿ ಒಂದು ಕ್ರಾಂತಿ ಆಯಿತು. ಜನರು ಹೊಟ್ಟೆಗೆ ಅನ್ನ ಕೊಡಿ ಬ್ರೆಡ್ ಕೊಡಿ ಮೊಟ್ಟೆ ಕೊಡಿ ಎಂದು ಹೇಳುತ್ತಾ ಜನರು ಚಕ್ರವರ್ತಿಯ ಕಡೆಗೆ ಹೋದರು. ಆಗ್ಗೆ ಅಲ್ಲಿ ಇದ್ದ ರಾಣಿ ಕೇಳಿದಳು, ಈ ಜನ ಇಲ್ಲಿ ಏತಕ್ಕೆ ಬಂದಿದ್ದಾರೆ ಎಂದು. "There is no bread to eat" ಎಂದು ಹೇಳಿದರು. ಆಗ್ಗೆ ಚಕ್ರವರ್ತಿಯ ರಾಣಿ "if there is no bread, why there did not eat cakes ?" ಎಂದು ಕೇಳಿದಳು ಬ್ರೆಡ್ ಇಲ್ಲದಿದ್ದರೆ ಕೇಕ್ ತಿನ್ನಿ ಎಂದು ಹೇಳುವುದೇ ? ಹೊಟ್ಟೆಗೆ ಅನ್ನ ಇಲ್ಲ ಎಂದು ಜನ ಹೇಳಿದರೆ ಹಣ್ಣು ತಿನ್ನಿ ತರಕಾರಿ ತಿನ್ನಿ ಕೋಳಿ ಮೊಟ್ಟೆ ತಿನ್ನಿ ಎಂದು ಮಂತ್ರಿಗಳು ಹೇಳುತ್ತಾರೆ. ಈ ರೀತಿ ಹೇಳುವುದರಿಂದ ದೇಶದಲ್ಲಿಯ ಆಹಾರ ಸಮಸ್ಯೆ ಬಗೆಹರಿಯುತ್ತದೆಯೇ ? ಒಂದು ಮಾತನ್ನು ದೀರ್ಘವಾಗಿ, ಆಳವಾಗಿ ವಿಚಾರ ಮಾಡಿ. ಹಸಿವಿನ ಕ್ರಾಂತಿ,

(ಶ್ರೀ ಎಸ್. ಶಿವಪ್ಪ)

ಉಪವಾಸದ ಕ್ರಾಂತಿ ಫ್ರೆಂಚ್ ದೇಶದಲ್ಲಿ ಆದ ಹಾಗೆ ನಮ್ಮ ದೇಶದಲ್ಲಿಯೂ ಕೂಡ ಆಗುತ್ತದೆ. ಈ ಹಸಿವಿನ ಕ್ರಾಂತಿ ಚಕ್ರವರ್ತಿಯೇ ಇರಲಿ ಎಂಥವರನ್ನೂ ಬಿಡುವುದಿಲ್ಲ. ನಿಮ್ಮ ಹೇಳಿಕೆ ಮತ್ತು ಮಾತುಗಳಿಗೂ ಕೃತಿಗೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ನಿಮ್ಮ ಅಂತರಂಗವನ್ನು ಪರೀಕ್ಷೆ ಮಾಡಿಕೊಂಡು ನೋಡಿ. ನೀವು ಹೇಳುವುದನ್ನು ಸರಿಯಾಗಿ ಪರಿಪಾಲನೆ ಮಾಡಿಕೊಂಡು ಬರುತ್ತೀರಾ, ಪರೀಕ್ಷೆ ಮಾಡಿ. ಎರಡನೇ ಮಹಾಯುದ್ಧ ಕಾಲದಲ್ಲಿ ರೇಶನಿಂಗ್ ಪದ್ಧತಿ ಜಾರಿಗೆ ಬಂದಾಗ್ಗೆ ಇಂಗ್ಲೆಂಡಿನಲ್ಲಿ ಸರ್ ಕ್ರಾಫರ್ಡ್ ಕ್ರಿಪ್ಸ್ ಅವರು ಸಾಮಾನ್ಯ ಜನರೊಂದಿಗೆ ಕ್ಯೂನಲ್ಲಿ ನಿಂತು ತಮ್ಮ ಸರದಿ ಬಂದಾಗ್ಗೆ ರೇಶನ್ ತೆಗೆದುಕೊಂಡು ಹೋಗುತ್ತಿದ್ದ ದೃಶ್ಯದ ವರ್ಣನೆಯನ್ನು ಪೇಪರಿನಲ್ಲಿ ನಾನು ಓದಿದ್ದೇನೆ. ನಮ್ಮಲ್ಲಿ ಎಷ್ಟು ಜನ ಮಂತ್ರಿಗಳು ಆ ರೀತಿ ಮಾಡುತ್ತಾರೆ? ಇಲ್ಲಿಯ ಮಂತ್ರಿಗಳಿಗೆ ಯಾವ ಕಾನೂನು ನಿಯಮ ಅನ್ವಯವಾಗುವುದಿಲ್ಲ. ನೀವು ಸುಖಲೋಲುಪ ರಾಗಿದ್ದೀರಿ. ಬರೀ ಭೋಗಾಪೇಕ್ಷೆಯುಳ್ಳವರಾಗಿದ್ದೀರಿ. ಹಳ್ಳಿಗಳ ಕಡೆಗೆ ಹೋಗಿ ಜನ ಏನು ಮಾಡುತ್ತಿದ್ದಾರೆ ಎಂಬುದನ್ನು ನೋಡಿಕೊಂಡು ಬರಬೇಕು ಎಂದು ಹೇಳುತ್ತೇನೆ. ಇಂದು ಹಸಿದ ಹೊಟ್ಟೆಗೆ ಒಂದರ್ಧ ಸೇರು ಅಕ್ಕಿ ಬೇಕು ಎಂದು ಬಡವರು ಗೋವುಗಳನ್ನು ಮಾರುತ್ತಿದ್ದಾರೆ. ಜೀವಧಾರಣೆ ಮಾಡುವುದಕ್ಕಾಗಿ ಒಂದು ಕೆ.ಜಿ. ರಾಗಿ ತಂದು ತಿನ್ನುತ್ತಿದ್ದಾರೆ. ಅನೇಕರು ದನ ಗಳಿಗೆ ಮೇವು ಇಲ್ಲದೆ ಸೊಪ್ಪು ಹಾಕುತ್ತಿದ್ದಾರೆ. ಕಡಿಮೆ ಬೆಲೆಗೆ ದನಗಳನ್ನು ಮಾರಿಕೊಳ್ಳು ತ್ತಿದ್ದಾರೆ. ಕಟುಕರು ಸಾವಿರಾರು ದನಗಳನ್ನು ಗೋವುಗಳನ್ನು ಕೊಂಡುಕೊಂಡು ಒಯ್ಯು ತ್ತಿದ್ದಾರೆ. ದೇಶದಲ್ಲಿಯ ಗೋ ಸಂಪತ್ತು ನಾಶವಾಗಿ ಹೋಗುತ್ತಿದೆ. ಜನರಿಗೆ ದನಗಳಿಗೆ ಕುಡಿಯುವುದಕ್ಕೆ ನೀರು ಸಹ ಇಲ್ಲ. ಕ್ಷಾಮ ಪೀಡಿತ ಅನೇಕ ಗ್ರಾಮಗಳಲ್ಲಿ ಒಂದು ಕೊಡ ಕುಡಿಯುವ ನೀರನ್ನು ಎರಡಾಣೆ ನಾಲ್ಕಾಣೆಯಂತೆ ಮಾರುತ್ತಿದ್ದಾರೆ. ಕುಡಿಯುವ ನೀರನ್ನು ಕೊಂಡು ಜೀವನ ಸಾಗಿಸಬೇಕು ಎಂದರೆ ಎಂಥ ಕ್ರೂರ, ಎಂಥ ಘೋರ ಪರಿಸ್ಥಿತಿ ಬಂದಿದೆ! ಇಂಥ ಕಠಿಣ ಪರಿಸ್ಥಿತಿ ಪರಿಹಾರ ಮಾಡುವ ಶಕ್ತಿ ಸರಕಾರಕ್ಕೆ ಇದೆಯೇ! ಇದುವರೆಗೆ ನಮ್ಮ ದೇಶದಲ್ಲಿ ನಿಮ್ಮ ಪಕ್ಷವು 18 ವರ್ಷ ರಾಜ್ಯದಾಡಳಿತ ಮಾಡಿದರೂ ಕೂಡ ಒಂದು ಕ್ಷಾಮ ತಡೆಗಟ್ಟುವ ಶಕ್ತಿ ಸರಕಾರಕ್ಕೆ ಇಲ್ಲ. ನಿಮ್ಮ ಸರಕಾರಕ್ಕೆ ಒಂದು ಸರಿಯಾದ ತಳಹದಿ ಇಲ್ಲ. ಬರೀ ಗಾಳಿಯಲ್ಲಿ ಇರ ತಕ್ಕಂಥ ಸರಕಾರ ಆಗಿದೆ. ಆದುದರಿಂದ ಕ್ಷಾಮ ತಡೆಗಟ್ಟತಕ್ಕಂಥ ಶಕ್ತಿಯನ್ನು ಸರಕಾರ ಕಳೆದು ಕೊಂಡಿದೆ. ಅಮೇರಿಕಾ ದೇಶದಿಂದ ಗೋಧಿ ತರಿಸಿ ಕೊಡುತ್ತೇವೆ ಅದನ್ನು ತಿನ್ನಬಹುದು ಎಂದು ಹೇಳುತ್ತೀರಿ. ಅಮೇರಿಕಾದ ಅಧ್ಯಕ್ಷ ಜಾನ್‌ಸನ್ ಮಹಾರಾಯರು ಗೋಧಿ ಕೊಟ್ಟಿದ್ದಾರೆ. ಆ ಗೋಧಿ ಎಷ್ಟರ ಮಟ್ಟಿಗೆ ನಾವು ತಿಂದು ಜೀವನ ಮಾಡಬಹುದು? ನಮಗೆ ಬೇಕಾದುದು ರಾಗಿ. ರಾಗಿ ಕೊಟ್ಟರೆ ಜನ ಅದನ್ನು ತಿನ್ನುತ್ತಾರೆ. ಬರೀ ಗೋಧಿ ತಿನ್ನುವವರು ಅದರ ಜೊತೆಗೆ ತರಕಾರಿ ತುಪ್ಪ ತಿನ್ನಬೇಕಾಗುತ್ತದೆ. ರಾಗಿಯ ಹಾಗೆ ಗೋಧಿಯನ್ನು ಜೀರ್ಣ ಮಾಡತಕ್ಕ ಶಕ್ತಿ ಜನರಲ್ಲಿ ಇಲ್ಲ. ಬಡ ಜನರ ಬದಲು ನೀವು ಹೆಚ್ಚು ಪ್ರಮಾಣದಲ್ಲಿ ಗೋಧಿ ತೆಗೆದುಕೊಳ್ಳಿರಿ. ಹಣ್ಣು, ತರಕಾರಿ, ತುಪ್ಪ, ಕೊಂಡು ತಿನ್ನುವ ಶಕ್ತಿ ಮೇಲಿನ ವರ್ಗದ ಜನರಿಗೆ ಇದೆ. ಅಂಥವರಿಗೆ ಗೋಧಿ ಕೊಡಿ. ಹಳ್ಳಿಗಳಲ್ಲಿ ರೈತನಿಗೆ ಅಕ್ಕಿ ಕೊಡಿ, ರಾಗಿ ಕೊಡಿ. ಶ್ರೀಮಂತ ವರ್ಗದವರಿಗೆ ಗೋಧಿ ಹಂಚಬೇಕು. ಇದಕ್ಕೆ ಸರಕಾರ ಗಮನ ಕೊಡಬೇಕು.

ಕೊನೆಯದಾಗಿ ಒಂದು ಮಾತು ಹೇಳುವುದೇನೆಂದರೆ, ಇಂದು ದೇಶದಲ್ಲಿ ಘೋರ ಪರಿಸ್ಥಿತಿ ಇದೆ. ಆಹಾರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನೀವು ಪೂರ್ಣವಾಗಿ ಅಸಮರ್ಥರಾಗಿದ್ದೀರಿ. ನಿಮ್ಮ ಕೈಯಲ್ಲಿ ಇದನ್ನು ಬಗೆಹರಿಸುವುದು ಸಾಧ್ಯವಿಲ್ಲ. ಲಂಚಖೋರ ಅಧಿಕಾರ ವರ್ಗದಿಂದ ಆಹಾರ ವ್ಯವಸ್ಥೆ ಮಾಡುವುದು ಸಾಧ್ಯವಿಲ್ಲ. ಇದನ್ನು ನಾನು ನಿಮಗೆ ಹೇಳಬೇಕಾಗಿದೆ. ಕೋ-ಆಪರೇಟಿವ್ ಸೊಸೈಟಿ ಮೂಲಕ ಯಾವ ಧಾನ್ಯವೇ ಆಗಲಿ ಜನ ಸಾಮಾನ್ಯಕ್ಕೆ ನೀವು ಸರಿಯಾಗಿ ಕೊಡುವುದಿಲ್ಲ. ಸೊಸೈಟಿಗಳಿಗೆ ಬರತಕ್ಕ ಆಹಾರ ಧಾನ್ಯದಲ್ಲಿ ಸೇಕಡ 50 ರಷ್ಟು ಎಲ್ಲಿಯೋ ಹೋಗುತ್ತದೆ. ಸೇಕಡ 20 ರಷ್ಟು 30 ರಷ್ಟು ಹಳ್ಳಿಗರಿಗೆ ಸೇರುತ್ತದೆ. ಅಲ್ಲಿಯೂ ಕೂಡ ಖದೀಮರು ಇದ್ದಾರೆ. ಅವರ ಕೈಯಲ್ಲಿ ಈ ವ್ಯವಹಾರ ನಡೆಯುತ್ತಿದೆ. ಈ ವ್ಯವಸ್ಥೆಯಲ್ಲಿ ಇಷ್ಟು ಲೋಪದೋಷಗಳು ಇರುವಾಗ ಇಂಥವರ ಕೈಯಲ್ಲಿ ಅಡ್ಮಿನಿಸ್ಟ್ರೇಷನ್ ಇರುವಾಗ 20 ಲಕ್ಷ ಟನ್ ಆಹಾರ ಹೇಗೆ ಹಂಚುತ್ತೀರಿ? ಈ ವ್ಯವಸ್ಥೆ ಇಂಥ ಅಧಿಕಾರ ವರ್ಗದವರ ಕೈಯಲ್ಲಿ ಇದೆ.

3-00 P.M.

ಇವತ್ತಿನ ದಿವಸ ಕೇಂದ್ರ ಸರ್ಕಾರದವರು ನಮ್ಮ ಸರ್ಕಾರಕ್ಕೆ ಕೊಟ್ಟಿರುವ 20 ಲಕ್ಷ ಟನ್ ಆಹಾರ ಧಾನ್ಯವನ್ನು ತಾವು ಯಾವ ರೀತಿ ಹಂಚುತ್ತೀರಿ ಎಂದು ಕೇಳುತ್ತೇನೆ. ಪ್ರತಿಯೊಂದು

ಪಂಚಾಯಿತಿ ಕೇಂದ್ರದಲ್ಲೂ ಸರ್ಕಾರದವರು ಒಂದೊಂದು ಫೇರ್‌ಪ್ರೈಸ್ ಡಿಪೋಗಳನ್ನು ತೆರೆಯುವುದು ಒಳ್ಳೆಯದು ಎಂದು ಹೇಳಿದೆ. ಅದರ ಬಗ್ಗೆ ಏನೊಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ನಾನಾದರೂ ಹೇಳುತ್ತೇನೆ, ಕೆಲವು ಸೊಸೈಟಿಗಳಲ್ಲಿ ಸರಿಯಾದ ಲೆಕ್ಕವಿಲ್ಲ. ಹಣವಿಲ್ಲ. ಕೆಲವು ಕಡೆ ತಿಂದುಬಿಟ್ಟಿದ್ದಾರೆ. ನೀವು ಸೊಸೈಟಿಗಳ ಮುಖಾಂತರ ಏನು ಒಂದು ಆಹಾರವನ್ನು ಹಂಚುವ ಪದ್ಧತಿ ತಂದಿದ್ದೀರಿ ಅದು ವಿಫಲವಾಗಿದೆ, ಸರಿಯಾಗಿ ನಡೆಯುತ್ತಿಲ್ಲ. ಈ ರೀತಿಯಾದರೆ ಜನಗಳಿಗೆ ಆಹಾರ ಸಿಗುವುದಿಲ್ಲ. ಜನರು ಅನ್ನವಿಲ್ಲದೆ ಹಸಿವಿನಿಂದ ನರಳುತ್ತಿದ್ದಾರೆ. ನೀವು ಹಂಚುವ ಆಹಾರವು ಜನಗಳಿಗೆ ಸರಿಯಾಗಿ ತಲಪದಿದ್ದರೆ, ಈಗಿರುವ ವ್ಯವಸ್ಥೆಯು ಮುರಿದು ಬೀಳುತ್ತದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಆಹಾರ ಸಚಿವರು ಜಾಣರು. ಯಾವ ಯಾವ ತಿಂಗಳಲ್ಲಿ ಎಷ್ಟೆಷ್ಟು ಆಹಾರವನ್ನು ಹಂಚುತ್ತೇವೆ ಎನ್ನುವುದನ್ನು ಬಹಳ ಕಷ್ಟದಿಂದ ಲೆಕ್ಕ ಹಾಕಿ ಹೇಳಿದ್ದಾರೆ. ಆಹಾರಧಾನ್ಯವನ್ನು ಸರಿಯಾಗಿ ಹಂಚಬೇಕಾದರೆ ನಿಮ್ಮಲ್ಲಿ ಒಂದು ಸರಿಯಾದ ಅಡ್ಮಿನಿಸ್ಟ್ರೇಟಿವ್ ಸೆಟ್-ಅಪ್ ಬೇಕು. ಹಂಚಿಗೆ ಕೆಲಸವನ್ನು ನೀವು ಸರಿಯಾಗಿ ಮಾಡದಿದ್ದರೆ ಜನರು ಇನ್ನೂ ಹೆಚ್ಚಿನ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಆಗ ಜನಗಳು ನಿಮ್ಮನ್ನು ಅಡಳಿತದಿಂದ ಕೆಳಗೆ ಇಳಿಸುತ್ತಾರೆ. ಜನರು ಅನ್ನವಿಲ್ಲದೆ ಸಾಯುವ ಸ್ಥಿತಿ ಬಂದಿದೆಯೆಲ್ಲಾ ಎನ್ನುವ ಒಂದೇ ಒಂದು ಪ್ರಶ್ನೆ ನನಗೆ ಕಾಣಿಸುತ್ತಿದೆ.

ಕೊನೆಯದಾಗಿ ಹೇಳುವುದು ದೇಶದಲ್ಲಿ ಈ ಪರಿಸ್ಥಿತಿಯನ್ನು ತಂದಿರತಕ್ಕ ಕೀರ್ತಿ ಈ ಸರ್ಕಾರಕ್ಕೆ ಬಂದಿದೆ. ತಾವು ಹೇಳಬಹುದು, ಯಾರು ಬಂದರೆ ಏನು ಮಾಡುತ್ತಾರೆ ಎಂದು. ಈ ಪ್ರಶ್ನೆ ದೊಡ್ಡದು ಅಲ್ಲ, ಸಮಸ್ಯೆಯನ್ನು ಯಾವ ರೀತಿ ಎದುರಿಸಬೇಕು, ಎಷ್ಟರಮಟ್ಟಿಗೆ ಎದುರಿಸಬೇಕು ಎನ್ನುವುದು ಮಹಾ ಪ್ರಶ್ನೆ. ಮಹಾ ಸವಾಲು ನಿಮ್ಮ ಎದುರಿಗೆ ಇದೆ. ಈ ಸವಾಲನ್ನು ನೀವು ಇನ್ನು ಕೆಲವು ತಿಂಗಳುಗಳಲ್ಲಿ ಎದುರಿಸದೇ ಹೋದರೆ, ಜನತೆಯ ಸವಾಲನ್ನು ನೀವು ಎದುರಿಸಬೇಕಾಗುತ್ತದೆ. ಆಗ ಆ ಸವಾಲಿಗೆ ನೀವು ತುತ್ತಾಗಿ ಭಸ್ಮವಾಗಬೇಕಾಗುತ್ತದೆ. ಇದನ್ನು ತಪ್ಪಿಸಿಕೊಳ್ಳುವುದಕ್ಕಾದರೂ ಸಾಕಷ್ಟು ನಿಗ ವಹಿಸಿ ಪರಿಹಾರವನ್ನು ಕಂಡುಹಿಡಿಯಬೇಕು. ಇಲ್ಲದಿದ್ದರೆ ಖಂಡಿತವಾಗಿ ಭಸ್ಮವಾಗುತ್ತೀರಿ. ಒಟ್ಟಿನಲ್ಲಿ ಹೇಳುವುದಾದರೆ ಅನ್ನದೇವತೆಯ ಶಾಪ ನಮ್ಮ ರಾಜ್ಯಕ್ಕೆ ಬಂದಿದೆ. ತಮ್ಮ ಒಂದು ತಪ್ಪಿನ ಫಲವಾಗಿ, ಈ ಶಾಪ ಬಂದಿವೆ. ಈ ಶಾಪಕ್ಕೆ ನೀವೇ ಹೊಣೆ. ಇಷ್ಟು ಹೇಳಿ ಸರ್ಕಾರದವರು ತಂದಿರತಕ್ಕ ಈ ಬೇಡಿಕೆಯನ್ನು ನಾನು ವಿರೋಧಿಸುತ್ತೇನೆ.

† ಶ್ರೀ ಗಾಂಜಿವೀರಪ್ಪ (ಹರಿಹರ).—ಮಾನ್ಯ ಸಭಾಧ್ಯಕ್ಷರೇ, ಈ ಬೇಡಿಕೆಯ ಮೇಲೆ ನಾವು ಬೇಕಾದಷ್ಟು ಭಾಷಣ ಮಾಡಬಹುದು. ಏಕೆಂದರೆ, ದೇಶದಲ್ಲಿ ಈಗ ಸತತವಾಗಿ 3—4 ವರ್ಷದಿಂದ ಮಳೆ ಬಾರದೆ ಒಂದು ಕಠಿಣ ಪರಿಸ್ಥಿತಿ ಉಂಟಾಗಿದೆ. ಈ ರೀತಿಯಾಗಿರುವುದು ನಮ್ಮ ಮೈಸೂರು ರಾಜ್ಯದಲ್ಲೇ ಅಲ್ಲ, ಆಂಧ್ರ ಮತ್ತು ಮದ್ರಾಸ್ ರಾಜ್ಯಗಳನ್ನು ಬಿಟ್ಟರೆ, ಉತ್ತರ ಭಾಗದ ಮಹಾರಾಷ್ಟ್ರ, ಉತ್ತರಪ್ರದೇಶ, ರಾಜಸ್ಥಾನಗಳಲ್ಲೂ ಮಳೆ ಸರಿಯಾಗಿ ಆಗದೆ ಆಹಾರದ ಕೊರತೆ ಇದ್ದೇ ಇದೆ. ಇದರ ಒಂದು ಪರಿಣಾಮ ಧಾರಣೆವಾಸಿಗಳು ಬಹಳ ಜಾಸ್ತಿಯಾಗಿದೆ. ಸಾಕಷ್ಟು ಆಹಾರವನ್ನು ಬೆಳೆಯುತ್ತಿಲ್ಲ. ಈ ಕಾರಣದಿಂದ ಪರದೇಶದ ನೆರವನ್ನು ಪಡೆಯಲೇಬೇಕಾಗಿದೆ. ಇದಕ್ಕಾಗಿ ನೂರಾರು ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ಇಂತಹ ಒಂದು ಕಠಿಣ ಪರಿಸ್ಥಿತಿಯಲ್ಲಿ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ. ಈ ಸಭಾ ನಾಯಕರು ಕೆಲವು ಪ್ರಶ್ನೆಗಳನ್ನು ಕೇಳಿದಾಗ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಏನಾದರೂ ಸಲಹೆಗಳನ್ನು ಕೊಡುತಾರೆಯೇ ಎಂದು ಕಾತುರತೆಯಿಂದ ನೋಡುತ್ತಿದ್ದೆ. ಆದರೆ ಏನನ್ನೂ ಸಹ ಕೊಡಲಿಲ್ಲ. ನಾವುಗಳು ಪ್ರಜಾನಾಯಕರುಗಳಾಗಿ ಆರಿಸಿ ಬಂದಾಗ ನಮಗೆ ತಿಳಿದ ರೀತಿ ಏನಾದರೂ ಸಲಹೆಗಳನ್ನು ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಮುಖ್ಯಮಂತ್ರಿಗಳು ರಾಗಿಯನ್ನು ಎಲ್ಲಿಂದ ತಂದು ಹಂಚುವುದು ಎಂದು ಕೇಳಿದಾಗ ಯಾರೂ ಏನೂ ಹೇಳಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಒರಿಸ್ಸಾ, ಆಂಧ್ರ, ಮದ್ರಾಸಿನಿಂದ ರಾಗಿ ತಂದು ಹಂಚುವುದು.

ಶ್ರೀ ಗಾಂಜಿವೀರಪ್ಪ.—ಸಭಾ ನಾಯಕರು ಈ ಪ್ರಶ್ನೆ ಕೇಳಿದಾಗ ಶ್ರೀಮಾನ್ ರೇವಣಸಿದ್ದಪ್ಪನವರು ಮತ್ತು ವಿರೋಧಪಕ್ಷದ ನಾಯಕರು ಉತ್ತರ ಹೇಳಲಿಲ್ಲ. ಈಗ ಹೇಳುತ್ತಿದ್ದೀರಿ. ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಜವಾಬ್ದಾರಿ ಸ್ಥಾನದಲ್ಲಿದ್ದೇವೆಂದು ತಿಳಿದುಕೊಳ್ಳಬೇಕು. ಆಳುವ ಪಕ್ಷ ರಾಜೀನಾಮೆ ಕೊಟ್ಟರೆ, ದೇಶದಲ್ಲಿ ಈ ರೀತಿ ಪರಿಸ್ಥಿತಿ ಬಂದರೆ ವಿರೋಧ ಪಕ್ಷದ ನಾಯಕರು ಸರ್ಕಾರದ ಹೊಣೆಯನ್ನು ಹೊತ್ತುಕೊಳ್ಳುವ ಜವಾಬ್ದಾರಿ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಇರುತ್ತದೆ. ತಮಗೆ ರಾಜ್ಯವಾಳುವುದಕ್ಕೆ ಬರುವುದಿಲ್ಲ. ನಿಮ್ಮ ಪಾಲಿಸಿ ಚೆನ್ನಾಗಿ ಇಲ್ಲ. ನಿಮ್ಮ ಜಾಗದಿಂದ ಕೆಳಗೆ ಇಳಿಯಿರಿ ಎಂದು ಹೇಳುತ್ತೀರಿ. ಆದರೆ ಯಾವ ರೀತಿ ರಾಜ್ಯವಾಳಬೇಕು,

(ಶ್ರೀ ಗಾಂಜಿ ವೀರಪ್ಪ)

ಯಾವ ರೀತಿ ಆಹಾರವನ್ನು ಹಂಚಬೇಕು ಎಂದು ಸರ್ಕಾರಕ್ಕೆ ಸಲಹೆಯನ್ನು ಕೊಡಲಿಲ್ಲ. ಬರೀ ಟೀಕೆ ಮಾಡುವುದು ಸರಿಯಲ್ಲ. ಕೋ-ಆಪರೇಟಿವ್ ಸೊಸೈಟಿಗಳಿಗೆ ಆಹಾರವನ್ನು ಕೊಡುತ್ತೀರಿ, ಅವರು ಚೆನ್ನಾಗಿ ಕೆಲಸ ಮಾಡುವುದಿಲ್ಲ. ವರ್ತಕರಿಗೆ ಕೊಡುತ್ತೀರಿ, ಅವರು ಚೆನ್ನಾಗಿ ಕೆಲಸ ಮಾಡುವುದಿಲ್ಲ ; ಆಹಾರದ ಕೊರತೆ ಇಷ್ಟು ಇದ್ದರೂ ಸರ್ಕಾರ ಏನನ್ನೂ ಮಾಡುತ್ತಿಲ್ಲ ಎಂದು ಹೇಳುವಾಗ ನಿಮ್ಮಲ್ಲಿ ಜವಾಬ್ದಾರಿತನವಿದೆಯೇ ಎಂದು ನೋಡಿಕೊಳ್ಳಬೇಕು. ದೇಶದಲ್ಲಿ ಮಳೆಯಾಗಿಲ್ಲ, ಬೆಳೆಯಾಗಿಲ್ಲ ಎಂಬುದು ನಿಜವಾದ ಮಾತು. ಅದನ್ನು ಯಾರೂ ಅಲ್ಲಗಳೆಯುವ ಹಾಗಿಲ್ಲ. ಮಳೆಯಾಗಿ ಬೆಳೆಯಾಗಿದ್ದರೆ ಈ ರೀತಿಯ ಕೊರತೆ ಬರುತ್ತಿರಲಿಲ್ಲ. ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿಗಳು ಸಹ ದೇಶದ ಸಂರಕ್ಷಣೆಗೆ ಡಿಫೆನ್ಸ್ ಎಷ್ಟು ಅಗತ್ಯವೋ, ಅಷ್ಟೇ ಪ್ರಾಮುಖ್ಯತೆಯನ್ನು ಆಹಾರಕ್ಕೂ ಕೊಟ್ಟರು. ಕೇಂದ್ರ ಸರ್ಕಾರದವರು ಮತ್ತು ಮೈಸೂರು ಸರ್ಕಾರದವರು ಪ್ರತಿಯೊಂದು ಯೋಜನೆಯಲ್ಲೂ ಆಹಾರದ ಬಾಬಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ. ಸರ್ಕಾರದವರು 4ನೇ ಯೋಜನೆಯ ಮೊದಲನೇ ವರ್ಷದಲ್ಲಿ ಆಹಾರದ ಬಾಬಿಗೆ ಹೆಚ್ಚು ಖರ್ಚು ಮಾಡಬೇಕೆಂದಿರುವುದನ್ನು ನಾವುಗಳು ನೋಡಬಹುದು. ಅದಷ್ಟು ಜಾಗ್ರತೆ ಹೆಚ್ಚು ಹೆಚ್ಚು ಆಹಾರವನ್ನು ಬೆಳೆಯಬೇಕು ಎಂದು ಸರ್ಕಾರದವರು ರೈತರಿಗೆ ಗೊಬ್ಬರ, ಪಂಪುಸೆಟ್ಟುಗಳು, ಬಾವಿ ತೆಗೆಯಲು ಸಾಲಗಳನ್ನು ಕೊಡುತ್ತಿದ್ದಾರೆ. ಸಣ್ಣ ಮತ್ತು ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ಹೆಚ್ಚು ಹೆಚ್ಚು ಆಹಾರವನ್ನು ಬೆಳೆಯಲು ಏನೇನು ಸೌಕರ್ಯಗಳು ಬೇಕೋ ಅದನ್ನೆಲ್ಲಾ ಮಾಡಿದ್ದಾರೆ. ಆಹಾರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನೇನು ಮಾಡಿದ್ದೀರಿ ಎಂದು ಟೀಕೆ ಮಾಡಿದರೆ ಪ್ರಯೋಜನವಾಗುವುದಿಲ್ಲ. ಅದರ ಬದಲು ಸರ್ಕಾರಕ್ಕೆ ಏನಾದರೂ ಸಲಹೆ ಮಾಡಿ. ನೀವು ಮಾಡುವ ಸಲಹೆಗಳಲ್ಲಿ ಏನಾದರೂ ತಿರುಳು ಇದ್ದರೆ ಸರ್ಕಾರದವರು ಖಂಡಿತ ಒಪ್ಪಿಕೊಳ್ಳುತ್ತಾರೆ. ವಿರೋಧಪಕ್ಷದವರಿಂದ ಏನಾದರೂ ಸಲಹೆಗಳು ಬರುತ್ತದೆ ಎಂದು ನೋಡಿದರೆ, ಏನೂ ಬರಲಿಲ್ಲ. ಶ್ರೀ ರೇವಣಸಿದ್ದಪ್ಪನವರು ಮಾತನಾಡುವಾಗ ಏನಾದರೂ ಸಲಹೆಗಳನ್ನು ಕೊಡುತ್ತಾರೇನೋ ನೋಡೋಣ.

ಈಗ ಲೆವಿ ಸಿಸ್ಟಂ ವಿಷಯ ಹೇಳಿದರು. ರೈತರಿಂದ ವಸೂಲು ಮಾಡುತ್ತಾರೆ. ಡಿಸ್ಟ್ರಿಬ್ಯೂಷನ್ ಸರಿಯಾಗಿ ಮಾಡುವುದಲ್ಲ ಎಂದು ಹೇಳಿದರು. ಆಹಾರ ಸಂಗ್ರಹಣೆ ಆಗದಿದ್ದರೆ, ವಸೂಲಿ ಆಗದಿದ್ದರೆ 7 ಔನ್ಸ್ ಅಥವಾ 10 ಔನ್ಸ್ ಆಹಾರ ಜನರಿಗೆ ಹೇಗೆ ಕೊಡುವುದು? ಲೆವಿ ಬೇಡ, ರೈತರಿಗೆ ತೊಂದರೆ ಆಗುತ್ತದೆ ಎಂದು ಹೇಳುತ್ತಾರೆ. ಬೆಳೆದಂಥ ರೈತನಿಂದ ಲೆವಿ ತೆಗೆದುಕೊಳ್ಳುವುದು ಅತ್ಯಲ್ಪ. ಸರ್ಕಾರಕ್ಕೆ ಲೆವಿ ಕೊಡುವುದನ್ನು ರೈತ ಸಂತೋಷವಾಗಿ ಕೊಡುತ್ತಾ ಇದ್ದಾನೆ. ರಾಜಕೀಯಕ್ಕೆ ಉಪಯೋಗಿಸಬಾರದು. ಬೆಳೆದವನು ಯಾರೂ ಕೊಡುವುದಿಲ್ಲ ಎಂದು ಹೇಳುತ್ತಾ ಇಲ್ಲ. ಡಿಫರೆನ್ಸ್ ಆಫ್ ರೇಟ್ಸ್ ಹೇಳಿದರು. ಕೊಂಡುಕೊಳ್ಳುವಾಗ ಕಡಿಮೆ ರೇಟು ಕೊಡುತ್ತಾರೆ. ಮಾರ್ಕೆಟ್ ರೇಟು ನೋಡಿದರೆ ಜಾಸ್ತಿ ಆಗಿದೆ ಎಂದು ಹೇಳಿದರು. ಸರ್ಕಾರ ಏನು ನಿರ್ಧಾರ ಮಾಡಿದ್ದಾರೆ. ಆ ರೇಟು ನ್ಯಾಯವಾಗಿ ಇಲ್ಲವೆ ? 50-60 ರೂಪಾಯಿಗೆ ಕಳ್ಳ ಮಾರ್ಕೆಟ್‌ನಲ್ಲಿ ಮಾರಾಟ ಮಾಡಿದರೆ, ರೇಟು ಲೆವಿ ಮಾಡಬೇಕಾದರೆ ಕೊಡಬೇಕು ಎಂದರೆ, ಡಿಸ್ಟ್ರಿಬ್ಯೂಷನ್ ಹೇಗೆ ಮಾಡಬೇಕಾಗುತ್ತದೆ ? ಇದಕ್ಕೆ ಹಣ ಇದೆಯೇ ? ಅದು ನ್ಯಾಯ ತತ್ವವೇ ? ಆದುದರಿಂದ ಬೆಳೆದವನಿಗೆ ಪ್ರೋತ್ಸಾಹ ಮಾಡಬೇಕಾಗಿದೆಯೇ ವಿನಾ ಕಡಿಮೆ ರೇಟಿನಲ್ಲಿ ಕೊಂಡುಕೊಳ್ಳುತ್ತಾರೆ ಎಂದು ಹೇಳಿದರೆ ಕೊಡುವವನೂ ಕೊಡದ ಹಾಗೆ ಮಾಡುವ ಮನೋಭಾವ ಬರುತ್ತದೆ. ಅದು ಸರಿಯೇ ? ಕೆಲವು ವಿಚಾರಗಳಲ್ಲಿ ನೋಡುತ್ತಾ ಹೋದರೆ ಒಂದಾದರೂ ಕೂಡ ಸಲಹೆ ಬರಲಿಲ್ಲ. ಬೆಲೆ ಏರಿಕೆ ಆಗಿದೆಯೆಂದು ಹೇಳಿದರು, ನಿಜ. ಮಾನ್ಯ ಸ್ನೇಹಿತರೆಲ್ಲ ನೋಡಲಿ, ಯುನೈಟೆಡ್ ಕಿಂಗ್‌ಡಂ, ಜರ್ಮನಿ ಫ್ರಾನ್ಸ್, ಅಲ್ಲಿಯ ಅಂಕಿ ಅಂಶಗಳನ್ನು ನೋಡಬಹುದು ಅವನ್ನು ನೋಡಿದರೆ, ಆಹಾರ ಧಾನ್ಯದ ಬೆಲೆ ಏರಿಕೆ ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲೂ ಕೂಡ ಬಹುಶಃ ನಮ್ಮಲ್ಲಿ ಇರುವುದಕ್ಕಿಂತ ಹೆಚ್ಚಿಗೆ ಆಗಿದೆ. ಆದುದರಿಂದ ಇದು ಪ್ರಪಂಚದಲ್ಲಿ ಇರುವ ಟೆಂಡೆನ್ಸಿ ಬೇರೆ ಅಲ್ಲ.

Sri C. J. MUCKANNAPPA.—If there is more production, automatically the prices will come down.

ಶ್ರೀ ಗಾಂಜಿವೀರಪ್ಪ.—ಅಂಕಿಅಂಶದ ಮೇಲೆ ವಿರೋಧ ಮಾಡಿದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

Sri H. R. KESHAVA MURTHY (Gandasi).—It is not correct.

ಶ್ರೀ ಗಾಂಜಿವೀರಪ್ಪ.—ಪ್ರಪಂಚದ ಯಾವ ದೇಶದ ಬೆಲೆಗೆ ಹೋಲಿಸಿದರೂ ನಮ್ಮ ಆಹಾರ ಧಾನ್ಯಗಳ ಬೆಲೆ ಹೆಚ್ಚಿಗೆ ಎಂದು ಹೇಳುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವಿರೋಧ ಪಕ್ಷದ ನಾಯಕರ ಹತ್ತಿರ ಅಂಕಿಅಂಶ ಇಲ್ಲ ಸಬ್ ಸ್ಟಾನ್ಷಿಯೇಟ್ ಮಾಡಿಲ್ಲ ಎಂದು ಹೇಳಿದರು. ಇವರ ಹತ್ತಿರವೂ ಅಂಕಿಅಂಶ ಇಲ್ಲ. ತಾವು ಬರಿ ಅಂಕಿಅಂಶ ಕೊಟ್ಟುಬಿಡಿ, ನೀವು ಹೇಳಿದಂತೆ ಒಪ್ಪಿಕೊಳ್ಳುತ್ತೇವೆ. ಇಲ್ಲದಿದ್ದರೆ ನೀವೂ ಜನತಾ ಎಕ್ಸ್‌ಪ್ರೆಸ್ ಆದರೆ ಹೇಗೆ ?

ಶ್ರೀ ಗಾಂಜಿವೀರಪ್ಪ.—ಇದು ನಿರ್ವಿವಾದ ಆದ ಸಂಗತಿ. ಯಾವ ದೇಶದಲ್ಲಿ ಎಷ್ಟೆಷ್ಟು ಬೆಲೆ ಜಾಸ್ತಿಯಾಗಿದೆ ಎನ್ನುವುದಕ್ಕೆ ಅಂಕಿಅಂಶ ಇಲ್ಲಿ ಕೊಟ್ಟಿದ್ದಾರೆ. ಅದನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಎಲ್ಲಾ ರಾಷ್ಟ್ರಗಳಲ್ಲೂ ಕೂಡ, ಅದರಲ್ಲೂ ಯುನೈಟೆಡ್ ಕಿಂಗ್‌ಡಮ್‌ನಲ್ಲಿ, ಜರ್ಮನಿಯಲ್ಲಿ, ಫ್ರಾನ್ಸ್‌ನಲ್ಲಿ ಧಾರಣೆವಾಸಿಗಳ ರೇಟು ಜಾಸ್ತಿ ಆಗುತ್ತಾ ಇರುವಾಗ, ನಮ್ಮಲ್ಲಿ rise in prices ಬಹಳ ಕಡಿಮೆಯಾಗಿದೆಯೇ ವಿನಾ ಬೇರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಇದರಿಂದ ದೇಶದಲ್ಲಿ ಒಳ್ಳೆಯ ಪರಿಸ್ಥಿತಿ ಇದೆ ಎಂದು ನಾನು ಸಮರ್ಥನೆ ಮಾಡಿಕೊಳ್ಳುತ್ತಿದ್ದೇನೆ ಎಂದು ಹೇಳಬೇಕಾಗಿಲ್ಲ. ಕಾರಣ ಏನು ಎಂದು ತಿಳಿದುಕೊಳ್ಳಬೇಕು. ಬರೀ ಮೈಸೂರಿನಲ್ಲಿ ಮೈಸೂರು ಸರ್ಕಾರದವರು ಏನೂ ಕೆಲಸ ಮಾಡದೆ, ಪ್ರೈಸಸ್ ಕಂಟ್ರೋಲ್ ಮಾಡದೆ ಇರುವುದರಿಂದ ಮಿತಿ ಮೀರಿ ರೇಟು ಬೆಳೆಯುವುದಕ್ಕೆ ಅವಕಾಶ ಆಯಿತು ಎಂದು ಶ್ರೀ ಶಿವಪ್ಪನವರು ಹೇಳುವುದು ಸರಿಯಲ್ಲ. ಇಂಡಿಯಾ ದೇಶದಲ್ಲಿ ಎಲ್ಲಾ ಕಡೆಯೂ ಹೀಗೆ ಆಗುತ್ತಾ ಇರುವುದರಿಂದ, ಅದಕ್ಕೆ ನಾನಾ ಕಾರಣಗಳು ಇವೆ.

ಇನ್‌ಫ್ಲೇಷನರಿ ಟೆಂಡೆನ್ಸೀಸ್ ಪ್ರಪಂಚದಲ್ಲಿಯೇ ಜಾಸ್ತಿ ಆಗುತ್ತಾ ಇದೆ. ಅಷ್ಟೇ ಅಲ್ಲ. ಆಹಾರಧಾನ್ಯ ಪ್ರಾಡಕ್ಷನ್ ಕಡಿಮೆಯಾಗುತ್ತಾ ಇದೆ. ಕೊಂಡುಕೊಳ್ಳುವವರು ಜಾಸ್ತಿ ಆಗುತ್ತಾ ಇದ್ದಾರೆ. ಹೀಗೆ ಇರುವುದರಿಂದ, ನಾನಾ ಕಾರಣಗಳಿಂದ ಪ್ರೈಸಸ್ ಜಾಸ್ತಿ ಆಗುತ್ತಾ ಇದೆ. ಅದು ಒಳ್ಳೆಯದಲ್ಲ. Inflation ಹೋಗಬೇಕೆಂದರೆ, ಏನು ಮಾಡಬೇಕು ? ಕೇಂದ್ರ ಸರ್ಕಾರದವರು ಮಾಡತಕ್ಕ ಆಲ್ ಇಂಡಿಯಾ ಪಾಲಿಸಿ. ಪಾರ್ಲಿಮೆಂಟಿನಲ್ಲಿ ಮಾಡುವ ಭಾಷಣವನ್ನು ಇಲ್ಲಿ ಬಂದು ಮಾಡಿದರೆ ಮೈಸೂರು ಸರ್ಕಾರದವರು ಪ್ರೈಸಸ್ ಕಂಟ್ರೋಲ್ ಮಾಡುತ್ತಾ ಇಲ್ಲ ಎಂದು ಹೇಳಿದರೆ ಏನೂ ಮಾಡುವುದಕ್ಕಾಗುವುದಿಲ್ಲ. 15 years of Demorcratic Planning ನಲ್ಲಿ ಹೀಗೆ ಹೇಳಿದ್ದಾರೆ:

> "Since 1947–49, particularly, food costs have risen less than most other consumer items in the U.S. cost of living index. For all items other than food, the increase to mid-1961 was 31 per cent, Costs of transportation increased 46.6 per cent, housing 23.2 per cent, rents 73.4 per cent and medical care 60.4 per cent. But for food, even including that served in restaurants where labour and other costs kept pace with those in other fields the increase was 20.7 per cent. Food purchased by the average family, for preparation by the housewife, costs only 12 per cent more than in 1947-49. The farmer actually received 12 per cent less because marketing costs have risen by 36 per cent but he made up this loss by handling greater acreages and producing larger crops."

Sri H. R. KESHAVA MURTHY.—This is not a fact, Sir. The prices there are decidedly lower than the prices in India. I can give you figures.

ಶ್ರೀ ಗಾಂಜಿವೀರಪ್ಪ.—ಫಿಗರ್ಸ್ ಕೊಟ್ಟು ಎಷ್ಟು ಪರ್ಸೆಂಟ್ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಜಾಸ್ತಿ ಆಗಿದೆ ಎಂದು ಓದಿದರೆ ಅದು ಕರೆಕ್ಟ್ ಇಲ್ಲ ಎಂದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

Sri C. J. MUCKANNAPPA.—I quite agree with my Hon'ble friend. But what is the production that comes to the market, the capacity of the production and the purchasing capacity?

ಶ್ರೀ ಗಾಂಜಿವೀರಪ್ಪ.—ಸಭಾಧ್ಯಕ್ಷರೇ, ಈ ವಿಚಾರದಲ್ಲಿ ಇಂಡಿಯಾ ದೇಶದಲ್ಲಿ ಅಷ್ಟೇ ಅಲ್ಲ. ಪ್ರಪಂಚದ ನಾನಾ ರಾಷ್ಟ್ರಗಳಲ್ಲಿ ಧಾರಣೆವಾಸಿಗಳ ಜಾಸ್ತಿ ಆಗುತ್ತಾ ಇದೆ. ಇದು ಒಳ್ಳೆಯದಲ್ಲ. ಆದುದರಿಂದ ನಾವು ಇದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡೋಣ, ಕೇಂದ್ರ ಸರ್ಕಾರ

(ಶ್ರೀ ಗಾಂಜಿ ವೀರಪ್ಪ)

ದವರೂ ಮಾಡಲಿ. ಆದರೆ ಇದು ಮೈಸೂರಿನಲ್ಲಿಯೇ ಆಗಿದೆ, ಎಂದು ಸಾರ್ವಜನಿಕರಲ್ಲಿ ಒಂದು ತಪ್ಪು ಭಾವನೆ ಉಂಟುಮಾಡಿ ಇದನ್ನು ರಾಜಕೀಯಕ್ಕೆ ಉಪಯೋಗಿಸಿಕೊಳ್ಳಬೇಕಾಗಿಲ್ಲ. ಈ ಪರಿಸ್ಥಿತಿಯಲ್ಲಿ ನಾವೂ ಎದುರು ಪಕ್ಷದವರೂ ಸೇರಿ ಯಾವರೀತಿಯಲ್ಲಿ ಜನಗಳಿಗೆ ಆಹಾರಧಾನ್ಯಗಳು ಸುಲಭವಾಗಿ ಸರಿಯಾದ ರೀತಿಯಲ್ಲಿ ಸಿಕ್ಕುವಹಾಗೆ ಮಾಡಬೇಕು ಎಂದು ಯೋಚನೆ ಮಾಡೋಣ. ಕನ್‌ಸ್ಟ್ರಕ್ಟೀವ್ ಸಜೆಷನ್ ಕೊಡೋಣ. ಈಗ ಇರತಕ್ಕ ಏರ್ಪಾಡುಗಳೂ ಸಮರ್ಪಕವಾಗಿ ಇದೆ ಎಂದಲ್ಲ. ಕುಂದುಕೊರತೆಗಳು ಇವೆ. ಡಿಸ್ಟ್ರಿಬ್ಯೂಷನ್ ಸರಿಯಾದ ರೀತಿಯಲ್ಲಿ ಆಗಬೇಕಾದರೆ ಏನೇನು ಸರಿಪಡಿಸಬೇಕು ಎಂದು ಹೇಳೋಣ.

ಇನ್‌ಫಾರ್ಮರ್ ರೇಷನಿಗೆ ಮಾಡುವುದಕ್ಕಾಗುವುದಿಲ್ಲ. ಸಾಕಷ್ಟು ಆಹಾರದ ಸಂಗ್ರಹಣೆ ಅಂದರೆ ಕನಿಷ್ಠಪಕ್ಷ ಮೂರು ತಿಂಗಳು ಆಹಾರ ಸಂಗ್ರಹಣೆ ಇಲ್ಲದೆ, ನಾವು ಸ್ಟ್ಯಾಟ್ಯೂಟರಿ ರೇಷನಿಂಗ್ ಇಂಟ್ರಡ್ಯೂಸ್ ಮಾಡುವುದಕ್ಕಾಗುವುದಿಲ್ಲ. ಜೊತೆಗೆ ಜೋನಲ್ ಸಿಸ್ಟಂ ತರಬೇಕೇ, ಬೇಡವೇ ಎಂಬುದರ ಬಗ್ಗೆ ಇಂದು ಅಖಿಲಭಾರತ ಮಟ್ಟದಲ್ಲಿ ಕೇಂದ್ರ ಸರ್ಕಾರದವರು ಚರ್ಚೆ ಮಾಡಿದ್ದಾರೆ. ಜೋನಲ್ ಸಿಸ್ಟಂ ಅಕ್ಕಿಗೆ ಇರಬೇಕು ಎಂದು ಬಲವಾಗಿ ಸಮರ್ಥನೆ ಮಾಡುತ್ತಾರೆ. ಅಷ್ಟೇ ಬಲವಾಗಿ ಇರಬಾರದು ಎಂದು ಹೇಳಬಹುದು. ಆಹಾರದ ಸಮಸ್ಯೆ ಎಷ್ಟು ಕಷ್ಟಕರವಾದ ಸಮಸ್ಯೆ ಎಂದರೆ, ಕೇಂದ್ರ ಸರ್ಕಾರದಲ್ಲಿ ಬಹಳ ಬುದ್ಧಿವಂತರಾದ ಆಹಾರ ಮಂತ್ರಿಗಳು ಇದ್ದರೂ ಅವರಿಗೂ ಅದನ್ನು ಬಗೆಹರಿಸುವುದಕ್ಕೆ ಕಷ್ಟವಾಗಿದೆ. ಏನು ಮಾಡಿದರೂ ತೊಂದರೆ ಇದೆ ಎಂದು ಹೇಳುತ್ತಾರೆ. ಆಹಾರ ಸಾಕಷ್ಟು ಇಲ್ಲ. ಇರತಕ್ಕಂಥ ಆಹಾರವನ್ನೇ ಸರಿಯಾದ ರೀತಿಯಲ್ಲಿ ಹಂಚುವುದು ಬಹಳ ಕಷ್ಟವಾದ ಕೆಲಸ. ಪ್ರಾಮಾಣಿಕತೆ ಎಲ್ಲಾ ಮಟ್ಟದಲ್ಲೂ ಇರುವುದಕ್ಕೆ ಆಗುವುದಿಲ್ಲ. ಕೋ-ಆಪರೇಟೀವ್ಸ್ ಮಟ್ಟದಲ್ಲೂ ಕುಂದುಕೊರತೆಗಳನ್ನು ನೋಡುತ್ತಿದ್ದೇವೆ. ವರ್ತಕರಿಗೆ ಕೊಟ್ಟರೂ ಕೆಲವರು ಹಂಚಬಹುದು. ಕೆಲವರು ಹಂಚದೇ ಇರಬಹುದು. ಅಧಿಕಾರಿಗಳಾಗಲಿ ಸಂಬಂಧಪಟ್ಟ ಕೋ-ಆಪರೇಟರ್ಸ್ ಆಗಲೀ ವರ್ತಕರಾಗಲೀ ಎಲ್ಲರೂ ದೇಶದ ದೃಷ್ಟಿಯನ್ನಿಟ್ಟುಕೊಂಡು ಪ್ರಾಮಾಣಿಕತೆಯಿಂದ ವರ್ತಿಸಿದರೆ ಆಗ ಕೆಲಸ ಸಮರ್ಪಕವಾಗಿ ಆಗುತ್ತದೆಯೇ ವಿನಾ ಇಲ್ಲದಿದ್ದರೆ ಆಗುವುದಿಲ್ಲ. ಎಲ್ಲಾ ತೊಂದರೆಗಳು ಇದ್ದರೂ, ಹೇಗಾದರೂಮಾಡಿ ಮಂತ್ರ ಅದಗೂ ಮಾಡಿ ಮಾವಿನಕಾಯಿ ಬೆಳೆಸಿ ಎಂದು ಟೀಕೆ ಮಾಡುವುದು ಸರಿಯಲ್ಲ. ಕೇಂದ್ರ ಸರ್ಕಾರದಿಂದ ನಮಗೆ ಗೋಧಿ ಬರುತ್ತಾ ಇದೆ. ಅಕ್ಕಿಯನ್ನು ಎಲ್ಲೆಲ್ಲಿಂದಲೋ ತಂದಾಗಿದೆ. ಆಂಧ್ರಕ್ಕೆ ನೀರು ಜಾಸ್ತಿಯಾಗಿ ಕೊಟ್ಟು ಅವರಿಂದ ಅಕ್ಕಿಯನ್ನು ಬಾರ್ಟರ್ ಬೇಸಿಸ್ ಮೇಲೆ ತಂದು ಹೀಗೆ ಅನೇಕ ಪ್ರಯತ್ನಗಳನ್ನು ಮಾಡಿದರೂ ಕೂಡ ಕುಂದು ಕೊರತೆಗಳು ಇವೆ.

ಕೆಲವು ತಿಂಗಳು ಕಾಲ ಕಷ್ಟಕರವಾದ ಪರಿಸ್ಥಿತಿಯನ್ನು ನಾವು ದೇಶದಲ್ಲಿ ಕಾಣಬೇಕಾಗುತ್ತದೆ. ಏತಕ್ಕೆಂದರೆ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ಬಹಳ ಕಷ್ಟ ಇದೆ. ಏನು ಸರ್ಕಾರದವರು ಶೇಖರಣೆ ಮಾಡಿದ್ದಾರೆ, ಮಾಡುತ್ತಾ ಇದ್ದಾರೆ, ಹೊರಗಡೆಯಿಂದ ಏನು ಆಹಾರ ಬಂದಿದೆ, ಅದನ್ನು ಎಲ್ಲಾ ಕಡೆಯೂ ಯೋಚನೆ ಮಾಡಿ ಹಂಚಿದರೆ, ಮೂರುತಿಂಗಳು ಹೇಗಾದರೂ ಕಷ್ಟದ ಪರಿಸ್ಥಿತಿಯನ್ನು ತಡೆದುಕೊಂಡು ಹೋಗುತ್ತೇವೆ, ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ನಾನು ಒಂದು ಸಲಹೆ ಮಾಡುತ್ತಾ ಇದ್ದೇನೆ. ಪ್ರೊಕ್ಯೂರ್‌ಮೆಂಟ್ ಬಗ್ಗೆ ತೊಂದರೆ ಇದೆ ಎಂದು ಹೇಳುತ್ತಾ ಇದ್ದಾರೆ. ಬೆಳೆಯದೇ ಇದ್ದರೆ ವಸೂಲು ಮಾಡಬೇಡಿ ಎಂದು ಹೇಳಿದ್ದಾರೆ. ಯಾರಮೇಲೂ ಲೆವಿ ಕೊಡಲಿಲ್ಲ ಎಂದು ಬಲಾತ್ಕಾರ ಮಾಡುವುದಾಗಲಿ, ಪ್ರಾಸಿಕ್ಯೂಷನ್ ಮಾಡುವುದಾಗಲಿ, ಯಾವ ಒಂದು ನಿದರ್ಶನ ನಮ್ಮ ಗಮನಕ್ಕೆ ಬರಲಿಲ್ಲ.

ನಮ್ಮ ಜಿಲ್ಲೆಯ ವಿಷಯ ನಾನು ಹೇಳುತ್ತೇನೆ. ಮಾನ್ಯ ಸ್ನೇಹಿತರಾದ ಸಂಜೀವನಾಥ ಐಕಳರು ಬಹುಶಃ ಈ ವಿಚಾರವನ್ನು ಹೇಳಿದರು ಎಂದು ಕಾಣುತ್ತದೆ.

ಶ್ರೀ ಸಂಜೀವನಾಥ ಐಕಳ (ಸುರತ್ಕಲ್).—ಸ್ವಾಮಿ, ಈ ವಿಷಯ ಅಂತೆ ಸಂತೆಯಲ್ಲಿ ಹೋಗಿ ಬಂತೆ ಕದ್ದ ಸುದ್ದಿಯಲ್ಲ ಇದು. ಶಿವಮೊಗ್ಗದಲ್ಲಿದ್ದಂತಹ ನಮ್ಮ ಜನರು ಹೇಳಿದ ಮಾತು ಇದು. ಈ ವಿಷಯ ಅನೇಕ ಪತ್ರಿಕೆಗಳಲ್ಲಿ ಫೋಟೊ ಸಮೇತ ಪ್ರಕಟವಾಗಿದೆ. ಅದನ್ನು ಸ್ಪಷ್ಟವಾಗಿ ಕೊಟ್ಟಿದ್ದಾರೆ. ಜನರು ಯಾವ ರೀತಿ ಬಿದಿರು ಅಕ್ಕಿಯನ್ನು ಹೆಕ್ಕುತ್ತಿದ್ದಾರೆ ಎಂಬುದನ್ನು ಕೊಟ್ಟಿದ್ದರು. ಇವರು ತಮ್ಮ ಸರ್ಕಾರದ ಅಸಮರ್ಥತೆಯನ್ನು ಮರೆಮಾಚುವುದಕ್ಕೆ ನಮ್ಮ ಜನರು ಉಪವಾಸ ಬೀಳಲಿಲ್ಲ, ಬಿದಿರು ಅಕ್ಕಿ ತಿನ್ನಲಿಲ್ಲ ಎಂದು ಹೇಳುತ್ತಿದ್ದಾರೆ, ಅಷ್ಟೆ.

ಶ್ರೀ ಗಾಂಜಿ ವೀರಪ್ಪ.—ನಾನು ಹೇಳುತ್ತೇನೆ, ನಮ್ಮ ಜಿಲ್ಲೆಯ ವಿಚಾರ ನನಗೆ ಗೊತ್ತಿದ್ದಷ್ಟು ನಮ್ಮ ಮಾನ್ಯ ಸ್ನೇಹಿತರಿಗೆ, ಅದರಲ್ಲೂ ಮಂಗಳೂರಿನಲ್ಲಿರುವವರಿಗೆ ಗೊತ್ತಿರಲಿಕ್ಕಿಲ್ಲ ಎಂದು ಭಾವಿಸುತ್ತೇನೆ. ಯಾರಾದರೂ ಹೇಳಬಹುದು, ಎಂದು ವಿರೋಧಪಕ್ಷದವರ ಮನೋಭಾವವಿರಬಹುದು.

ಆದರೆ ನಮ್ಮ ಜಿಲ್ಲೆಯಲ್ಲಿ ಆಹಾರವಿಲ್ಲದೆ ಯಾರೂ ಸತ್ತಿಲ್ಲ ಎಂದು ನಾನಾದರೂ ಹೇಳುತ್ತೇನೆ. ಬೇರೆ ಕಡೆ ಬಡತನ ಇದೆ. ಕೆಲಸ ಸಿಕ್ಕದೆ ಜನರು ತೊಂದರೆಯಾಗಿ ಒಂದು ಊರಿಂದ ಇನ್ನೊಂದು ಊರಿಗೆ ಹೋಗುತ್ತಾರೆ. ನಮ್ಮ ಜಿಲ್ಲೆಯಲ್ಲೂ ಇದೇ ತರಹ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುತ್ತಿದ್ದಾರೆ. ಇದು ಸರ್ವಸಾಧಾರಣವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದೇ ವಿನಹ ಸಾವಿರಾರು ಜನರು ಗುಂಪು ಕಟ್ಟಿಕೊಂಡು ಅನ್ನಕ್ಕಾಗಿ ಹೋಗುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಇದು ನಮ್ಮ ಜಿಲ್ಲೆಯ ವಿಚಾರ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಇದನ್ನು ನಾವು ಅಪ್ರತ್ಯಕ್ಷ ಮಾಡುವುದು ಬೇಡ. ನಮ್ಮ ಜಿಲ್ಲೆಯ ಮಂತ್ರಿ ಕುಳಿತಿದ್ದಾರೆ. ಬೆಂಗಳೂರು ಜಿಲ್ಲೆಯಲ್ಲಿ ಜನರು ಕೆಲಸ ಇಲ್ಲದೆ ದೇಶಾಂತರ ಹೋಗುತ್ತಾರೆ ಎಂದು ಹೇಳುತ್ತಾರೆ. ನಮ್ಮ ಜಿಲ್ಲೆಯ ಮಂತ್ರಿಗಳು ಇದ್ದರೂ ಕೂಡ ನಮ್ಮ ಜಿಲ್ಲೆಗೆ ಸರಿಯಾದ ಹಣ ಕೊಟ್ಟಿಲ್ಲ.

ಶ್ರೀ ಗಾಂಜಿ ವೀರಪ್ಪ.—ರಿಲೀಫ್ ವರ್ಕ್ಸ್ ಜಾಸ್ತಿಯಾಗಿದೆ ಎಂದು ಹೇಳುತ್ತಾರೆ. ಅದರ ಅಂಕಿ ಅಂಶ ನೋಡುವುದಾದರೆ, ನಮಗೆ ಒಟ್ಟು ಮೂರು ಲಕ್ಷ ಕೊಟ್ಟಿದ್ದಾರೆ. ಕೊಟ್ಟಿದ್ದ ಮೂರು ಲಕ್ಷದಲ್ಲಿ ಎರಡು ಲಕ್ಷ ಖರ್ಚಾಗಿದೆ. ಇದು ನಾನು ನಮ್ಮ ಜಿಲ್ಲೆಯ ವಿಚಾರ ಹೇಳುತ್ತಿರುವುದು. ಮಂಗಳೂರು ಜಿಲ್ಲೆಯವರು ಇದನ್ನು ಹೇಳಬೇಕಾದರೆ ಇದು ರಾಜಕೀಯವೇ ಹೊರತು ಇದರಲ್ಲಿ ಬೇರೇನೂ ವಾಸ್ತವಾಂಶವಿಲ್ಲ. ಈಗ ಈ ತರಹ ಮಾತನಾಡುವುದರಿಂದ ಏನೂ ಪ್ರಯೋಜನವಿಲ್ಲ. ಇದರ ಬದಲು ಈಗಿನ ಪರಿಸ್ಥಿತಿಯಲ್ಲಿ ಏನಾದರೂ ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಟ್ಟು ಸರಿಯಾದ ರೀತಿಯಲ್ಲಿ ಆಹಾರವನ್ನು ಹಂಚಿಕೆಮಾಡತಕ್ಕಂತಹ ಏರ್ಪಾಡು ಮಾಡೋಣ. ಇನ್ನೊಂದು ರೀತಿಯಲ್ಲಿ ಈಗ ರೈತನಿಗೆ ಧಾರಣೆ ಜಾಸ್ತಿ ಸಿಕ್ಕುವುದರಿಂದ, ಬೆಲೆ ಜಾಸ್ತಿ ಬರುವುದರಿಂದ ಅವನಿಗೆ ಹೆಚ್ಚಿಗೆ ಉತ್ಸಾಹ ಉಂಟಾಗುತ್ತದೆ. ಅದರಿಂದ ಅವನು ಹೆಚ್ಚು ಹೆಚ್ಚಾಗಿ ಬೆಳೆಯಲು ಪ್ರಯತ್ನ ಮಾಡುತ್ತಾನೆ. ಆದ್ದರಿಂದ ಇದು ಒಂದು ಇನ್‌ಸೆಂಟಿವ್ ತರಹ ಆಗಿದೆ. ಸರ್ಕಾರದವರು ಇರಿಗೇಶನ್ ಮೊದಲಾದುವುಗಳಿಗೆ ಹಣ ಖರ್ಚು ಮಾಡಿದರೆ ಒಂದು ಖಾಯಂ ತರದ ವ್ಯವಸ್ಥೆಯುಂಟಾಗುತ್ತದೆ ಮತ್ತು ಇದರಿಂದ ಬೇಸಾಯಕ್ಕೆ ತುಂಬಾ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಪ್ರತಿಯೊಬ್ಬರಿಗೂ ಹೆಚ್ಚಿಗೆ ಬೆಳೆಯಬೇಕೆನ್ನುವ ಮನೋಭಾವ ಮೂಡುತ್ತಿದೆ. ಈ ಯುದ್ಧ ಬಂದು ನಮ್ಮಲ್ಲಿ ಒಂದು ಒಮ್ಮನಸ್ಸನ್ನು ಬೆಳೆಸಿದೆ. ಯಾವ ಸಂದರ್ಭ ಬಂದರೂ ಎದುರಿಸುವಂತೆ ಒಂದು ಶಕ್ತಿ ಉಂಟಾಗಿದೆ. ಈ ತರದ ಡಿಫೆನ್ಸ್ ಮೈಂಡೆಡ್‌ನೆಸ್‌ನಿಂದ ನಮಗೆ ಬೇಕಾದ ಆಹಾರವನ್ನು ನಾವು ಬೆಳೆದು, ನಮ್ಮ ಕಾಲ ಮೇಲೆ ನಾವು ನಿಲ್ಲುವಂತಹ ಒಂದು ನ್ಯಾಷನಲ್ ಫೀಲಿಂಗ್ ದೇಶದಲ್ಲಿ ಬಂದಿದೆ. ಆದ್ದರಿಂದ ನಾವು ಇಲ್ಲಿ ಏನಾದರೂ ಮಾಡಿ ಮುಖದ ಮೇಲೆ ಮಣ್ಣೆರಚುವ ಚಳುವಳಿ ಮಾಡುವುದು ಬೇಡ. ಅಂತಹ ಮನೋಭಾವನೆ ನಮ್ಮ ಸ್ನೇಹಿತರಿಗೆ ಬರಲಿ ಎಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri G. V. GOWDA (Palya).—Mr. Speaker, Sir, I have read the note given on the draught conditions in our State, Though several things have been told here, we find that things are not moving as we expected in rural parts. According to my estimation, the total demand on food-grains in the State of Mysore per annum is 50 lakhs tons. And now as per the estimation of production so far as 1965-66 is concerned, it would be not more than 24 lakhs. The wheat products we are able to secure is to the extent of 9 lakhs tons. This would bring the total available food to 33 lakh tons, leaving a deficit of 17-18 lakh tons of food-grains. Taking into consideration the foodgrains that have been procured, either jawar or paddy and also the wheat products, I do not know how the Government will be able cope with the demand to fill up the gap to the extent of 18 lakh tons of foodgrains. Sir, it is very difficult to see that justice is secured to the people especially in the rural parts. Sir, it is said that in the months of Jannuary, February and March, so many tons of foodgrains will be allotted to the districts. Therein it has been said that for Mysore 400 tons is given for January, February and March. But not a grain has been given to rural parts. Even to taluk headquarters it has not been given. The Hon'ble Food Minister says it is left to the

(SRI G. V. GOWDA)

discretion of the Deputy Commissioner as to where the food should be sent in rural parts. Therefore, acute distress conditions prevail there. Unless the Deputy Commissioner views it judicially and makes it a point that the people in the rural areas must be also looked after properly, I do not think that we can consider anything having been done to people in rural parts. It is said that by means of raising the second crop, we will be able to meet this deficit to some extent-9-10 lakh tons. That may be the view. Sir, I should say that nothing has been given to the raiyats by way of facilities to grow second crop. Sir, in my own taluk, 200 people who have got wells, wanted electric power to be supplied. It has not been given till now. If that had been supplied, they would easily make their humble contribution towards the solution of food problem. In some cases, poles have been fixed, wires have been drawn, but still they are not able to give power. In other places, pole is erected, no wire is drawn. I can safely observe that the performance of the Electrical Department during the third plan period, is a miserable failure.

3-30 P.M.

We have got about 27,000 villages and we have hardly electrified to the extent of five thousand villages; so the percentage of villages electrified works to less than 17 per cent. Even in respect of providing power for I.P. Sets, the achievement is miserable; out of 1,80,000 wells in the State of Mysore, we have not been able to give power for more than 25 thousand wells; so it also works out to less than 18 per cent. So, it can be safely inferred that the performance so far as providing power for irrigation pumpsets or for rural electrification in the Second and Third Plans has been a miserable failure. With this achievement, I don't know with what face you can ask the agriculturist to raise a second crop. It is a complete myth and the whole plan is ill-conceived. Unless the necessary facilities are provided to the ryot, it is well-neigh impossible for him to raise a second crop. To give a concrete instance, in my area, in the year 1962 so many persons deposited Rs. 90 each for power to 1-P pump sets. Till now they have not been able to get power. Is this the way we give incentives to the ryots to raise a second crop? For four years, a sum of Rs. 90 has been kept in deposit unnecessarily and the money has been lying idle. Naturally, the ryots will have borrowed that money from some bank or banker. What is the interest he has paid on that money for the last four years, besides losing interest on that deposit? If you are not able to provide power, what is the use of raising the slogan to raise a second crop? This is the sorry state of affairs we are having. Next, very little has been done to give relief to the ryots in drought-affected areas. The ryots are not provided with gainful employment. Only in certain sections, some help is given. Number of villages have been affected with drought. Out of 177 villages in my Taluk, except a few villages, all the rest have been affected by scarcity conditions. Some relief works taken up 4 months back are

being continued in a few scarcity areas. Of course, the Government says that it has made available a sum of Rs. 11 lakhs for relief works. What is the use ? The Thasildar has to draw the money and the B.D.O. has to execute the works. There is no co-ordination between these two officers with the result, no relief work is being undertaken and the villagers are suffering. No doubt, some works are going on here and there ; but that is no good ; that has not solved the problem. Unless some gazetted officer is held responsible for spending an earmarked amount in the drought-affected area and getting through the relief works, there is no salvation for the villagers. They cannot eke out any cooly or wages. If the Government's attitude remains status quo and the same state of affairs were to continue, I am afraid things will go from bad to worse. I am also told by an authority that some relief works have been postponed.

Mr. DEPUTY SPEAKER.—That does not come under this demand.

Sri G. V. GOWDA.—They do come. We have to analyse what are the works that have been undertaken, what are the measures given effect to, to alleviate the distress conditions of the hard-hit agriculturists and villagers. The supply of foodgrains that has been made to the rural parts is disproportionate to the quantum of foodgrains that has been supplied to the Cities and urban places. Rural people must not only be provided with work but they must also be paid in kind rather than in money.

Several questions have been raised in this House as to the price that has been fixed so far as paddy and other commodities are concerned. A sum of Rs. 50 is fixed for one quintal of paddy and it works out to Rs. 75 per quintal of rice because 1½ quintal of paddy gives 1 quintal of rice. Now the retail price of rice is Rs. 97. So the marginal difference is about Rs. 22. If the ryot is is asked to convert paddy into rice and give it, he would take about Rs. 2½ per quintal for conversion and a few rupees by way of incidental charges. So he will be able to deliver rice at a cheaper rate, minimising the expenditure to the utmost. It is said that there are four stages in this process. The first stage is collection at the village point ; the second is storage point ; third is milling stage ; the fourth is wholesale point ; the fifth stage is the retail point. If the Government dispassionately considers, three stages or points could be easily avoided. If you acquire paddy in villages or other places, why should any person be paid commission ? Is it necessary ? In addition to this, there is the collection agent for whom commission is paid. These stages can be eliminated as in Maharashtra and 30 to 40 paise saved. The village point or the purchasing point can be avoided and the ryot can be made to take paddy to the milling point. If it is convenient to him, he can surrender it at the mill, giving him transport facilities. If it is advantageous to him, he will take it to the mill point and deliver paddy. If it is not advantageous to him, transport charges could be paid to the mill-owner or the agent transporting it, by the Government.

(SRI G. V. GOWDA)

When the second stage is eliminated, you will be minimising the expenditure by 70 paise per quintal. It is said that they are paying something at the storage point. There also about 25 paise can be saved. The mill-owners have got godowns and if some rent is paid to them, you can save 25-30 paise per quintal. In respect of gunny bags also we are losing something. We are paying Rs. 3 for two gunny bags. 1½ qunitals of paddy being equivalent to 1 quintal of rice, one bag becomes surplus. Therefore, one rupee should be recovered ; so you can take advantage of another 50 paise at least. Then there is interest. There is administration charges of Rs. 4. I do not know what these administrative charges are and who are the persons against whom this money has to be spent. I think, one rupee is quite sufficient for this item by way of incidental charges. The ex-mill price should be Rs. 84 and not Rs. 88.5. According to my working, it comes Rs. 9.50 that is, total retail price exclusive of sales tax. We can save Rs. 6½ per quintal. The Hon'ble Minister has just come to his seat. I was saying that that the present process is neither beneficial to the consumer nor the grower, and that the intermediary stages between the farmers and millers could be removed. At the village point, the purchasing agent could be avoided. The ryot can be made to take paddy to the mill point, either getting transport charges if it is advantageous, or by paying it to the agent for transporting it from the village. Your local officers issue the demand notices and according to that, the cultivator has to surrender. If he does not surrender, he is liable to be prosecuted. You have your food control orders. According to that, he is bound to surrender the levy unless there is no crop. You have the middle man or this ageney business or commission, etc. Finally I would like to submit that this 6½ rupees could be reduced at the retail price.

I Want to ask another clarification of the Food Minister. There is the mention of four rupees as administrative charges. On whom is it spent ? You are spending on the Food Department, on the grain supply scheme Rs. 2,60,000 and on Food Supplies you are spending 51 lakhs and odd. You incur so much expenditure of food establishment—you are incurring nearly 54 lakhs. That is purely an expenditure without a return. In addition, you have charged four rupees in the cost sheet. Is it to re-imburse what you spend on the Foop Department ? Your Tehsildar is there. Your Food Assistants are there. But this four rupees, I do not understand. Therefore I am suggesting that if a rational basis is adopted, you can reduce by five rupees, which can go to the ryot or if Government is not willing for that, it can go to the consumer.

In the question hour, my friend Sri Lakkappa raised a question which was not answered. It is about giving licence to wholesale dealers—that Government has not followed any principle. If the whole thing is entrusted to the Co-operative societies, nobody bothers. But some wholesalers are appointed. They have appointed ten persons.

Whether the president Ministry is responsible for their appointment or the pervious Ministry, I do not know. Out of ten, only to are genuine dealers, I am told. Among the eight, three were dealing in pulses. One was running a non-vegetarian ahotel. It fact, they did not obtain the wholesale licence until after their appointment as wholeasale dealars.

Sri B. D. JATTI.—What is stated by the Hon'ble Member is not correct.

Sri G. V. GOWDA.—The Hon'ble Minister may get it verified.

Sri B. D. JATTI.—I will give detailed reports.

Sri G. V. GOWDA.—Out of the ten, only two are genuine wholesale dealers. Those wholesale dealers, who are dealing in foodgrains from time immemorial have been ignored. Is it in conformity with any accepted principle—that is my question. Government must have a basis for any selection. They must follow principles which should be be appreciated by one and nll.

So far as the grain supply scheme is concerned, things are not moving as they are expected to be. The next two moths would be very critical, and unless the Government gives direction to the authorities to consider the rural parts equally on a par with the urban citizens, I am afraid things will prove very bad.

So far as the Publicity and Information Department is concerned, in my opinion, the less said the better about it. Government wants to spend 18 lakhs for 1966-67—for what purpose, I do not know. For the entire Third plan, they have spent 35 lakhs, at the rate of 7 lakhs per annum. But this year alone, they want to spent 18 lakhs—for one year. In my opinion, it is absolutely unnecessary, because the spending of this amount has not, in my opinion, conferred any benefit on the rural population. For every district, they want a publicty officer and units are being expanded. In these hard days, when we are facing acute distress conditions, when severe brought is existing in Mysore and people are suffering, why should we spend 18 lakhs on this department ? What is the tangible work done by this department—I do not know. They have published some magazine which is not all useful for the people in the rural areas. This magazine does not publish anything about the current trends and it is a thorough failure. I feel it should not be continued. In fact, there is scope for reducing the expenditure on this department. This department has hardly done any work in the rural areas to justify the spending of 18 lakhs of rupees. Something is said about the soil conservation scheme and the ryots are made known of the same. I do not know where the Government have taken up such schemes. In my area, which is severely affected by drought, no such scheme is taken up and I do not see any information from this magazine or department. It is stated that in Mysore district, about 27 villages are taking up soil conservation work. I do not know which are those villages. Then people do not know whether land revenue is remitted or postponed on account of the existing drought conditions. Unless the Publicity Department takes up these matters

(SRI G. V. GOWDA)

and gives information to the cultivator in the rural parts, the spending of such a huge amount is not justified on this department. Even vital matters which affect the rural parts—that information is not available. Supposing on account of the drought conditions, Government comes to the aid of the cultivator and says that it will give so much of benefit to him in the way of making available water resources, or supplying fooder or providing drinking water wells, all this information should be made available to the rural parts by the Information and Publicity Department. If such service is not there, I do not know the useful purpose that is being served by the existence of this publicity department. It is stated that for deepening of wells, so many lakhs of rupees are given. Practically, we see that 70 to 80 per cent of the ryots are not given these loans on the ground that they have failed to remit one or two instalments. During the last three or four years, several ryots have taken loans for sinking wells. Many of them were not able to pay their instalments for the reason that conditions were adverse. Because, they are defaulters, they have not given these loans. I request Government to instruct the Tehsildars to see that in spite of the fact that one or two instalments are not paid, they should be given the loans for deepening the wells. Otherwise, it is not possible to deepen wells and produce more. So many things have been told by the Finance Minister in fighting the famine conditions in the State. I do not know if these things are going to be received by the people in the rural parts. I would only request the Government to see that these things are practically done and relieve the acute conditions or distress conditions that is being faced by the rural population.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ನಮ್ಮ ಆಹಾರ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಯನ್ನು ಸ್ವಾಗತಿಸುತ್ತಾ ನಾನು ಕೆಲವು ವಿಷಯಗಳನ್ನು ಹೇಳುತ್ತೇನೆ. ಗ್ರಾಮಾಂತರಗಳಲ್ಲಿ ಸಾಕಷ್ಟು ಆಹಾರ ದೊರಕುತ್ತಾ ಇಲ್ಲ. ಇದು ನಿರ್ವಿವಾದ ವಿಷಯ. ಪಟ್ಟಣಗಳಲ್ಲಿ ಸ್ವಲ್ಪಮಟ್ಟಿಗೆ ಪಡಿತರ ಪದ್ಧತಿಯಿಂದಲೂ, ಪಡಿತರವಲ್ಲದೆ ವಿರೋಧ ಪಕ್ಷದವರು ಹೇಳಿದ ಹಾಗೆ ಹೆಚ್ಚು ಕ್ರಮವನ್ನು ಕೊಟ್ಟು ಆಹಾರ ಧಾನ್ಯವನ್ನು ಕೊಂಡುಕೊಳ್ಳುವುದಕ್ಕೆ ಅವಕಾಶವಿರುವುದರಿಂದಲೂ ಅಕ್ಕಿ, ರಾಗಿ ಮತ್ತು ಗೋಧಿ ಮೊದಲಾದ ಪದಾರ್ಥಗಳು ದೊರಕುತ್ತಾ ಇದೆ. ಆದರೆ ಗ್ರಾಮಾಂತರಗಳಲ್ಲಿ ಅಂಗಡಿಗಳಲ್ಲಾಗಲೀ, ಅಲ್ಲಲ್ಲಿ ಪ್ರಾರಂಭ ಮಾಡಿರತಕ್ಕ ಸೊಸೈಟಿಗಳಲ್ಲಾಗಲೀ ಸಾಕಷ್ಟು ಆಹಾರಧಾನ್ಯಗಳು ಸಿಕ್ಕುವುದಿಲ್ಲ ಎನ್ನುವುದು ಖಂಡಿತವಾಗಿಯೂ ನಿಜ. ಅನೇಕ ವೇಳೆ ಸೊಸೈಟಿಯವರು ಅಥವಾ ಫೇರ್‌ಪ್ರೈಸ್ ಡಿಪೋಗಳವರು ಡಿಸ್ಟ್ರಿಕ್ಟ್ ಡಿಪೋಗಳಿಂದಲೂ ಮತ್ತು ಸರ್ಕಾರಿ ಡಿಪೋಗಳಿಂದಲೂ ಆಹಾರ ಧಾನ್ಯವನ್ನು ತೆಗೆದುಕೊಂಡು ಸಾಗಿಸುವಾಗ ಬಹಳ ಮಟ್ಟಿಗೆ ಗ್ರಾಮಾಂತರಗಳ ಕಡೆ ಸಾಗಿಸುವಾಗ ಏನೋ ಕಾರಣಗಳಿಂದ ಮೋಸಮಾಡಿ ಜನರಿಗೆ ಸಾಕಷ್ಟು ಆಹಾರ ಧಾನ್ಯಗಳು ಸಿಕ್ಕದ ರೀತಿಯಲ್ಲಿ ಮಾಡುತ್ತಿದ್ದಾರೆ ಎಂದು ನಾನು ಸರ್ಕಾರದ ಗಮನಕ್ಕೆ ತರುತ್ತೇನೆ. ಗ್ರಾಮಾಂತರಗಳ ಕಡೆ ಒಂದು ರೂಪಾಯಿ 53 ಪೈಸಾ ಕೊಟ್ಟರೆ ಒಂದು ಕೆ. ಜಿ. ಅಕ್ಕಿ ಸಿಕ್ಕುತ್ತದೆ. ಆದರೆ ಗ್ರಾಮಾಂತರದಲ್ಲಿರತಕ್ಕ ಜನಗಳಿಗೆ ಅಷ್ಟು ದುಡ್ಡನ್ನು ಕೊಟ್ಟು ಅಕ್ಕಿಯನ್ನು ಕೊಂಡುಕೊಳ್ಳುವ ಶಕ್ತಿ ಇಲ್ಲ. ಅವರಿಗೆ ಕೆಲಸವೂ ಇಲ್ಲ. ಆದ್ದರಿಂದ ಗ್ರಾಮಾಂತರಗಳ ಜನಗಳಿಗೆ ಕೆಲಸವನ್ನು ಒದಗಿಸುವುದಕ್ಕೆ ಪ್ರಯತ್ನಪಟ್ಟು ರಿಲೀಫ್ ವರ್ಕ್ಸ್ ಹೆಚ್ಚು ಹೆಚ್ಚಿಗೆ ಕೊಡಬೇಕೆಂದು ನಾನು ಹೇಳುತ್ತೇನೆ. ಬೆಳೆಗಾರರಿಗೆ ನಿಜವಾಗಿ ಕಷ್ಟ ಇದೆ. ಸಾಧಾರಣವಾಗಿ ಎಲ್ಲರೂ ಸರ್ಕಾರದಮೇಲೆ ಆಧಾರವಾಗಿದ್ದಾರೆ. ಆಹಾರವನ್ನು ಬೆಳೆಯದೆ ಹೋದರೆ ಹೊರಗಡೆಯಿಂದ ಆಹಾರವನ್ನು ತಂದುಕೊಂಡು ಹೇಗೆ ಜನಗಳನ್ನು ಕಾಪಾಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಆಡಳಿತ ಮಾಡುವ ಪಕ್ಷದವರ ವಿರುದ್ಧವಾಗಿ ಅವರನ್ನು ವಿರೋಧಿಸುವುದಕ್ಕೋಸ್ಕರ, ಜನ-

ಗಳ ಪ್ರೀತಿಯನ್ನು ಗಳಿಸುವುದೂಕ್ಕೋಸ್ಕರ ಜನಗಳಲ್ಲಿ ಒಂದು ಪ್ರಚಾರ ಮಾಡುವುದಕ್ಕೆ ಕಾಂಗ್ರೆಸ್
ಸರ್ಕಾರದವರು ಸಾಕಷ್ಟು ಆಹಾರವನ್ನು ಒದಗಿಸುತ್ತಿಲ್ಲ. ಮಂತ್ರಿಗಳು ಆ ಬಗ್ಗೆ ಸಾಕಷ್ಟು
ಎಚ್ಚರಿಕೆಯನ್ನು ವಹಿಸುತ್ತಿಲ್ಲ ಎಂದು ಹೇಳಿಕೊಂಡು ಜನರನ್ನು ಸ್ವಲ್ಪಮಟ್ಟಿಗೆ ಕೆಲವರು ಹುರಿದುಂಬಿಸ
ಬಹುದು. ಆದರೆ ಜನಗಳು ತಿಳಿದುಕೊಂಡಿದ್ದಾರೆ, ಮಳೆ ಆಗದೆ ಹೋದರೆ, ಬಾವಿಗಳಲ್ಲಿ ನೀರು
ಒಣಗಿ ಹೋದರೆ ಬೆಳೆಯನ್ನು ಬೆಳೆಯುವುದು ಹೇಗೆ ಎಂದು ವಿರೋಧ ಪಕ್ಷದವರು ಸುಮ್ಮನೆ ಪ್ರಚೋ
ದನೆ ಮಾಡಬಲ್ಲರು ಎಂದು ಜನಗಳು ತಿಳಿದುಕೊಂಡಿದ್ದಾರೆ. ಇದನ್ನು ವಿರೋಧಪಕ್ಷದವರು ಎಚ್ಚರಿಕೆ
ಯೆಂದು ಪರಿಗಣಿಸಬೇಕು. ಆಡಳಿತ ಪಕ್ಷದ ಸದಸ್ಯರಾಗಲೀ ವಿರೋಧಪಕ್ಷದ ಸದಸ್ಯರಾಗಲೀ
ಗ್ರಾಮಾಂತರಗಳ ಜನಗಳು ಕಷ್ಟಪಟ್ಟು ಕೆಲಸಮಾಡುವುದಕ್ಕೆ, ಭಾವಿಗಳನ್ನು ತೋಡುವುದಕ್ಕೆ
ಕಾಲುವೆಗಳನ್ನು ಮಾಡುವುದಕ್ಕೆ ಇನ್ನೂ ಹೆಚ್ಚು ಹೆಚ್ಚಿಗೆ ಬೆಳೆಯುವುದಕ್ಕೆ ಪ್ರೋತ್ಸಾಹ ಮಾಡದೇ
ಹೋದರೆ ಬರೀ ಭಾಷಣಗಳಿಂದ ಪ್ರಯೋಜನವಿಲ್ಲ. ವಿರೋಧ ಪಕ್ಷದವರಾಗಲೀ ಆಡಳಿತವನ್ನು
ನಡೆಸತಕ್ಕ ನಮ್ಮ ಪಕ್ಷದವರಾಗಲೀ ಬಹಳ ಎಚ್ಚರಿಕೆಯಿಂದ ಮಾತನಾಡಬೇಕು. ಅಭಾವ ಪರಿಸ್ಥಿತಿ
ಬರೀ ದಕ್ಷಿಣ ಭಾಗಕ್ಕೆ ಮಾತ್ರ ಬಂದಿಲ್ಲ, ಮೈಸೂರು ದೇಶಕ್ಕೆ ಮಾತ್ರ ಬಂದಿಲ್ಲ. ಬಂಗಾಳ,
ಪಂಜಾಬು ಮತ್ತು ಮಧ್ಯ ಪ್ರದೇಶ ಈ ದೇಶಗಳಲ್ಲಿಯೂ ಆಹಾರದ ಕೊರತೆ ಇದೆ. ಇಂಡಿಯಾ ದೇಶ
ದಲ್ಲೇ ಇಂಥಾ ಕಷ್ಟವಿದೆ ಎಂದು ಎಲ್ಲಾ ಮಾನ್ಯ ಸದಸ್ಯರೂ ಪರಿಗಣಿಸಬೇಕು. ಅಧಿಕಾರಿಗಳೂ
ಪರಿಗಣಿಸಬೇಕು. ಜನಸಾಮಾನ್ಯರು ಇದನ್ನು ತಿಳಿದುಕೊಂಡಿದ್ದಾರೆ. ಪತ್ರಿಕೆಗಳವರು ಆಹಾರದ
ವಿಷಯಕ್ಕೆ ಒಂದು ಕಾಲಂ ಬಿಟ್ಟುಕೊಡಬೇಕು. ಆಹಾರದ ಕೊರತೆಯಲ್ಲಿ, ಆಹಾರದ ಸುಧಾರಣೆ
ಯಲ್ಲಿ, ಆಹಾರಧಾನ್ಯವನ್ನು ಹೆಚ್ಚಿಗೆ ಬೆಳೆಯಬೇಕಾದರೆ ಏನು ಮಾಡಬೇಕು ಎಂಬುದಕ್ಕೆ ಸಲಹೆ
ಕೊಡುವುದಕ್ಕೆ ಪತ್ರಿಕೆಗಳವರು ಒಂದು ಕಾಲಂ ಅನ್ನು ಪ್ರತಿ ದಿವಸ ಇಡಬೇಕು ಎಂದು ನಾನು
ಅಭಿಪ್ರಾಯಪಡುತ್ತೇನೆ. ನಾವು ನಮ್ಮ ಪ್ರದೇಶದಲ್ಲಿ ಎಷ್ಟೋ ಬಾವಿಗಳನ್ನು ತೆಗೆಸಿದ್ದೇವೆ. ಆ
ರೀತಿ ತಗೆಸಿದ ಬಾವಿಗಳಿಗೆ ಅನೇಕ ಸದಸ್ಯರು ಹೇಳಿದ ಹಾಗೆ ವಿದ್ಯುಚ್ಛಕ್ತಿ ಸಿಕ್ಕುತ್ತಾ ಇಲ್ಲ. ಪಂಪು
ಸೆಟ್ಟುಗಳನ್ನು ಇಟ್ಟಿರುವುದಕ್ಕೆ ಪವರ್ ಕೊಡುತ್ತಾ ಇಲ್ಲ. ಪವರ್ ಕನೆಕ್ಷನ್ ಕೊಡುವುದು ಏತಕ್ಕೆ
ನಿಧಾನವಾಗಿದೆ ಎನ್ನುವುದಕ್ಕೆ ತಂತಿಯಿಲ್ಲ ಟ್ರಾನ್ಸ್‌ಫಾರ್ಮರ್ಸ್ ಅಲ್ಲದೆ ಮತ್ತೊಂದು ಪದಾರ್ಥ
ಇಲ್ಲ ಎಂದು ಕಾರಣ ಹೇಳುತ್ತಿದ್ದಾರೆ. ಈ ಕಡೆ ಸರ್ಕಾರದವರು ಹೆಚ್ಚಿಗೆ ಗಮನವನ್ನು ಕೊಡಬೇಕು.
ವಿದ್ಯುಚ್ಛಕ್ತಿಯನ್ನು ಆಂಧ್ರಕ್ಕೆ, ಮತ್ತೊಂದು ದೇಶಕ್ಕೆ ಕೊಡುವುದಕ್ಕಿಂತ ಮೊದಲು ನಮ್ಮ ದೇಶಕ್ಕೆ
ಹಂಚುವುದಕ್ಕೆ ಸರ್ಕಾರದವರು ಯೋಚನೆ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ.
ಸೋಮವಾರ ಊಟ ಬಿಡಬೇಕೆಂದು ಹೇಳುತ್ತಾರೆ. ಎರಡು ದಿವಸ ಮೂರು ದಿವಸ ಬೇಕಾದರೆ
ಉಪವಾಸ ಇರಬಹುದು. ಆದರೆ ಗ್ರಾಮಾಂತರಗಳಲ್ಲಿ ನಾಲ್ಕಾರು ದಿವಸ ಉಪವಾಸ ಮಾಡುವ
ಸಂಸಾರಗಳಿವೆ. ಎಷ್ಟೋ ಸಂಸಾರಗಳಲ್ಲಿ 3 ದಿವಸಕ್ಕೆ ಒಂದು ಸಾರಿ ಅರ್ಧ ಸೇರಿನಷ್ಟು ಕಡಲೆ
ಯನ್ನು ತಿಂದು ಜೀವನ ಮಾಡುವ ಸಂದರ್ಭಗಳಿವೆ. ಇಲ್ಲಿ ಇರತಕ್ಕವರು ಸ್ವಲ್ಪ ಕೆಲಸಕ್ಕೆ ಹೆಚ್ಚಿಗೆ
ಓಡಾಡತಕ್ಕವರು ಹೊಟ್ಟೆ ಹಸಿದರೆ ಹೋಟೆಲಿನಲ್ಲಿ ತಿನ್ನತಕ್ಕವರು, ಮತ್ತು ಹೊಟ್ಟೆ ತುಂಬಿ ಹೋಯಿತು.
ಎಂದು ಅರ್ಧ ಊಟ ಬಿಟ್ಟು ಹೊರಗೆ ಬರತಕ್ಕಂಥವರು. ನಿಜವಾಗಿ ಧನಿಕರು ಕಷ್ಟದಲ್ಲಿ ಇರುವುದಿಲ್ಲ.
ಬಹಳ ಸಂಬಳ ಬರುವ ಅಧಿಕಾರಿಗಳಾಗಲೀ, ಬಹಳ ಸಂಪಾದನೆ ಮಾಡತಕ್ಕ ವ್ಯಾಪಾರಸ್ಥರಿ
ಗಾಗಲ ಮತ್ತು ಧನಿಕರಾಗಲೀ ಅಹಾರವನ್ನು ಹೇಗೆ ಉಳಿಸಬೇಕು ಎಂಬುದನ್ನು ಯೋಚನೆ
ಮಾಡುವುದಿಲ್ಲ. ಮನೆಯ ಹೊರಗಡೆ ಬಿಸಾಡಿರತಕ್ಕ ಎಂಜಲು ಎಲೆಯಲ್ಲಿ ಎಷ್ಟೋ ಅನ್ನ
ಬಿದ್ದಿರುತ್ತದೆ. ಊಟಕ್ಕೆ 3 ಚಪಾತಿಯನ್ನು ಬಡಿಸಿದ್ದರೆ ಒಂದು ಚಪಾತಿಯನ್ನೋ ಅಥವಾ
ಅರ್ಧ ಚಪಾತಿಯನ್ನೋ ಹೊರಗಡೆ ಬಿಸಾಡಿರುತ್ತಾರೆ. ಅವರುಗಳೆಲ್ಲರೂ ಏತಕ್ಕೆ ಉಳಿ
ತಾಯ ಮಾಡಬಾರದು ? ಇದನ್ನು ಆಡಳಿತ ಪಕ್ಷದವರಾಗಲೀ ವಿರೋಧಪಕ್ಷದವರಾಗಲೀ ಯೋಚನೆ
ಮಾಡಬೇಕು. ನಾವು ಆಹಾರವನ್ನು ಉಳಿಸದೇ ಹೋದರೆ, ನಮ್ಮಲ್ಲಿ ಆಹಾರವಿಲ್ಲ ಎಂದು
ಕೂಗಿದರೆ ಏನು ಪ್ರಯೋಜನವಾಗುತ್ತದೆ ? ನಾವು ಹೇಳಿದಂತೆ ನಡೆಯಬೇಕು. ಇಲ್ಲದೆ ಹೋದರೆ
ವಿರೋಧಪಕ್ಷದವರಾಗಲೀ ನಮ್ಮ ಪಕ್ಷದ ಸದಸ್ಯರಾಗಲೀ ಸುಮ್ಮನೆ ಮಾತನಾಡಿದರೆ ಏನು
ಬರುತ್ತದೆ ? ಅಷ್ಟೇ ಅಲ್ಲದೆ ನಾವು ವ್ಯವಸಾಯ ಮಾಡುವುದಕ್ಕೆ ಬರೀ ರೈತರು ಮಾತ್ರ
ಹೊಣೆಗಾರರು ಎಂದು ತಿಳಿದುಕೊಂಡಿರುವ ಹಾಗೆ ಇದೆ. ಎಲ್ಲಾ ಇಲಾಖೆ ಅಧಿಕಾರಿಗಳು ಅದಕ್ಕೆ
ಹೊಣೆಯಲ್ಲ ಎಂದು ತಿಳಿದುಕೊಂಡಿರುವ ಹಾಗೆ ಇದೆ. ಎಲ್ಲಾ ಇಲಾಖೆಯ ಅಧಿಕಾರಿಗಳ ಹೊಣೆ
ಇಲ್ಲವೆಂದೂ, ವ್ಯವಸಾಯ ಇಲಾಖೆಯವರು ಮಾತ್ರ ಹೊಣೆಗಾರರು ಎಂದು ತಿಳಿದುಕೊಂಡಿರುವ
ಹಾಗಿದೆ. ಹಾಗೆ ತಿಳಿದುಕೊಳ್ಳಬಾರದು. ನಮ್ಮ ಅಣ್ಣ ತಮ್ಮಂದಿರು, ಅಧಿಕಾರಿಗಳು, ನೆಂಟರಿಷ್ಟರು
ಎಲ್ಲರೂ ಗ್ರಾಮಾಂತರದಲ್ಲಿ ಇದ್ದಾರೆ. ಬೆಂಗಳೂರು ದೊಡ್ಡ ಪಟ್ಟಣ. ಇಲ್ಲಿ 14-15 ಲಕ್ಷ ಜನರು
ಇದ್ದಾರೆ. ಇದರ ಐದರಷ್ಟು ಆರಷ್ಟು ಜನರು ಹಳ್ಳಿಗಾಡಿನಲ್ಲಿದ್ದಾರೆ. ಅವರನ್ನು ಮರೆತು ಬಿಡ
ಬಾರದು. ಅವರ ಕಷ್ಟಗಳನ್ನು ಎಲ್ಲಾ ಇಲಾಖೆಗಳ ಅಧಿಕಾರಿಗಳು ಯೋಚನೆ ಮಾಡಬೇಕು.

(ಶ್ರೀ ಆರ್. ಮುನಿಸ್ವಾಮಯ್ಯ)

ರೆವಿನ್ಯೂ ಇಲಾಖೆಯ ಅಧಿಕಾರಿಗಳಾಗಲೀ ಪೋಲೀಸು ಇಲಾಖೆಯ ಅಧಿಕಾರಿಗಳಾಗಲೀ ವ್ಯವಸಾಯ ಇಲಾಖೆಯ ಅಧಿಕಾರಿಗಳಾಗಲೀ, ಸ್ಟಾಂಪು, ರಿಜಿಸ್ಟ್ರೇಷನ್ ಇಲಾಖೆಯ ಅಧಿಕಾರಿಗಳಾಗಲೀ, ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳಾಗಲೀ ಪ್ರತಿಯೊಬ್ಬರೂ, ಎಲ್ಲಾ ಇಲಾಖೆಯವರೂ ವ್ಯವಸಾಯವನ್ನು ಉತ್ತಮಪಡಿಸುವುದಕ್ಕೆ ಯೋಚನೆ ಮಾಡಬೇಕು. ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೂ ವ್ಯವಸಾಯದ ಕಾರ್ಯಕ್ರಮವನ್ನು ಗೊತ್ತುಪಡಿಸಬೇಕು. ಒಬ್ಬ ಅಧಿಕಾರಿ ಕನಿಷ್ಠಪಕ್ಷ ಒಂದು ನೂರು ಎಕರೆ ಭೂಮಿಯಲ್ಲಾದರೂ ಬೆಳೆಯನ್ನು ಬೆಳೆಸಬೇಕು ಎಂದು ಯೋಚನೆ ಮಾಡಬೇಕು. ಒಬ್ಬೊಬ್ಬ ಅಧಿಕಾರಿ ಕನಿಷ್ಠಪಕ್ಷ ಎರಡು ಗ್ರಾಮಗಳನ್ನು ಗೊತ್ತು ಮಾಡಿಕೊಂಡು ಬೆಳೆಯನ್ನು ಬೆಳೆಸಿದರೆ ಸಾಕು. ಮೂರು ತಿಂಗಳಲ್ಲಿ ಸಾಕಷ್ಟು ಧಾನ್ಯವನ್ನು ಬೆಳೆದು ಒದಗಿಸಬಹುದು. ಯಾವುದೋ ಒಂದು ಇಲಾಖೆಯ ಮೇಲೆ ಆರೋಪಣೆ ಮಾಡಿ ಸುಮ್ಮನೆ ಭಾಷಣಗಳನ್ನು ಮಾಡಿದರೆ ಅದರಿಂದ ತೃಪ್ತಿಪಡಿಸುವುದಕ್ಕಾಗುವುದಿಲ್ಲ. ಪ್ರತಿಯೊಬ್ಬರೂ ಹೊಣೆಯನ್ನು ಹೊರಬೇಕು. ಏನು ಮಾಡಬೇಕು ಎಂಬುದಕ್ಕೆ ಒಂದು ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡಬೇಕು. ಅನೇಕ ಕೆರೆಗಳಲ್ಲಿ ಹೂಳು ತೆಗೆಸಬೇಕು. ಕಾಲುವೆ ಮಾಡಬೇಕು. ಮರಗಳನ್ನು ಬೆಳೆಸಬೇಕು. ಮಳೆ ಬರಬೇಕಾದರೆ ಪ್ರತಿಯೊಬ್ಬ ಸದಸ್ಯರು ಇಷ್ಟಿಷ್ಟು ಮರಗಳನ್ನು ಬೆಳೆಸಬೇಕೆಂದು ಲೆಕ್ಕ ಹಾಕಿಕೊಂಡು ಅದರಂತೆ ಮರಗಳನ್ನು ಬೆಳೆಸಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ಎಷ್ಟು ಮರಗಳನ್ನು ಬೆಳೆಸಿದ್ದೀರಿ ?

ಶ್ರೀ ಆರ್. ಮುನಿಸ್ವಾಮಯ್ಯ.—ನಾನು 60 ಮರಗಳನ್ನು ಬೆಳೆಸಿದ್ದೇನೆ. ಮರಗಳೂ ಸಹ ವ್ಯವಸಾಯಕ್ಕೆ ಅನುಕೂಲವಾಗುತ್ತವೆ. ಮತ್ತು ಮಳೆ ಬರುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಮರಗಳನ್ನು ಬೆಳೆಸಬೇಕು. ರೈತರಿಗೆ ಹೆಚ್ಚಿಗೆ ನೀರಾವರಿ ಸೌಲಭ್ಯವನ್ನು ಸರ್ಕಾರದವರು ಒದಗಿಸಬೇಕು. ಈಗ ಸಾಧ್ಯವಾದಷ್ಟು ಕೃತಕ ಗೊಬ್ಬರದ ಆಧಾರದಿಂದಲೇ ವ್ಯವಸಾಯ ಮಾಡುತ್ತಿದ್ದಾರೆ ರೈತರು ಹಸುರೆಲೆ ಗೊಬ್ಬರವನ್ನು ಮರೆತಂತೆ ಕಾಣುತ್ತದೆ. ಆದ್ದರಿಂದ ರೈತನು ಹಸುರೆಲೆ ಗೊಬ್ಬರವನ್ನು ಉಪಯೋಗಿಸುವುದಕ್ಕೆ ಹೇಳಿ ಕೊಡಬೇಕು, ಅದು ಕಾರ್ಯರೂಪಕ್ಕೆ ಬರುವಂತೆ ಏನು ಮಾಡಬೇಕೆಂದರೆ, ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ರೈತರಿಗೆ ಹೇಳಬೇಕು. ಮುಖ್ಯ ಮಂತ್ರಿಗಳಿಗೂ ಮತ್ತು ಆಹಾರ ಮಂತ್ರಿಗಳಿಗೂ ನಾನು ಮುಖ್ಯವಾಗಿ ಸಲಹೆ ಕೊಡುತ್ತೇನೆ. ತಾವು ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನೂ ಕನಿಷ್ಠಪಕ್ಷ ಎರಡೆರಡು ಗ್ರಾಮಗಳಿಗೆ ಹೊಣೆ ಮಾಡಬೇಕು. ಕೆಲವು ಧಾನ್ಯಗಳು ಮೂರು ತಿಂಗಳಿಗೆ ಬೆಳೆ ಬರುತ್ತದೆ. 65 ದಿವಸಗಳಲ್ಲಿ ಬೆಳೆ ಬರತಕ್ಕ ರಾಗಿ ಇದೆ. ಇವುಗಳನ್ನು ಸಾಧ್ಯವಾದಷ್ಟು ಬೆಳೆಸಿದ್ದಾರೆ. ಈ ರೀತಿ ಬೆಳೆಯನ್ನು ಬೆಳೆಸುವುದಕ್ಕೆ ಎಲ್ಲಾ ಅಧಿಕಾರಿಗಳಿಗೂ ಒಬ್ಬೊಬ್ಬರಿಗೆ ಎರಡು ಗ್ರಾಮಗಳ ಹೊಣೆಗಾರಿಕೆಯನ್ನು ಗೊತ್ತು ಮಾಡಬೇಕೆಂದು ಒತ್ತಿ ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

4-00 P.M.

†ಶ್ರೀ ಸಿದ್ದಯ್ಯ ಕಾಶೀಮಠ.—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದಿರತಕ್ಕ ಬೇಡಿಕೆಗಳನ್ನು ನಾನು ವಿರೋಧ ಮಾಡುತ್ತಾ ಪ್ರಾಮುಖ್ಯವಾದ ವಾರ್ತಾ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ವಾರ್ತಾ ಇಲಾಖೆ ನಾನು ತಿಳಿದುಕೊಂಡಿರುವ ಹಾಗೆ ರಾಜ್ಯದಲ್ಲಿರತಕ್ಕ ವಾರ್ತೆಗೆ ಸಂಬಂಧಿಸಿದ ಕೆಲಸಗಳನ್ನು ಮಾಡುವುದರಲ್ಲಿ ವಿಫಲತೆಯನ್ನು ಹೊಂದಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು ಎಂದು ನಾನು ಹೇಳುತ್ತೇನೆ. ಮೈಸೂರು ರಾಜ್ಯದಲ್ಲಿ ಸಾಕಷ್ಟು ಪ್ರೇಕ್ಷಣೀಯ ಸ್ಥಳಗಳು ಇದ್ದರೂ ಅದರ ಮಾಹಿತಿಗಳನ್ನು ಸರಿಯಾಗಿ ತೆಗೆಯದೆ ಕೇವಲ ಮುಖ್ಯವಾಗಿ ಕಣ್ಣಿಗೆ ಕಾಣುವಂತಹ ಕೆಲಸ ಸಂದರ್ಭಗಳಲ್ಲಿ ಮಾತ್ರ ವಿಷಯಗಳನ್ನು ಬೆಳಕಿಗೆ ತಂದಿರತಕ್ಕ ಪ್ರಸಂಗಗಳು ಕಂಡು ಬರುತ್ತವೆ. ಈ ಸಂದರ್ಭದಲ್ಲಿ ನಾನು ಒಂದು ಸಲಹೆ ಮಾಡುವುದೇನೆಂದರೆ, ನಮ್ಮಲ್ಲಿ ಪ್ರವಾಸೀ ಕೇಂದ್ರಗಳನ್ನು ಮಾಡುವ ಅರ್ಹತೆಯುಳ್ಳ ಅನೇಕ ಸ್ಥಳಗಳು ಇದ್ದರೂ ಸಾಕಷ್ಟು ರೀತಿಯಿಂದ ಪ್ರವಾಸೀ ಕೇಂದ್ರಗಳು ಆಗಿಲ್ಲ. ರಾಜ್ಯ ಸರಕಾರ ಮೈಸೂರು, ಬೆಂಗಳೂರು ಹಾಗೂ ಜೋಗ್‌ಫಾಲ್ಸ್ ಈ ಕೇಂದ್ರಗಳ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿದೆಯೇ ಹೊರತು ಇತರ ಕಡೆಗಳಿಗೆ ಆಸಕ್ತಿ ವಹಿಸುತ್ತಿಲ್ಲ. ಇದಕ್ಕಾಗಿ ನಾನು ಸಲಹೆ ಮಾಡುವುದು ರಾಜ್ಯಗಳಲ್ಲಿರುವ ಎಲ್ಲ ಪ್ರೇಕ್ಷಣೀಯ ಸ್ಥಳಗಳನ್ನೂ ಹಾಗೂ ದೇವಾಲಯಗಳನ್ನೂ ಕುರಿತ ಹಾಗೂ ಫೋಟೋಗಳೂ ಇರುವ ಒಂದು ಸಣ್ಣ ಹೊತ್ತಿಗೆಯನ್ನು ಒಂದು ಗೈಡ್ ರೀತಿಯಲ್ಲಿ ತಯಾರು ಮಾಡಿ ಇಂತಹ ಬುಕ್‌ಲೆಟ್‌ಗಳನ್ನು ಹೊರಗಿನಿಂದ ಮೈಸೂರಿಗೆ ಬರುವ

ಪ್ರವಾಸಿಗರಿಗೆ ಕೊಟ್ಟರೆ ಅವರಿಗೂ ಅನುಕೂಲವಾಗುತ್ತದೆ ಮತ್ತು ಇದರಂತೆ ಹಳ್ಳಿಗಳಲ್ಲಿರುವ ಜನರಿಗೂ ಒದಗಿಸಿಕೊಡಬೇಕು. ಇಂತಹ ಫೋಟೋಗಳಿಂದ ಕೂಡಿದ, ಎಲ್ಲ ಕಡೆಗಳಲ್ಲಿಯೂ ನಡೆಯುವ ಜಾತ್ರೆಗಳ ಹಾಗೂ ಇನ್ನಿತರ ಪ್ರೇಕ್ಷಣೀಯ ಸ್ಥಳಗಳ ವಿವರಗಳನ್ನು ಕುರಿತ ಹೊತ್ತಿಗೆ ಇದ್ದರೆ ಅವನ್ನು ಯಾವಾಗಲಾದರೂ ನೋಡುವ ಪ್ರಸಂಗ ಬರುತ್ತದೆ ಎಂದು ನಾನು ಇಲ್ಲಿ ಹೇಳುತ್ತೇನೆ. ಅಲ್ಲದೆ ಈಗ ನಾವು ನೋಡುತ್ತಿರುವ ಹಾಗೆ ಹಳ್ಳಿಗಾಡಿನಲ್ಲಿ ಎಷ್ಟೋ ಜಾತ್ರೆಗಳು ಆಗುತ್ತಲಿವೆ ಮತ್ತು ಹಳ್ಳಿಗಾಡಿನ ಜನರು ಇಲ್ಲಿ ನಡೆಸುವ ಆಟಪಾಟಗಳು ಇವುಗಳಿಗೆ ಹೆಚ್ಚಿನ ಆದ್ಯತೆ ಕೊಡುವುದಕ್ಕೆ ಅನುಕೂಲವಾಗುವಂತೆ ಯಾವ ಕಾರ್ಯಕ್ರಮಗಳನ್ನೂ ಈಗ ವಾರ್ತಾ ಕೇಂದ್ರಗಳು ಮಾಡುತ್ತಿಲ್ಲ. ಈಗಲಾದರೂ ಇದರ ಕಡೆಗೆ ವಾರ್ತಾ ಇಲಾಖೆ ಗಮನ ಕೊಡಬೇಕು. ಹಳ್ಳಿಗಾಡಿನ ಜನಕ್ಕೆ ಅನುಕೂಲವಾಗುವಂತಹ ಹಳ್ಳಿಯ ಜಾತ್ರೆಗಳು ಮತ್ತು ಹಳ್ಳಿಗಾಡಿನ ಜನರ ಸಮಸ್ಯೆಗಳು ಇವುಗಳನ್ನೊಳಗೊಂಡ ಚಲನಚಿತ್ರವನ್ನು ತಯಾರಿಸಿ ಅದನ್ನು ಎಲ್ಲ ಹಳ್ಳಿಗಾಡಿನ ಜನಗಳು ನೋಡಲು ಅನುಕೂಲವಾಗುವಂತೆ ಪ್ರದರ್ಶಿಸಬೇಕು. ಇದರ ಮುಖೇನ ಜನರಲ್ಲಿ ತಿಳುವಳಿಗೆ ಮಾಡಿ ಕೊಡಲು ಸಹಾಯ ಮಾಡಿದಂತಾಗುತ್ತದೆ.

ಆಗಾಗ್ಗೆ ರಾಜ್ಯ ಸರ್ಕಾರ ಇಂತಹ ಚಿತ್ರಗಳನ್ನು ತಯಾರಿಸಿ ರೈತರಿಗೆ ಅನುಕೂಲವಾಗುವಂತೆ ರೈತರೇ ಭಾಗವಹಿಸುವಂತೆ, ರೈತರಿಗೆ ಸಂಬಂಧಪಟ್ಟ ವಿವಿಧ ಅಂಶಗಳನ್ನು ಕುರಿತ ಎಂದರೆ, ಹೆಚ್ಚು ಬೆಳೆ ಹೇಗೆ ಮಾಡಬೇಕು ಇತ್ಯಾದಿ ವಿವರಗಳನ್ನು ತೋರಿಸುವಂತಹ ಚಿತ್ರಗಳನ್ನು ಜನಕ್ಕೆ ತೋರಿಸಿದರೆ ಅದರಿಂದ ಅವರಿಗೆ ಅನುಕೂಲವಾಗುತ್ತದೆ. ಈಗಾಗಲೇ ನಾವು ನೋಡುತ್ತಿರುವ ಚಲನಚಿತ್ರಗಳಲ್ಲಿ ಬರೀ ಪರದೇಶದ ಬಗ್ಗೆ ಕುರಿತ ವಿವರಣೆಗಳೇ ಹೆಚ್ಚಾಗಿರುತ್ತವೆ. ಇವು ಅಮೆರಿಕಾ ದೇಶದಲ್ಲಿ ಅಲ್ಲಿನ ಜನ ಹೆಚ್ಚು ಆಹಾರದ ಬೆಳೆಯನ್ನು ಹೇಗೆ ಬೆಳೆಯುತ್ತಾರೆ, ಯಾವ ರೀತಿಯಾಗಿ ಅದನ್ನು ಪ್ರಯೋಗ ಮಾಡುತ್ತಾರೆ. ಇತ್ಯಾದಿ ವಿವರಗಳನ್ನೊಳಗೊಂಡ ಚಿತ್ರಗಳನ್ನು ನಾವು ನೋಡುತ್ತಿದ್ದೇವೆ. ಇದೇ ರೀತಿಯಲ್ಲಿ ನಮ್ಮ ದೇಶದಲ್ಲೂ ಯಾವ ರೀತಿಯಾಗಿ ಒಳ್ಳೆಯ ಬೀಜಗಳನ್ನು ಉಪಯೋಗಿಸಿ ಹೆಚ್ಚು ಬೆಳೆ ಬೆಳೆಯಬೇಕು ಮತ್ತು ಯಾವ ರೀತಿಯಾಗಿ ಇದನ್ನು ಸುಧಾರಿಸಬೇಕು ಎನ್ನುವುದರ ಫಿಲ್ಮ್‌ಗಳನ್ನು ತಯಾರು ಮಾಡಿ ಅದನ್ನು ಜನರಲ್ಲಿ ಪ್ರಚಾರ ಮಾಡಿದರೆ ಅದರಿಂದ ಜನಕ್ಕೆ ಒಂದು ರೀತಿಯ ಉತ್ಸಾಹ ಬರುತ್ತದೆ. ಇದರಿಂದ ವ್ಯವಸಾಯದ ಅಭಿವೃದ್ಧಿಯನ್ನೂ ಮಾಡಿದಂತಾಗುತ್ತದೆ. ಪರದೇಶಗಳಲ್ಲಿ ಮಾಡುವಂತೆ ನಮ್ಮ ದೇಶದಲ್ಲಿರುವ ಹಳ್ಳಿ ಜನಗಳ ತಿಳುವಳಿಕೆ ಹೆಚ್ಚಾಗುವಂತೆ ತಕ್ಕ ಕಾರ್ಯಕ್ರಮಗಳನ್ನು ಸರ್ಕಾರದವರು ಹಾಕಿಕೊಂಡು ಈ ಇಲಾಖೆಯವರು ಪ್ರಯತ್ನ ಮಾಡಬೇಕು. ಇದರಿಂದ ನಮ್ಮ ದೇಶದ ವ್ಯವಸಾಯಕ್ಕೆ ಅನುಕೂಲವಾಗುವ ಎಲ್ಲ ವಿಷಯಗಳನ್ನೂ ಅಳವಡಿಸಿಕೊಂಡು ಹೆಚ್ಚು ಬೆಳೆ ಬೆಳೆದರೆ ಆಹಾರದ ಉತ್ಪತ್ತಿಯನ್ನೂ ಹೆಚ್ಚಿಸಲು ಸಾಧ್ಯವಾಗುತ್ತದೆ. ಇಂತಹ ಕೆಲಸಗಳನ್ನು ವಾರ್ತಾ ಇಲಾಖೆಯವರು ಹೆಚ್ಚು ಹೆಚ್ಚಾಗಿ ಮಾಡಿ ಹಳ್ಳಿಗಳ ಕಡೆಗೆ ಹೆಚ್ಚು ಗಮನ ಕೊಡಬೇಕು ಮತ್ತು ಹಳ್ಳಿಗಳಲ್ಲಿ ಹೆಚ್ಚು ಚಲನಚಿತ್ರಗಳನ್ನು ತೋರಿಸಬೇಕು ಎಂದು ಇಲ್ಲಿ ನಾನು ಸಲಹೆ ಮಾಡುತ್ತೇನೆ.

ಈ ವಾರ್ತಾ ಇಲಾಖೆಯವರು ಪ್ರಕಟಣೆಗಳನ್ನು ಕೊಡುವಾಗ ಸರಕಾರ ಈಗ ದೊಡ್ಡ ಪತ್ರಿಕೆಗಳಿಗೆ ಹೆಚ್ಚು ಅಡ್ವರ್ಟೈಸುಮೆಂಟುಗಳನ್ನು ಕೊಡುತ್ತಿದ್ದಾರೆ. ದೊಡ್ಡ ಪತ್ರಿಕೆಗಳು ಹೆಚ್ಚು ಖ್ಯಾತಿ ಪಡೆದಿರುವುದರಿಂದ ಮತ್ತು ಇತರ ಖಾಸಗೀ ಜನರಿಂದಲೂ ಹೆಚ್ಚು ಪ್ರಕಟಣೆಗಳೂ ಬರುತ್ತಿರುವುದರಿಂದ ಅವು ಹೆಚ್ಚು ಉತ್ಪತ್ತಿಯನ್ನು ಸಂಪಾದನೆ ಮಾಡುತ್ತಿವೆ. ಆದ್ದರಿಂದ ಸಣ್ಣ ಪತ್ರಿಕೆಗಳಿಗೆ ಆದಷ್ಟುಮಟ್ಟಿಗೆ ಸರ್ಕಾರದ ಪ್ರಕಟಣೆಗಳನ್ನು ಕೊಡಲು ಹೆಚ್ಚು ಆದ್ಯತೆ ನೀಡಿದರೆ ಸಣ್ಣ ಪತ್ರಿಕೆಗಳೂ ಕೂಡ ಬೆಳೆಯಲು ಅನುಕೂಲವಾಗುತ್ತದೆ. ಸಣ್ಣ ಪತ್ರಿಕೆಗಳ ಮುಖೇನ ಇವೊತ್ತು ರಾಜ್ಯದಲ್ಲಿ ಏನೇನಾಗುತ್ತಿದೆ ಎನ್ನುವುದನ್ನೆಲ್ಲಾ ಹಳ್ಳಿಗಳಲ್ಲಿರುವ ಜನ ತಿಳಿಯಲು ಅನುಕೂಲವಾಗುತ್ತದೆ. ಹೀಗೆ ಹಳ್ಳಿಗಾಡಿನ ಜನರಲ್ಲಿ ತಿಳುವಳಿಕೆ ಉಂಟುಮಾಡಬೇಕಾದರೆ ಸಣ್ಣ ಪತ್ರಿಕೆಗಳು ಬೇಕೇ ಬೇಕು. ಸಣ್ಣ ಪತ್ರಿಕೆಗಳು ಸರ್ಕಾರದ ಸಹಾಯವಿಲ್ಲದೆ ಮುಂದಕ್ಕೆ ಬರಲು ಸಾಧ್ಯವಿಲ್ಲ. ಆದಷ್ಟುಮಟ್ಟಿಗೆ ಸಣ್ಣ ಪತ್ರಿಕೆಗಳು ಉಳಿಯುವುದಕ್ಕೆ ಅನುಕೂಲವಾಗುವಂತೆ ಹೆಚ್ಚಿನ ಪರಿಹಾರಗಳನ್ನು ಕೊಡಲು ಪ್ರಯತ್ನ ಮಾಡಬೇಕೆಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ.

ಇನ್ನು ಡೈರೆಕ್ಟರ್ ಆಫ್ ಇನ್‌ಫರ್‌ಮೇಷನ್ನು ಕಚೇರಿಗಳಲ್ಲಿ ಕೆಲವು ಕೆಲಸಗಳಿಗಾಗಿ ಹೆಚ್ಚು ಅಧಿಕಾರಗಳನ್ನು ಕೊಡಬೇಕೆಂದು ನಾನು ಇಲ್ಲಿ ಒಂದು ಖೋತಾ ಸೂಚನೆ ಮಂಡಿಸಿದ್ದೇನೆ. ಅದು ಹೀಗಿದೆ :

> ''ಜಿಲ್ಲಾ ಪ್ರಕಟನಾಧಿಕಾರಿಯವರು ಜಿಲ್ಲಾಧಿಕಾರಿಗಳ ಇತರ ಅಧಿಕಾರಿಗಳ ಮತ್ತು ಸಾರ್ವಜನಿಕರ ನಡುವೆ ಲಯಸಾನ್ ಅಧಿಕಾರಿಯವರಾಗಿ ಸೇವೆ ಸಲ್ಲಿಸಬೇಕಾಗಿರುವುದರಿಂದ ಅವರ ಸ್ಥಾನವನ್ನು ಹೆಚ್ಚಿಸುವ ಬಗ್ಗೆ ಸಲಹೆ ಮಾಡುವುದು''.

ಈ ರೀತಿ ಮಾಡಲು ಸರ್ಕಾರ ಪರಿಶೀಲನೆ ಮಾಡಬೇಕು.

(ಶ್ರೀ ಸಿದ್ದಯ್ಯ ಕಾಶೀಮಠ್)

ನಮ್ಮ ಧಾರವಾಡ ಜಿಲ್ಲೆಯಲ್ಲಿ ಮುಂದರ್ಗಿ ತಾಲ್ಲೂಕಿನ ಸಿಂಟಲೂರಿನಲ್ಲಿ ಒಂದು ದೊಡ್ಡ ದೇವಾಲಯವಿದೆ ಮತ್ತು ಪ್ರತಿ ಸೋಮವಾರವೂ ಜಾತ್ರೆಯಂತೆ ಇಲ್ಲಿ ಜನಗಳು ಸೇರುತ್ತಾರೆ. ಇದು ಒಂದು ಪ್ರೇಕ್ಷಣೀಯ ಸ್ಥಳವೂ ಆಗಿದೆ. ಇಲ್ಲಿ ಹತ್ತಾರು ಹಳ್ಳಿಗಳಿಂದ ಜನ ಪ್ರತಿ ಸೋಮವಾರವೂ ಬರುತ್ತಾರೆ. ಆದುದರಿಂದ ಸರ್ಕಾರದವರು ಇದನ್ನು ಒಂದು ಪ್ರವಾಸೀ ಕೇಂದ್ರವನ್ನಾಗಿ ಮಾಡ ಬೇಕೆಂದು ಸಲಹೆ ಮಾಡುತ್ತೇನೆ. ಹಾಗೇ ಇನ್ನು ಕಪ್ಪದಗುಡದಲ್ಲೂ ಸಾಕಷ್ಟು ದೇವಾಲಯಗಳು ಉಳಿದಿವೆ. ಹೀಗೆ ಎಲ್ಲೆಲ್ಲಿ ಚೆನ್ನಾಗಿರುವ ದೇವಾಲಯಗಳು ಇವೆಯೋ ಇವುಗಳ ಫೋಟೋಗಳನ್ನು ಇಲಾಖೆಯವರು ತೆಗೆದು ಅದರ ಮುಖೇನ ಜನರಲ್ಲಿ ಹೆಚ್ಚು ಪ್ರಚಾರವಾಗುವಂತೆ ಏರ್ಪಾಡು ಮಾಡ ಬೇಕು. ಇದರಿಂದ ಪರದೇಶಗಳ ಜನರು ಬಂದಾಗ ಅವರಿಗೂ ಕೂಡ ಒಂದು ರೆಫೆರೆನ್ಸ್‌ನಂತೆ ಇದನ್ನು ಕೊಟ್ಟರೆ ಅವರುಗಳೂ ಇವನ್ನೆಲ್ಲಾ ನೋಡಲು ಒಂದು ಅವಕಾಶ ಸಿಗುತ್ತದೆ. ಇದರ ಕಡೆಗೆ ವಾರ್ತಾ ಇಲಾಖೆಯವರು ಗಮನ ಕೊಡಬೇಕು ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಆಹಾರದ ವಿಷಯದಲ್ಲಿ ಹೇಳಬೇಕಾದರೆ ಮೊನ್ನೆ ದಿವಸ ನಮ್ಮ ಆಹಾರ ಮಂತ್ರಿಗಳು ನಮ್ಮ ಮುಂದೆ ಒಂದು ತಃಖ್ತೆಯನ್ನಿಟ್ಟು ಅಭಾವಕ್ಕೆ ಉಂಟಾಗುವ ಮೂಲ ಕಾರಣಗಳೇನು ಮತ್ತು ಮುಂಗಾರಿ ಬೆಳೆ ಸರಿಯಾಗಿ ಏಕೆ ಆಗಲಿಲ್ಲ ಎಂಬ ಬಗ್ಗೆ ಕಾರಣಗಳನ್ನೂ ಅದರಲ್ಲಿ ಕೊಟ್ಟಿದ್ದರು. ನಾನಾದರೂ ಆಹಾರ ಮಂತ್ರಿಗಳಲ್ಲಿ ಹೇಳುವುದು ಇವೊತ್ತು ಪರದೇಶಗಳಿಂದ ಬಂದ ಆಹಾರ ಧಾನ್ಯ ಗಳನ್ನು ಹಂಚುವುದರ ಬಗೆಗೆ ಇಲ್ಲಿ ಇಲ್ಲಿ ಹೇಳುತ್ತಿದ್ದಾರೆಯೇ ವಿನಾ ಇತರ ವಿಚಾರಗಳ ಬಗ್ಗೆ ಅದರಲ್ಲಿ ಏನೂ ಹೇಳಿಲ್ಲ. ಇನ್ನೂ ಹದಿನೈದು ತಿಂಗಳು ಹೆಚ್ಚು ಆಹಾರ ಧಾನ್ಯ ನಮಗೆ ಬರದೇ ಇರುವುದರಿಂದ ಇರುವುದನ್ನು ಹೇಗೆ ಹಂಚಬೇಕು ಎನ್ನುವುದರ ಬಗ್ಗೆ ಹೇಳುತ್ತಿದ್ದಾರೆ. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಎಷ್ಟು ಧಾನ್ಯ ಕೊರತೆ ಇದೆ ಎನ್ನುವುದನ್ನು ಗಮನಕ್ಕೆ ತೆಗೆದುಕೊಂಡು ಅದಕ್ಕೆ ತಕ್ಕಂತೆ ಹೆಚ್ಚು ಆಹಾರ ಬೆಳೆಯುವ ಕಡೆಗೆ ಗಮನ ಕೊಡದೆ ಕೇವಲ ಅಂಕಿ ಅಂಶಗಳನ್ನು ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಒಂದು ಕಡೆಯಲ್ಲಿ ಆಹಾರದ ಅಭಾವಕ್ಕೆ ಕಾರಣಗಳೇನು ಎನ್ನು ವುದನ್ನೂ ಕೊಟ್ಟಿದ್ದಾರೆ. ಹೆಚ್ಚು ಆಹಾರ ಬೆಳೆಯಬೇಕಾದರೆ ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಯಾವ ಸಲಹೆಗಳನ್ನೂ ಇಲ್ಲಿ ಆಹಾರ ಮಂತ್ರಿಗಳು ಕೊಟ್ಟಿಲ್ಲ. ಹೆಚ್ಚು ಆಹಾರ ಬೆಳೆಯಲು ಯಾವ ರೀತಿಯ ಮುಂಜಾಗರೂಕತೆಗಳನ್ನು ವಹಿಸಬೇಕು ಎನ್ನುವುದರ ಬಗ್ಗೆ ತಕ್ಕ ಕ್ರಮಗಳನ್ನು ತೆಗೆದುಕೊಂಡು ನಮ್ಮ ದೇಶ ಆಹಾರದಲ್ಲಿ ಸ್ವಾವಲಂಬನೆ ಪಡೆಯಲು ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ಮೊಟ್ಟಮೊದಲನೆಯದಾಗಿ ತೆಗೆದುಕೊಳ್ಳಬೇಕಾದರೆ ಈಗಿರುವಂತೆ ಆಹಾರ ಮಂತ್ರಿಗಳೇ ಬೇರೆ, ವ್ಯವಸಾಯ ಮಂತ್ರಿಗಳೇ ಬೇರೆ ಎಂದು ಮಾಡುವುದಕ್ಕಿಂತ ಆಹಾರ ಹಾಗೂ ವ್ಯವಸಾಯ ಇವೆರಡು ಇಲಾಖೆಗಳನ್ನೂ ಒಬ್ಬ ಮಂತ್ರಿಗಳ ಕೈಕೆಳಗೆ ಇರುವಂತೆ ಮಾಡಿದರೆ ಆಗ ಆಹಾರ ಮಂತ್ರಿಗಳು ಮುಂಜಾಗರೂಕತೆ ವಹಿಸಿ ಯಾವ ರೀತಿಯಲ್ಲಿ ಹೆಚ್ಚು ಆಹಾರ ಬೆಳೆದು ಸ್ವಾವ ಲಂಬನೆ ಪಡೆಯಲು ಸಾಧ್ಯ ಎನ್ನುವುದನ್ನು ಯೋಚಿಸಲು ಅನುಕೂಲವಾಗುತ್ತದೆ. ಆದುದರಿಂದ ನಾನು ವ್ಯವಸಾಯ ಇಲಾಖೆ ಹಾಗೂ ಆಹಾರ ಇಲಾಖೆ ಇವೆರಡಕ್ಕೂ ಸೇರಿದಂತೆ ಒಬ್ಬರೇ ಮಂತ್ರಿ ಗಳು ಇರುವುದು ಉತ್ತಮ ಎಂದು ಇಲ್ಲಿ ಒತ್ತಿ ಹೇಳುತ್ತೇನೆ.

ಇವತ್ತು ಆಹಾರ ಮಂತ್ರಿಗಳು ಈ ಬೇಡಿಕೆಗಳನ್ನು ಮಂಡಿಸುವಾಗ ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಇದ್ದಂತಹ ಆಹಾರ ಧಾನ್ಯಗಳನ್ನು ಹಂಚತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ ಎಂದು ಹೇಳಿದರು. ಒಂದು ಸ್ತುತ್ಯವಾದ ಕಾರ್ಯ ಎಂದರೆ ಗ್ರಾಮಪಂಚಾಯ್ತಿಗಳಲ್ಲಿ ಯಾರು ಶಕ್ತಿ ಇಲ್ಲದೇ ದುಡಿಯಲು ಕೆಲಸವಿಲ್ಲದೇ ಇದ್ದಾರೋ ನಿಶ್ಯಕ್ತರಾಗಿದ್ದಾರೋ ಅಂತಹವರಿಗೆ ಪುಕ್ಕಟ್ಟೆ ಆಹಾರವನ್ನು ಒದಗಿಸುತ್ತೇವೆ, ಗಂಜಿ ಕೇಂದ್ರಗಳನ್ನು ತೆರೆದು ಅವರಿಗೆ ಬದುಕಲಕ್ಕೆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿರತಕ್ಕ ಮಾತು ಸ್ತುತ್ಯವಾದದ್ದು. ಈಗಾಗಲೇ ಸಂಗ್ರಹಿಸಿರತಕ್ಕ ಜೋಳ, ಬತ್ತ ಗೋಡೌನ್ ಗಳಲ್ಲಿ ಇವೆ. ಅದಕ್ಕೆ ಹುಳ ಹತ್ತತಕ್ಕ ಪ್ರಮೇಯ ಹೋದ ವರ್ಷಕೂಡ ಆಯಿತು. ನಾನಾದರೂ ಕಟ್ಟುನಿಟ್ಟಾಗಿ ಹೇಳುತ್ತೇನೆ, ಇರತಕ್ಕ ಆಹಾರ ಧಾನ್ಯವನ್ನು ಅದಷ್ಟು ತೀವ್ರವಾಗಿ ಎಲ್ಲಿ ಆಹಾರ ಧಾನ್ಯವನ್ನು ಸಂಗ್ರಹಿಸಿದ್ದೀರೋ ಅದನ್ನು ಅಲ್ಲಲ್ಲೇ ಬಡವರಿಗೆ ಮಾರಾಟ ಮಾಡಲು ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಇಲ್ಲಿ ಮಂಡಿಸಿರತಕ್ಕ ಈ ಡಿಮ್ಯಾಂಡುಗಳನ್ನು ತೀವ್ರವಾಗಿ ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಲು ಪ್ರಯತ್ನ ಮಾಡುತ್ತೇನೆ. ಆಹಾರದ ಇಲಾಖೆಯಲ್ಲಿ ಸರ್ಕಾರ ಈ ಹದಿನೆಂಟು ವರ್ಷಗಳಿಂದಲೂ ಕೂಡ ಯಾವ ಪ್ರಗತಿಯನ್ನೂ ಸಾಧಿಸಿಲ್ಲ. ಅದರಲ್ಲೂ ಕೂಡ ಗ್ರಾಮಾಂತರ ಪ್ರದೇಶದಲ್ಲಿ ಪ್ರಜೆಗಳನ್ನು ಸಂಪೂರ್ಣ

ವಾಗಿ ಕೈಬಿಟ್ಟಿದೆ, ಅವರು ಹಸಿವು, ತೃಷೆಯಿಂದ ಬಳಲಿ ಬೆಂಡಾಗುತ್ತಿದ್ದರೂ ಕೂಡ ಸರ್ಕಾರದವರು ಮದೋನ್ಮತ್ತರಾಗಿ ತಮ್ಮ ನೀತಿಯನ್ನು ಮುಂದುವರಿಸಿಕೊಂಡು ಬಡ ಜನರ ಹಿತರಕ್ಷಣೆಗೆ ಯಾವ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳದೆ, ತಾವು ಅವರ ಕಡೆಗೆ ತಮ್ಮ ಲಕ್ಷ್ಯವನ್ನೇ ಇಡದೆ ಮುಂದು ವರಿಯುತ್ತಾ ಇದ್ದಾರೆ, ಇದು ಒಳ್ಳೆಯದಲ್ಲ. ನಾನಾದರೂ ಹೇಳಬೇಕಾದರೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಹಿಂದೆ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಗ್ಲಾಡ್‌ಸ್ಟನ್ ಎಂಬ ಪ್ರೈಮಿನಿಸ್ಟರ್ ಇದ್ದರು. ಅವರು ಒಂದು ಸಲ ಭಾಷಣ ಮಾಡುವುದಕ್ಕೆ ಶುರು ಮಾಡಿ ಈ ರೀತಿ ಹೇಳಿದರು :

"I conceive, I conceive, I conceive".

Then the lady said : This gentleman conceived thrice, but brought forth nothing."

"Similarly, this Government in 3 five-year plans consumed a major portion of the people's wealth, but in return brought forth nothing."

ದೇಶದ ದುಡ್ಡನ್ನು ತೆಗೆದುಕೊಂಡು ಅದಕ್ಕೆ ಪ್ರತಿಫಲವಾಗಿ ಯಾವ ಏರ್ಪಾಡನ್ನೂ ಮಾಡದೇ ಆಹಾರದ ವಿಷಯದಲ್ಲಿ ಜನಗಳು ಈಗ ಬಹಳ ಸಂಕಟಪಡಬೇಕಾದ ಪರಿಸ್ಥಿತಿಗೆ ಇಡೀ ದೇಶವನ್ನೆ ಈಡುಮಾಡಿದ್ದೀರಿ. ಇದಕ್ಕೆ ನಿಮಗೆ ಏನು ಮಾಡಬೇಕೆನ್ನುವುದೇ ಗೊತ್ತಿಲ್ಲ. ಮನುಷ್ಯಮಾತ್ರದವರು ನಿಮಗೆ ಏನು ಮಾಡುವುದಕ್ಕೂ ಸಾಧ್ಯವಿಲ್ಲದೇ ಇದ್ದರೂ ದೇವರು ಖಂಡಿತವಾಗಿಯೂ ಶಿಕ್ಷೆ ಮಾಡಿಯೇ ಮಾಡುತ್ತಾನೆ ಎಂದು ನಾನು ನಂಬಿದ್ದೇನೆ.

ಆಹಾರದ ವಿಷಯದಲ್ಲಿ ಪ್ರೊಡಕ್ಷನ್, ಡಿಸ್ಟ್ರಿಬ್ಯೂಷನ್ ಮತ್ತು ಕನ್‌ಸಂಪ್ಷನ್ ಅಂತ ಮೂರು ವಿಧವಿದೆ, ಈ ಮೂರು ವಿಧದಲ್ಲೂ ಕೂಡ ನಿಮ್ಮ ಕೆಲಸ ಕಾರ್ಯಗಳಲ್ಲಿ ಲೋಪದೋಷವಿದೆ. ದೇಶಕ್ಕೆ ಎಷ್ಟು ಆಹಾರ ಬೇಕೋ ಅದರ ಕಡೆಗೆ ತಾವು ಗಮನ ಕೊಡುತ್ತಿಲ್ಲ. ವೆಜಿಟೇರಿಯನ್ ಆಗಲಿ ನಾನ್ ವೆಜಿಟೇರಿಯನ್ ಆಗಲಿ ಯಾವ ಆಹಾರವೇ ಆಗಲಿ ಅದರ ತೀವ್ರ ಉತ್ಪನ್ನ ಮಾಡಲು ಏನು ಮಾಡಬೇಕು ಎನ್ನುವುದಕ್ಕೆ ನಿಜವಾಗಿಯೂ ಕೂಡ ತಮ್ಮ ಸಂಪೂರ್ಣವಾದ ಮನಸ್ಸನ್ನು ಇಟ್ಟು ತಾವು ಕೆಲಸ ಮಾಡುತ್ತಾ ಇಲ್ಲ. ಈ ಬಗ್ಗೆ ತೀವ್ರ ಗಮನಕೊಟ್ಟು ಹೇಗೆ ಆಹಾರ ಉತ್ಪನ್ನ ಮಾಡಬೇಕೆನ್ನು ವುದರ ವಿಷಯವಾಗಿ ನಾನು ಸೂಚನೆ ಕೊಡಲು ಬಯಸುತ್ತೇನೆ. ಹೊರಗಡೆಯಿಂದ ಗೋಧಿಯನ್ನು ಆಮದು ಮಾಡಿಕೊಳ್ಳುತ್ತಾ ಇದ್ದೀರಿ. ಆ ಗೋಧಿಯನ್ನು ಹಂಚುವುದಕ್ಕೆ ಬದಲಾಗಿ ಬೇರೆ ಏರ್ಪಾಡು ಮಾಡಬಹುದು. ಈಗ ಉದಾಹರಣೆಗೆ ಹೇಳುವುದಾದರೆ, ರಷ್ಯಾ ದೇಶದಲ್ಲಿ ಬ್ರೆಡ್ ತಯಾರು ಮಾಡಿ ಪ್ರತಿ ದಿವಸವೂ ಕೂಡ ದೇಶದ ನಾನಾ ಮೂಲೆಗಳಿಗೆ ಕಳುಹಿಸುತ್ತಾರೆ ಅಲ್ಲಿ ದೊಡ್ಡ ದೊಡ್ಡ ಬ್ರೆಡ್ ಫ್ಯಾಕ್ಟರಿಗಳನ್ನೇ ಇಟ್ಟಿದ್ದಾರೆ ಮಿಲಿಯನ್ ಪೌಂಡು ಗಟ್ಟಲೆ ಬ್ರೆಡ್ ತಯಾರುಮಾಡುತ್ತಾರೆ. ಅದೇ ರೀತಿ ತಾವೂ ಕೂಡ ದೊಡ್ಡ ಪ್ರಮಾಣದಲ್ಲಿ ನಮ್ಮ ದೇಶದಲ್ಲೂ ಬ್ರೆಡ್ ತಯಾರು ಮಾಡತಕ್ಕ ಫ್ಯಾಕ್ಟರಿ ಗಳನ್ನು ತೆಗೆದು ಬ್ರೆಡ್ ತಯಾರು ಮಾಡಿ ಜನಗಳಿಗೆ ಏಕೆ ಹಂಚಬಾರದು !

ಶ್ರೀ ಬಿ. ಡಿ. ಜತ್ತಿ.—ಬ್ರೆಡ್ ತಯಾರು ಮಾಡಿ ಹಳ್ಳಿಯಲ್ಲಿ ಹಂಚಿದರೆ ಹೆಣ್ಣುಮಕ್ಕಳು ರೊಟ್ಟಿ ಮಾಡುವುದನ್ನು ಬಿಟ್ಟುಬಿಡುತ್ತಾರೆ. ಅವರಿಗೆ ಬೇರೆ ಏನು ಕೆಲಸ ಕೊಡಬೇಕು ? ಹೀಗೆಲ್ಲಾ ಹೇಳಿ ಮತ್ತೆ ನಿರುದ್ಯೋಗ ಸಮಸ್ಯೆಯನ್ನು ಉಂಟುಮಾಡಲು ಅವಕಾಶ ಮಾಡಬೇಡಿ.

ಶ್ರೀ ಎಚ್. ಆರ್. ಕೇಶವಮೂರ್ತಿ.—ನಮ್ಮ ಹೆಣ್ಣುಮಕ್ಕಳು ರಾಗಿ ಬೀಸಿಕೊಂಡು ಕುಳಿತಿರ ಬೇಕೇನು ? ಅವರು ಲಾಯರುಗಳಾಗಲಿ, ಗಂಡಸರೇ ಲಾಯರುಗಳಾಗಬೇಕೆಂದು ಇದೆಯೇನು ? ಅದೇ ರೀತಿ ಡಾಕ್ಟರುಗಳಾಗಲಿ. ಅವರು ಮನೆಯಲ್ಲೇ ರೊಟ್ಟಿ ಮಾಡಿಕೊಂಡು ಇರಬೇಕೆನ್ನುವುದನ್ನು ನಾನು ಒಪ್ಪುವುದಿಲ್ಲ. ಅವರು ನಮ್ಮ ದೇಶದಲ್ಲಿ ಮುಂದುವರಿಯಲಿ, ದೇಶದ ಪ್ರಗತಿಯನ್ನು ಸಾಧಿಸಲು ನೆರವಾಗಲಿ ಎಂದು ನಾನು ಸಲಹೆ ಮಾಡುತ್ತೇನೆ. ಇದೇ ರೀತಿ ರಷ್ಯಾದಲ್ಲಿ ಮಾಂಸವನ್ನು ಮಾಂಸದ ಫ್ಯಾಕ್ಟರಿಯಲ್ಲಿ ಚೆನ್ನಾಗಿ ಪ್ಯಾಕ್ ಮಾಡಿ ಪ್ರತಿಯೊಬ್ಬರ ಮನೆಗೂ ತಲುಪಿಸುವ ವ್ಯವಸ್ಥೆ ಮಾಡಿರುತ್ತಾರೆ. ಅಂತಹ ಪ್ರಯತ್ನವನ್ನು ತಾವೇನಾದರೂ ಮಾಡುತ್ತಾ ಇದ್ದೀರಾ ಎಂದು ನಾನು ಕೇಳುತ್ತೇನೆ ? ಮೀನು ಹಂಚುವುದಕ್ಕೆ, ಹಂದಿ ಹಂಚುವುದಕ್ಕೆ ಇಷ್ಟು ಹಣ ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾ ಇದ್ದೀರೇ ಹೊರತು ಯಾವುದೂ ಕೂಡ ಒಂದು ಯೋಜನಾ ಬದ್ಧವಾಗಿ ನಡೆಯುತ್ತಾ ಇಲ್ಲ. ಅದೇ ರೀತಿ ಮೊಟ್ಟೆಗಳನ್ನೂ ಕೂಡ ಬೇಕಾದಷ್ಟು ಉತ್ಪನ್ನ ಮಾಡಿಸಿ ಎಲ್ಲಾ ಕಡೆಗೂ ಹಂಚಿಕೆ ಮಾಡುವ ವ್ಯವಸ್ಥೆ ಮಾಡಿದರೆ ಆಹಾರದ ಹಂಚಿಕೆಯ ವಿಷಯದಲ್ಲಿ ವಿತರಣೆಯನ್ನು ತೋರಿಸಬಹುದು ಎಂದು ನಾನು ಸಲಹೆ ಮಾಡುತ್ತೇನೆ. ಹಾಲಿನ ವಿಷಯದಲ್ಲೂ ಕೂಡ ಹೆಚ್ಚಿನ ಪ್ರಗತಿಯನ್ನು ಸಾಧಿಸಿಲ್ಲ. ಉದಾಹರಣೆಗೆ, ಅದನ್ನು ನಮ್ಮ ಅಕ್ಕಪಕ್ಕದ ದೇಶಗಳೊಡನೆ ಹೋಲಿ

(ಶ್ರೀ ಎಚ್. ಆರ್. ಕೇಶವ ಮೂರ್ತಿ)

ಸಿದರೆ ಹಸುವಿನ ಹಾಲು ಮದರಾಸಿನಲ್ಲಿ ಒಂದು ಸಾವಿರದ ಒಂದು ನೂರ ಹತ್ತು ಮಿಲಿಯನ್ ಲೀಟರ್ಸ್ ಉತ್ಪತ್ತಿ ಮಾಡುತ್ತಾ ಇದ್ದಾರೆ. ಮೈಸೂರು ದೇಶದಲ್ಲಿ 148·7 ಮಿಲಿಯನ್ ಲೀಟರ್ಸ್ ಆಗುತ್ತಾ ಇದೆ. ಮೇಕೆ ಹಾಲು ಮದರಾಸಿನಲ್ಲಿ 106·14 ಮೈಸೂರಿನಲ್ಲಿ 22·86. ಯಾವುದಕ್ಕೆ ಹೋಲಿಸಿದರೂ ಕೂಡ ನಮ್ಮ ಅಕ್ಕಪಕ್ಕ ದೇಶದ ಹತ್ತನೇ ಒಂದು ಭಾಗ ಕೂಡ ನಮ್ಮಲ್ಲಿ ಇಲ್ಲ. ಅದೇ ರೀತಿ ಎಲ್ಲಾ ಆಹಾರ ಧಾನ್ಯದ ವಿಷಯದಲ್ಲೂ ಕೂಡ ಹಿಂದುಳಿದಿದ್ದೇವೆ. ಇದನ್ನು ತಾವು ದೀರ್ಘ ವಾಗಿ ಯೋಚನೆ ಮಾಡಬೇಕು. ಮತ್ತು ಆದಷ್ಟು ಜಾಗ್ರತೆ ಹೆಚ್ಚು ಆಹಾರ ಉತ್ಪನ್ನ ಮಾಡಲು ಗಮನ ಕೊಡಬೇಕು. ಹಂಚಿಕೆ ಮಾಡುವುದರಲ್ಲಿ ಹೊಸ ಹೊಸ ವಿಧಾನಗಳನ್ನು ಕಂಡುಹಿಡಿದು ಸರಿಯಾದ ಏಜೆನ್ಸಿಯನ್ನು ಇಟ್ಟು ಪ್ರತಿಯೊಬ್ಬರಿಗೂ ಅದು ಸಮಾನವಾಗಿ ಸರಿಯಾಗಿ ತಲಪುವಂತೆ ಏರ್ಪಾಡು ಮಾಡಬೇಕು. ಕಂಟ್ರೋಲ್ ಕಾಲದಲ್ಲಿ ಡಿಸ್ಟ್ರಿಬ್ಯೂಷನ್ ಸರಿಯಾಗಿರಲಿಲ್ಲ ಎಂಬುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಅರಸೀಕೆರೆ ಹಾಸನ ಡಿಸ್ಟ್ರಿಕ್ಟಿನಲ್ಲಿ ಬಹಳ ಅಕ್ಯೂಟ್ ಸ್ಕೇರ್ಸಿಟಿ ಏರಿಯಾ ಆಗಿರುವುದರಿಂದ ಅಲ್ಲಿ ಜೋಳ ಆಗಲಿ, ರಾಗಿ ಆಗಲಿ ಯಾವುದೂ ಬೆಳೆಯುತ್ತಲೇ ಇಲ್ಲ. ಅಲ್ಲಿನ ಮೇನ್ ಫುಡ್ ಎಂದರೆ ಜೋಳ, ಮತ್ತು ರಾಗಿ ಇದನ್ನು ನಮ್ಮ ರಾಜ್ಯದ ಬೇರೆ ಡಿಸ್ಟ್ರಿಕ್ಟ್‌ಗಳಿಂದ ತಂದು ಹಂಚಬೇಕು. ಮಾನ್ಯ ಸಚಿವರು ಕೆಲವು ತಿಂಗಳಮಟ್ಟಿಗೆ ವಿಜಾಪುರ, ರಾಯಚೂರು ಜಿಲ್ಲೆಗಳಿಂದ ತರುವುದಕ್ಕೆ ವ್ಯವಸ್ಥೆ ಮಾಡಿದ್ದರು ಕಂಟ್ರೋಲ್ ಬಂದಮೇಲೆ ಸಾವು ಕಾರರು ಆ ಜಿಲ್ಲೆಗೆ ಅವುಗಳನ್ನು ತರುವ ಹಾಗೆ ಇರಲಿಲ್ಲ. ಸರ್ಕಾರದವರು ವಿಜಾಪುರ ಜಿಲ್ಲೆಯಿಂದ ತರುವುದಕ್ಕೆ ಅವಕಾಶ ಕೊಡಲಿಲ್ಲ. ಎಂದರೆ ಡೆಪ್ಯೂಟಿ ಕಮಿಷನರು ಅವಕಾಶ ಕೊಡಲಿಲ್ಲ. ಹೀಗಾಗಿ ಅಲ್ಲಿನ ಜನ ಸಾಯುತ್ತಾ ಇದ್ದೇವೆ. ಇದೇ ರೀತಿ ಎಷ್ಟು ದಿವಸ ನರಳಬೇಕು. ಹಾಸನ ಡಿಸ್ಟ್ರಿಕ್ಟಿನಲ್ಲಿ ನೀರಾವರಿ ಕಾಮಗಾರಿ ಕೆಲಸ ತೆಗೆದ ಕೊಳ್ಳುತ್ತಾ ಇಲ್ಲ, ನಮ್ಮ ಈ ಅರಣ್ಯ ರೋದನವನ್ನು ನಾವು ಎಷ್ಟೋ ಸಲ ಮಾಡಿದ್ದೇವೆ. ಆಹಾರವನ್ನೂ ಕೂಡ ಸರಿಯಾಗಿ ಕೊಡಿಸುತ್ತಾ ಇಲ್ಲ. ಇದರ ಅರ್ಥವೇನು ? ಗಲಾಟೆ ಮಾಡುವ ಜನಗಳಿಗೆ ಆಹಾರ ಕೊಡುತ್ತೇವೆ ನಮ್ಮ ಹಾಗೆ ಗಲಾಟೆ ಮಾಡದೇ ಇರತಕ್ಕವರಿಗೆ ಇಲ್ಲ ಅಂತಲೇ ಹೇಗೆ ಎಂಬುದನ್ನು ತಾವು ದಯಮಾಡಿ ತಿಳಿಸಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಆದ್ದರಿಂದ ಮಾನ್ಯ ಸಚಿವರು ಡೆಪ್ಯೂಟಿ ಕಮಿಷನರಿಗೆ ಸೂಕ್ತ ಸಲಹೆ ಕೊಡಬೇಕೆಂದು ಹೇಳುತ್ತೇನೆ. ಇದೇ ರೀತಿಯ ಸಂಕಟ ಪರಿಸ್ಥಿತಿ ಬೇರೆ ಜಿಲ್ಲೆಗಳಲ್ಲೂ ಕೂಡ ಇದೆ. ಅದಕ್ಕೆ ತಕ್ಕ ಏರ್ಪಾಡು ಮಾಡಿ ಒಂದು ಡಿಸ್ಟ್ರಿಕ್ಟಿನಿಂದ ಮತ್ತೊಂದು ಡಿಸ್ಟ್ರಿಕ್ಟಿಗೆ ಆಹಾರ ಧಾನ್ಯವನ್ನು ಸಲೀಸಾಗಿ ತರುವುದಕ್ಕೆ ಕಂಟ್ರೋಲ್ ಇರುವುದನ್ನು ತೆಗೆದು ಫ್ರಿ ಟ್ರಾನ್ಸ್‌ಪೋರ್ಟೇಷನ್‌ಗೆ ಅವಕಾಶ ಮಾಡಿ ಕೊಡಬೇಕೆಂದು ಹೇಳುತ್ತೇನೆ; ಮತ್ತು ಫ್ರೀ ಟ್ರೇಡ್‌ಗೆ ಅವಕಾಶ ಮಾಡಿಕೊಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರದ ಹಂಚಿಕೆ ಸರಿಯಾಗಿ ವಿಚಕ್ಷಣೆಯಿಂದ ಆಗುತ್ತಿಲ್ಲ, ಆಹಾರ ಪದಾರ್ಥಗಳನ್ನು ಕೆಲವು ಮಟ್ಟಿಗೆ ಕಳಿಸಿದರೂ ಕೂಡ ಬಡ ರೈತರಿಗೆ, ಅಭಾವದಿಂದ ಪೀಡಿತರಾಗಿರುವವರಿಗೆ ಅದು ಸಿಕ್ಕುತ್ತಿಲ್ಲ, ಅದೆಲ್ಲಾ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಮತ್ತು ಸೊಸೈಟಿಗಳಲ್ಲಿ ಹಂಚಿಕೆಯಾಗಿ ಹೋಗುತ್ತದೆ. ಸೊಸೈಟಿ ಡೈರೆಕ್ಟರುಗಳು ತಮಗೆ ಬೇಕಾದವರಿಗೆ ಕೊಟ್ಟುಬಿಡುತ್ತಾರೆ, ಬಡವರಿಗೆ, ರೈತರಿಗೆ, ಕಷ್ಟದಲ್ಲಿರುವವರಿಗೆ, ಹಣವಿಲ್ಲದಿರುವವರಿಗೆ ಆಹಾರ ಸಿಕ್ಕುತ್ತಿಲ್ಲ. ಇದರಿಂದ ಅವರು ಉಪವಾಸ ಮಾಡಿ ಸಾಯಬೇಕಾಗಿದೆ. ಎಲ್ಲರಿಗೂ ಸಿಕ್ಕುತ್ತಿದೆಯೆಂದು ಗಾಂಜಿ ವೀರಪ್ಪನವರು ಹೇಳಿದರು. ಅವರು ನನ್ನ ಜಿಲ್ಲೆಗೆ ಬರಲಿ, ಎಷ್ಟೋ ಜನರು ಹೊಟ್ಟೆಬಟ್ಟೆಗಿಲ್ಲದೆ ಬರೀ ಮೂಳೆ ಮತ್ತು ಚರ್ಮ ಗಳಿಂದ ಕೂಡಿರುವುದನ್ನು ತೋರಿಸುತ್ತೇನೆ. ಅಂಥವರು ಕೆಲಸ ಮಾಡುವುದೇನು, ಸಂಪಾದನೆ ಮಾಡಲು ಅವರಿಗೆ ಶಕ್ತಿ ಎಲ್ಲಿ ಬರುತ್ತದೆ ? ಇದು ವಾಸ್ತವವಾದ ಸಂಗತಿ. ತಹಶೀಲ್ದಾರರಿಗೆ ತಿಥಿಗೆ ಪದಾರ್ಥ ಬೇಕೆಂದು ಅರ್ಜಿ ಕೊಟ್ಟರೆ ಸ್ವಲ್ಪ ಅಕ್ಕಿ, ಸಕ್ಕರೆ ಕೊಡುತ್ತಾರೆ. ಆದರೆ ಸಾಯುವವರಿಗೆ "ಗಂಜಿಮಾಡಿ ಕುಡಿಸುತ್ತೇನೆಂದು" ಹೇಳಿದರೆ ಒಂದು ಪಾವು ಅಕ್ಕಿಯನ್ನು ಕೂಡ ಕೊಡುವುದಿಲ್ಲ. ಈ ನೀತಿ ಸರಿಯಾಗಿದೆಯೇ ? ತಿಥಿಗಳಿಗೆ ಅಕ್ಕಿ ಕೊಡುವುದು ಬೇಡ, ಸಾಯುವವರಿಗೆ ಗಂಜಿ ಕುಡಿಯಲು ಜೋಳ, ಅಕ್ಕಿ ಕೊಟ್ಟರೆ ಸಾಕು ಎಂದು ನಾನು ಸಲಹೆ ಮಾಡುತ್ತೇನೆ.

ಈ ದಿವಸ ಜನರಿಗೆ ಕೊಳ್ಳುವ ಶಕ್ತಿ ಕೂಡ ಇಲ್ಲ, ರೈತರಿಗೆ ಒಂದು ದಿವಸಕ್ಕೆ ಒಂದು ರೂಪಾಯಿ ಕೂಲಿ ಸಿಕ್ಕುತ್ತದೆ, ಅದಕ್ಕೆ ಒಂದು ಕಿಲೋ ಅಕ್ಕಿಯಾಗಲಿ ರಾಗಿಯಾಗಲಿ ಬರುವುದಿಲ್ಲ. 5-6 ಜನರಿರುವ ಸಂಸಾರ ಒಂದು ರೂಪಾಯಿ ಕೂಲಿ ತಂದು ದವಸಧಾನ್ಯ ಕೊಂಡು ಹೇಗೆ ಮಕ್ಕಳು ಮರಿಗಳನ್ನುಳಿಸಿಕೊಳ್ಳಬೇಕು ? ಅವರಿಗೆ ಬೇರೆ ಉತ್ಪತ್ತಿ ಇಲ್ಲ, ದವಸ ಕೊಟ್ಟರೆ ಕೊಳ್ಳುವುದಕ್ಕೆ ಶಕ್ತಿ ಇಲ್ಲದೆ ಉಪವಾಸ ಮಾಡಿ ಪ್ರಾಣ ಬಿಡುವ ಸನ್ನಿವೇಶವಿದೆ. ಇದನ್ನು ಹೇಗೆ ನಿವಾರಣೆ ಮಾಡ ಬೇಕೆಂಬುದನ್ನು ಆಲೋಚಿಸಿ ಜಾಗ್ರತೆ ತಕ್ಕ ಏರ್ಪಾಡು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ಶೃಂಗೇರಿ).—ಈ ಬೇಡಿಕೆಯನ್ನು ಸಮರ್ಥಿಸುತ್ತಾ ಒಂದೆರಡು ಸೂಚನೆಗಳನ್ನು ಕೊಡಲು ಬಯಸುತ್ತೇನೆ. ಇಂದು ಕೆಲವು ಕಾರಣಗಳ ದೆಸೆಯಿಂದ ಭಾರತದಲ್ಲಿ ಆಹಾರ ಸಮಸ್ಯೆ ಬಹಳ ಕಠಿಣವಾದ ಸಮಸ್ಯೆಯಾಗಿ ಪರಿಣಮಿಸಿದೆ. ಅತಿಯಾಗಿ ಏರುತ್ತಿರುವ ಜನಸಂಖ್ಯೆ, ಕಳ್ಳಸಾಗಾಣಿಕೆ, ಕಾಳಸಂತೆಯಲ್ಲಿ ನಿರತರಾಗಿರುವ ಲಾಭಕೋರರ ಕೈವಾಡ, ಅತಿವೃಷ್ಟಿ, ಅನಾವೃಷ್ಟಿ ಮುಂತಾದ ನೈಸರ್ಗಿಕ ಕಾರಣಗಳಿಂದ ಆಹಾರ ಸಮಸ್ಯೆ ಬಹಳ ಕಠಿಣವಾಗಿದೆ. ಆದುದರಿಂದ ಇಡೀ ಹಿಂದೂಸ್ಥಾನಕ್ಕೆ ಅನ್ವಯಿಸಬಹುದಾದಂಥ ಸಮಗ್ರವಾದ ಮತ್ತು ಏಕರೂಪವಾದ ಆಹಾರ ನೀತಿಯನ್ನು ರೂಪಿಸುವುದು ಅತ್ಯಾವಶ್ಯಕ ಎಂದು ಈ ಸಂದರ್ಭದಲ್ಲಿ ಮನವಿಮಾಡಿಕೊಳ್ಳುತ್ತೇನೆ. ಆಹಾರ ಸಮಸ್ಯೆಯನ್ನು ಬಗೆಹರಿಸುವಾಗ ಸರ್ವಪಕ್ಷಗಳ, ಸರ್ವ ವರ್ಗಗಳ ಸಹಕಾರ ಸರಕಾರಕ್ಕೆ ಬಹಳ ಅಗತ್ಯ. ಬರೀ ಸರಕಾರದವರೇ ಆಹಾರ ಸಮಸ್ಯೆಯನ್ನು ಬಗೆಹರಿಸುತ್ತಾರೆಂಬ ಭಾವನೆ ದೇಶದಲ್ಲಿರಬಾರದು. ಕಳೆದ 18 ವರ್ಷಗಳ ಅನುಭವದಿಂದ ನಾವು ಈ ವಿಚಾರವನ್ನು ಪರಿಶೀಲನೆ ಮಾಡುವುದಾದರೆ, ನಮ್ಮ ದೃಷ್ಟಿಕೋಣದಲ್ಲಿ ಏನೋ ಒಂದು ಬದಲಾವಣೆ ಅವಶ್ಯಕವೆಂದು ಕಾಣುತ್ತದೆ. ಹಳ್ಳಿಗಾಡುಗಳ ವಿಚಾರದಲ್ಲಿ, ರೈತರ ವಿಚಾರದಲ್ಲಿ ಸರಕಾರದ ಮತ್ತು ಪಟ್ಟಣಿಗರ ದೃಷ್ಟಿಕೋಣ ಬದಲಾವಣೆಯಾಗಬೇಕಾದ್ದು ಬಹಳ ಅಗತ್ಯವಾಗಿದೆ. ಇಂದು ಕೆಳಮಟ್ಟದಲ್ಲಿ ಸರಕಾರಿ ಅಧಿಕಾರಿಗಳ ಸಹಾನುಭೂತಿ ಹೆಚ್ಚಾಗಿ ರೈತರಿಗೆ ಆವಶ್ಯಕ. ಇಂದು ಎಷ್ಟರಮಟ್ಟಿಗೆ ಆ ಸಹಾನುಭೂತಿ ಇರಬೇಕೋ ಅದಿಲ್ಲ ಅಂದರೆ ತಪ್ಪೇನೂ ಆಗಲಾರದು ಎಂದು ನಾನು ಭಾವಿಸುತ್ತೇನೆ. ಈ ಆಹಾರ ಸಮಸ್ಯೆಯನ್ನು ಬಗೆಹರಿಸುವ ಒಂದು ಪ್ರಯತ್ನದ ಜೊತೆಗೆ ಹಣದ ಉಬ್ಬರವನ್ನು ತಡೆಗಟ್ಟುವ ಒಂದು ಪ್ರಯತ್ನವೂ ಬಹಳ ಯಶಸ್ವಿಯಾಗಿ ಹಿಂದೂಸ್ಥಾನದಲ್ಲಿ ನಡೆಯಬೇಕಾಗಿದೆ. ನಮ್ಮ ಅನೇಕ ತೊಂದರೆಗಳಿಗೆ ಹಣದ ಉಬ್ಬರವೇ ಪ್ರಬಲವಾದ ಕಾರಣ ಅಂದರೆ ತಪ್ಪಾಗುವುದಿಲ್ಲ ಎಂದು ಅನಿಸುತ್ತದೆ.

ಇನ್ನು ಸಂಗ್ರಹದ ವಿಚಾರದಲ್ಲಿ, ಒಂದೊಂದು ರಾಜ್ಯದಲ್ಲಿ ಒಂದೊಂದು ವಿಧವಾದ ನೀತಿಯನ್ನು ಇಂದು ಇಟ್ಟುಕೊಂಡಿದ್ದಾರೆ. ಮೈಸೂರಿನ ವಿಚಾರದಲ್ಲಿ ಮಾತನಾಡುವುದಾದರೆ ಸರಕಾರದವರೇನೋ ಸದುದ್ದೇಶದಿಂದ ಆಹಾರವನ್ನು ಸಂಗ್ರಹಿಸುವುದಕ್ಕೆ ಕೆಲವು ನಿಯಮಗಳನ್ನು ಮಾಡಿದ್ದಾರೆ; ರಕ್ಷಣಾ ಕಾನೂನಿನ ರೀತ್ಯ ಲೆವಿ ಆರ್ಡರ್ ಎಂಬುದನ್ನು ಜಾರಿಗೆ ತಂದಿದ್ದಾರೆ. ಆದರೆ ವಾಸ್ತವಿಕವಾಗಿ ಆ ಲವಿ ಆರ್ಡರು ಕೆಲವು ಲೋಪದೋಷಗಳಿಂದ ಕೂಡಿದ ಅಂದರೆ ನನ್ನ ಮಿತ್ರರಾದ ಜತ್ತಿಯವರು ಕೋಪಮಾಡಿಕೊಳ್ಳಬಾರದು ಎಂದು ಅರಿಕೆಮಾಡಿಕೊಳ್ಳುತ್ತೇನೆ. 1965ನೆಯ ಇಸವಿಯ ಲೆವಿ ಆರ್ಡರನ್ನು ನಾನು ಬಹಳ ಕೂಲಂಕಷವಾಗಿ ಪರಿಶೀಲನೆಮಾಡಿದ್ದೇನೆ. ಈ ಲೆವಿ ಆರ್ಡರು ಆಬ್ಸೆಂಟಿ ಲ್ಯಾಂಡ್‌ಲಾರ್ಡ್ಸ್ ಎಂಬ ಜನರೇನಿದ್ದಾರೆ, ರೈತರಿಂದ ಗೇಣಿಯನ್ನು ವಸೂಲುಮಾಡಿಕೊಳ್ಳುವ ಜನರೇನಿದ್ದಾರೆ ಅವರಿಗೆ ಅನ್ವಯಿಸುವುದಿಲ್ಲ. ಒಬ್ಬ ಭೂ ಮಾಲೀಕ ನೂರಾರು ರೈತರಿಂದ ಸಾವಿರಾರು ಕ್ವಿಂಟಾಲ್ ಬತ್ತವನ್ನು ಸಂಗ್ರಹಿಸಿದರೂ ಕೂಡ ಈ ಲೆವಿ ಆರ್ಡರು ಆ ಭೂಮಾಲೀಕನಿಗೆ ಅನ್ವಯಿಸುವುದಿಲ್ಲ. ಈ ಲೆವಿ ಆರ್ಡರಿನಲ್ಲಿ ಎರಡು ವರ್ಗ ಮಾಡಿದ್ದಾರೆ, ಒಂದು ಬರೀ ನೀರಾವರಿ ಯೋಜನೆಗಳಿಂದ ನೀರಿನ ಸೌಲತ್ತನ್ನು ಪಡೆಯುವ ಪ್ರದೇಶಗಳು, ಇನ್ನೊಂದು ಉಳಿದ ಪ್ರದೇಶಗಳು. ಇದರಲ್ಲಿ ದುರದೃಷ್ಟವಶಾತ್ ಮಲೆನಾಡು ಪ್ರದೇಶ ಕೂಡ ಸೇರಿದೆ. ಮಾನ್ಯ ಸಚಿವರಿಗೆ ಮಲೆನಾಡಿನಲ್ಲಿ ಬರೀ ಮಳೆಯ ಸಹಾಯದಿಂದ ಬತ್ತ ಬೆಳೆಯುತ್ತಾರೆ ಎಂಬುದು ಗೊತ್ತಿರಬಹುದು. ಈ ವರ್ಷ ಮಳೆ ಸರಿಯಾದ ರೀತಿಯಲ್ಲಾಗದೆ ಬಹಳ ಕಡೆಗಳಲ್ಲಿ ಸೇಕಡ 50 ಭಾಗ ಕೂಡ ಬೆಳೆಯಾಗಿಲ್ಲ. ಈ ದಿವಸ ಮಲೆನಾಡಿನ ಕೆಲವು ಸ್ಥಳಗಳಲ್ಲಿ ಪೋಲೀಸಿನವರ ಸಹಾಯದಿಂದ ಗೇಣೀದಾರರನ್ನು ಸುಲಿಗೆ ಮಾಡುತ್ತಿದ್ದಾರೆ. ಇದನ್ನು ಕೋಪಮಾಡಿಕೊಳ್ಳದೆ ನಂಬಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಸರಕಾರದ ಉದ್ದೇಶ ಒಳ್ಳೆಯದೇ. ಆದರೆ ಪರಿಣಾಮವೇನಾಗಿದೆಯೆಂದರೆ, ಯಾರಿಗೆ ಕೊಡುವುದಕ್ಕೆ ಚೈತನ್ಯವಿಲ್ಲ ಅವರ ಮೇಲೆ ಸ್ಥಳೀಯ ಅಧಿಕಾರಿಗಳ ಜುಲುಂ, ಜಬರುದಸ್ತಿ ನಡೆಯುತ್ತಿದೆ. ಇದನ್ನು ದಯಮಾಡಿ ತಪ್ಪಿಸಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಕೆರೆಯ ನೀರಿನ ಆಶ್ರಯದಲ್ಲಿ ಸಾಗುವಳಿಯಾಗುತ್ತಿರುವ ಜಮೀನಿನಲ್ಲಿ ಎಕರೆಗೆ 20 ಕ್ವಿಂಟಾಲ್ ಬೆಳೆಯುವುದುಂಟು. ಆದರೆ ಮಲೆನಾಡಿನಲ್ಲಿ ಎಕರೆಗೆ 8 ಕ್ವಿಂಟಾಲ್ ಆದರೆ ಹೆಚ್ಚು, ಕೆಲವು ಕಡೆ ಏನೂ ಆಗಿಲ್ಲ. ಲೆವಿ ಆರ್ಡರಿನಲ್ಲಿ ಬೆಳೆದವರ ಅವಶ್ಯಕತೆಯೇನು, ಅವರ ಕೂಲಿಗಾರರ ಅವಶ್ಯಕತೆಯೇನು ಎಂಬುದನ್ನು ಗಮನಿಸಿಲ್ಲ.

4-30 P.M.

ಒಂದು ವೇಳೆ ಬೆಳೆಯಾಗದೇ ಇದ್ದರೆ ಅಂಥವನು ಏನು ಮಾಡಬೇಕು ಎಂಬುದು ಇದರಲ್ಲಿ ನಮೂದು ಆಗಿಲ್ಲ. ಬೆಳೆಯಾಗಿಲ್ಲ ಎಂದು ಹೇಳಿದರೂ ಕೂಡ ಊಟಕ್ಕೆ ಕೂಡ ಇಲ್ಲದೆ ಇದ್ದರೂ ಕೂಡ ವಸೂಲ್ಮಾಡುತ್ತಿದ್ದಾರೆಂದು ಹೇಳುತ್ತೇನೆ. ಇದನ್ನು ದಯವಿಟ್ಟು ತಪ್ಪಿಸಬೇಕು ಎಂದು ಸಚಿವರಿಗೆ

(ಶ್ರೀ ಕಡಿದಾಳ್ ಮಂಜಪ್ಪ)

ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಕೆಲವು ಜನರು ನಿರ್ಗತಿಕರಾಗುವ ಸಂದರ್ಭ ಬಂದಿದೆ. ಲೆವಿ ಆರ್ಡರ್‌ನ 4ನೇ ಕ್ಲಾಸನ್ನು ನೋಡಿದರೆ ಅಲ್ಲಿ ಒಂದು ಉದಾಹರಣೆ ಕೊಟ್ಟಿದ್ದಾರೆ. ಈ ಉದಾಹರಣೆಯನ್ನು ಆಹಾರ ಸಚಿವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಇದನ್ನು ಪರಿಶೀಲನೆ ಮಾಡಿ ನೋಡಬೇಕು. ಇದನ್ನು ಪರಿಶೀಲನೆ ಮಾಡಿದರೆ ಅಬ್ಸೆಂಟೀ ಲ್ಯಾಂಡ್‌ಲಾರ್ಡ್ಸ್ ಇವರಿಗೆ ಅನ್ವಯಿಸುವುದಕ್ಕೆ ಅವಕಾಶ ಬೀಳುವುದಿಲ್ಲ. ಆದರೆ ಸ್ವಂತ ಸಾಗುವಳಿ ಮಾಡುವವರು 80 ಕ್ವಿಂಟಾಲ್‌ನಲ್ಲಿ 20 ಕ್ವಿಂಟಾಲ್ ಕೊಟ್ಟುಬಿಟ್ಟರೆ ಮುಗಿದುಹೋಯಿತು. ಬಾಕಿ ಉಳಿದದ್ದನ್ನು ಮಾರ್ಕೆಟ್ಟಿಗೆ ತೆಗೆದುಕೊಂಡು ಹೋಗಿ ಮಾರಿಕೊಳ್ಳಬಹುದು. ಅವರಿಗೆ 60 ರಿಂದ 70 ರೂಪಾಯಿವರೆಗೆ ಒಂದು ಕ್ವಿಂಟಾಲ್‌ಗೆ ಬೆಲೆ ಬರುತ್ತದೆ. ಆದರೆ ಗೇಣೀದಾರರು ದುರಾದೃಷ್ಟದಿಂದ ಲೆವಿ ಪರ್ಚೇಸಿಂಗ್ ಆಫೀಸರರಿಗೆ ಕೊಡಬೇಕು ಮತ್ತು ಭೂಮಿ ಮಾಲೀಕನಿಗೆ ಕೊಡಬೇಕು. ಭೂಮಾಲೀಕನಿಗೆ ಪ್ರತಿ ವರ್ಷ ಕೊಡುವಂತೆ ಗೇಣಿಯನ್ನು ಕೊಡಬೇಕು. ಇಲ್ಲದಿದ್ದರೆ ಜಬರದಸ್ತಿಯಿಂದ ವಸೂಲ್ಮಾಡಿದ್ದಾರೆ. ಇದಲ್ಲದೆ ಪರ್ಚೇಸಿಂಗ್ ಆಫೀಸರ್ ಬಲಾತ್ಕಾರವಾಗಿ 20 ಕ್ವಿಂಟಾಲ್ ವಸೂಲ್ಮಾಡುತ್ತಿದ್ದಾರೆ. ಗೇಣಿದಾರರು ಒಂದು ಕ್ವಿಂಟಾಲ್‌ಗೆ 45 ರೂಪಾಯಿ ಪ್ರಕಾರ ಸರ್ಕಾರಕ್ಕೆ ಕೊಟ್ಟು ಈಗ ಒಂದು ಕ್ವಿಂಟಾಲಿಗೆ 70 ರೂಪಾಯಿ ಪ್ರಕಾರ ಮಾರ್ಕೆಟ್ಟಿನಲ್ಲಿ ಕೊಂಡುಕೊಳ್ಳುವ ಪ್ರಸಂಗ ಬಂದಿದೆ. ಹೀಗೆ ಆಗಬಾರದು ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನಾದರೂ ಕೂಡ ಆಹಾರ ಸಂಗ್ರಹದ ಹೊಸ ಕಾನೂನು ಮಾಡುವಾಗ ಮಾನ್ಯ ಸಭೆಯ ಸದಸ್ಯರ ಅಭಿಪ್ರಾಯವನ್ನು ತಿಳಿದುಕೊಂಡು ಅದರಂತೆ ಅನುಸರಿಸಿದರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಇಷ್ಟು ಹೇಳಿ ಆಹಾರ ಸಚಿವರು ಇದರ ಕಡೆ ಗಮನ ಕೊಡದೇ ಇದ್ದರೆ ಅನಾಹುತವಾಗುತ್ತದೆ ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಆಹಾರದ ಕೊರತೆ ರಾಜ್ಯಕ್ಕೆ ಇರುವುದು ಇದೇನೂ ಹೊಸದಲ್ಲ. 1943-44 ಮತ್ತು 1945ನೇ ಸಾಲಿನಲ್ಲಿ ಜನ ಹಸಿವಿನಿಂದ ಸತ್ತರು. ಆಹಾರ ಇಲ್ಲದೇ ಇರುವುದರಿಂದ ಅಗ್ಗೆ ಜನ ಈ ರಾಜ್ಯ ಬಿಟ್ಟು ಬೇರೆ ಕಡೆ ಹೋದರು. ಬ್ರಿಟಿಷರು ರಾಜ್ಯಭಾರ ಮಾಡುವ ಕಾಲದಲ್ಲಿ ಜನರನ್ನು ಸಾಯುವುದಕ್ಕೆ ಬಿಡಬಾರದು ಎಂದು ಆಗಿನ ಗವರ್ನರ್ ಜನರಲ್‌ರವರು ಅಮೇರಿಕಾ ಆಸ್ಟ್ರೇಲಿಯಾದಿಂದ ಅಕ್ಕಿ ಗೋಧಿ ಪದಾರ್ಥಗಳನ್ನು ತರಿಸಿಕೊಂಡು ಈ ರಾಷ್ಟ್ರದ ಜನರನ್ನು ಕಾಪಾಡಿದರು. ಅವರು ಈ ದೇಶ ಬಿಟ್ಟು ಹೋಗಿ 18 ವರ್ಷವಾಯಿತು. ಕಳೆದ 18 ವರ್ಷಗಳಿಂದ ಕಾಂಗ್ರೆಸ್ಸಿನವರು ರಾಜ್ಯಭಾರ ಮಾಡುತ್ತಿದ್ದರೂ ಕೂಡ ಜನರಿಗೆ ತಿನ್ನುವುದಕ್ಕೆ ಆಹಾರ ಇಲ್ಲ. ಜನರಮೇಲೆ ಸಾಲದ ಹೊರೆ ಹೊರಿಸುತ್ತಿದ್ದಾರೆ. ಆಹಾರವಿಲ್ಲದೆ ಅನ್ನವಿಲ್ಲದೆ ಜನರ ಕೊಲೆಯಾಗುತ್ತಿದೆ. ಇದಕ್ಕಿಂತ ದೊಡ್ಡ ಆತ್ಮನಾಶವಿಲ್ಲ. ಇದರಂಥ ದ್ರೋಹವಿಲ್ಲ. ಕಳೆದ 18 ವರ್ಷದಲ್ಲಿ ಆಹಾರದ ಕೊರತೆ ನೀಗಿಸುವುದಕ್ಕೆ ನೀವು ಏನೇನು ಮಾಡಿದ್ದೀರಿ? ಪ್ರತಿನಿತ್ಯ ಅಂಕಿ ಅಂಶಗಳನ್ನು ಕೊಡುತ್ತೀರಿ. ನಮ್ಮ ಮೈಸೂರು ಸರಕಾರ ಅಂಕಿ ಅಂಶ ಕೊಡುವುದರಲ್ಲಿ ಬಹಳ ಬುದ್ಧಿವಂತರು. ಇವರು ಬಹಳ ಬುದ್ಧಿವಂತರಾಗಿರುವುದರಿಂದ ಅಂಕಿ ಅಂಶಗಳ ಲೆಕ್ಕ ಮಾಡುವ ಮೆಷಿನ್ ಕೂಡ ಇವರಿಗೆ ಬೇಕಾಗಿಲ್ಲ. ಅಷ್ಟರಮಟ್ಟಿಗೆ ಸತ್ಯಕ್ಕೆ ದೂರವಾದ ಅಂಕಿ ಅಂಶಗಳನ್ನು ಜನರ ಮುಂದೆ ಇಟ್ಟು ಜನರ ಹೊಟ್ಟೆ ತುಂಬಿಸುತ್ತಿದ್ದಾರೆ. ಅನ್ನ ಕೊಟ್ಟು ಜನರ ಹೊಟ್ಟೆ ತುಂಬಿಸುತ್ತಿಲ್ಲ. ತುಮಕೂರು ಜಿಲ್ಲೆಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ 150 ಗಂಜೀ ಕೇಂದ್ರಗಳನ್ನು ಆವತ್ತಿನ ಸರಕಾರದಲ್ಲಿದ್ದ ದಿವಾನ ಮಾಧವರಾಯರು—ಅಂದಿನ ಬೇಜವಾಬ್ದಾರಿ ಸರಕಾರವು—ನಡೆಸಿದ್ದು ಎಲ್ಲರಿಗೂ ಗೊತ್ತಿದೆ. ನಿಮಗೆ ಅಧಿಕಾರ ಬಂದ ಮೇಲೆ ನೀವು ಏನು ಮಾಡಿದಿರಿ? ಹಿಂದಕ್ಕೆ ದಿವಾನ ಮಾಧವರಾಯರ ಕಾಲದಲ್ಲಿ ಅಧಿಕಾರ ಬಿಟ್ಟು ಹೋಗಿ ಎಂದು ನೀವೇ ಅವರಿಗೆ ಹೇಳುತ್ತಿದ್ದೀರಿ. ಜನರು ಹಸಿವಿನಿಂದ ಸಾಯುತ್ತಿರುವುದರಿಂದ ನೀವು ಅಧಿಕಾರ ಬಿಟ್ಟು ಹೋಗಿ ಎಂದು ನಾವು ಈ ಸಭೆಯಲ್ಲಿ ಈಗ ನಿಮಗೆ ಹೇಳುತ್ತೇವೆ. ಆಹಾರ ಖಾತೆಯನ್ನು ಸರಿಯಾಗಿ ನಡೆಸುವುದಕ್ಕಾಗುವುದಿಲ್ಲ ಎಂದು ಶ್ರೀ ಕೃಷ್ಣಪ್ಪನವರು ಇದನ್ನು ಶ್ರೀ ಜತ್ತಿಯವರಿಗೆ ಕೊಟ್ಟುಬಿಟ್ಟರು. ಅವರ ಹಣಕಾಸಿನ ಖಾತೆಯನ್ನು ಬೇರೆಯವರಿಗೆ ಕೊಟ್ಟರು. ಇಂದು ಹಣಕಾಸಿನ ಪರಿಸ್ಥಿತಿ ಕೂಡ ಚೆನ್ನಾಗಿಲ್ಲ. ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆ ಎಂದು ನೂರಾರು ಸುಳ್ಳು ಹೇಳುತ್ತಾರೆ. ನೂರು ಸುಳ್ಳು ಹೇಳುವುದರಲ್ಲಿ 10 ರಷ್ಟಾದರೂ ಸತ್ಯ ಇರಬೇಕು ಎಂದು ರಾಜ್ಯಭಾರ ಮಾಡುವವರಿಗೆ ಅರಿಕೆ ಮಾಡಿಕೊಳ್ಳುತ್ತೇನೆ. ಜನರು ಹಸಿವಿನಿಂದ ಸಾಯುತ್ತಿರುವಾಗ್ಗೆ ಆಹಾರ ಒದಗಿಸತಕ್ಕಂಥಾದ್ದು ಸರಕಾರದ ಪ್ರಥಮ ಕರ್ತವ್ಯ ಎಂದು ಸರಕಾರಕ್ಕೆ ಹೇಳಲು ಇಚ್ಛಿಸುತ್ತೇನೆ.

ಇಂದು ದೇಶದಲ್ಲಿ 20 ಲಕ್ಷ ಟನ್ ಆಹಾರದ ಕೊರತೆ ಇದೆ. 75 ಲಕ್ಷ ಜನರಿಗೆ ಕೆಲಸ ಒದಗಿಸಬೇಕಾಗಿದೆ. ಆಹಾರ ಸಚಿವರು ಕೊಡುವ ಹೇಳಿಕೆ, ಉಪಮಂತ್ರಿಗಳು ಕೊಡುವ ಪ್ರತಿ ಹೇಳಿಕೆ ನೋಡಿದರೆ ಕೇಂದ್ರ ಸರಕಾರದಿಂದ ದೊರೆಯಬಹುದಾಗಿದ್ದ ಸಹಾಯ ದೊರೆಯದೆ ನಿಮ್ಮ ನೀತಿ ಕುಸಿದು ಬಿದ್ದಿದೆ: ಇದು ದುರಾದೃಷ್ಟಕರ. ಮೊನ್ನೆ ನಮ್ಮ ಮೈಸೂರು ರಾಜ್ಯಕ್ಕೆ ಐ. ಸಿ. ಎಸ್. ಆಫೀಸರ್ ಯಾರ್ಡಿ ಎನ್ನುವವರು ಬಂದು ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಅವರು ನಮಗೆ ಆಹಾರ ಎಷ್ಟು ಬೇಕು ಇಲ್ಲಿಯ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಸರಿಯಾಗಿ ಅಸೆಸ್ ಮಾಡಿದ್ದಾರೆಯೇ? ಇಲ್ಲಿಗೆ ಬಂದಾಗ್ಗೆ ಒಂದು ಹೇಳುತ್ತಾರೆ. ದಿಲ್ಲಿಯಲ್ಲಿ ಮತ್ತೊಂದು ರೀತಿ ಹೇಳುತ್ತಾರೆ. ಇದು ಸರಿಯಲ್ಲ. ಇಂದು ಅನ್ನವಿಲ್ಲದೆ ಎಷ್ಟು ಜನ ಇದ್ದಾರೆ ಅವರ ಸ್ಥಿತಿಗತಿ ಯಾವ ರೀತಿ ಇದೆ ಎಂಬುದನ್ನು ಹಳ್ಳಿಗಳಿಗೆ ಹೋಗಿ ನೋಡಬೇಕು. ಹೀಗೆ ಮಾಡದೇ ಇದ್ದರೆ ದೇಶದ ಜನತೆಗೆ, ಬಡವರಿಗೆ, ಕೂಲಿಗಾರರಿಗೆ ರೈತರಿಗೆ ಹಳ್ಳಿಯಲ್ಲಿ ದುಡಿಯುವ ವರಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಇಂದು ಜಗತ್ತಿನಲ್ಲಿ 1100 ಮಿಲಿಯನ್ ಟನ್ ಅಕ್ಕಿ ಬೆಳೆಯುತ್ತದೆ. ಇದರ ಉತ್ಪತ್ತಿ ಹೆಚ್ಚಿಸುವುದಕ್ಕೆ ಸೈಯಂಟಿಫಿಕ್ ಆಗಿ ಅಗ್ರಿಕಲ್ಚರ್ ಮಾಡಬೇಕಾದರೆ ಫರ್ಟಿಲೈಜರ್ಸ್ ಉಪಯೋಗಿಸಬೇಕಾಗುತ್ತದೆ. ಈ ವಿಚಾರದಲ್ಲಿ ಮೈಸೂರು ದೇಶ ಏನು ಮಾಡಿದೆ? ಕೋಟ್ಯಾಂತರ ರೂಪಾಯಿ ಪ್ರೊಜೆಕ್ಟುಗಳ ಪ್ಲಾನ್ ಮಾಡುವುದಕ್ಕೆ ಸ್ಕೀಂ ಮಾಡುವುದಕ್ಕೆ ಖರ್ಚು ಮಾಡುತ್ತೀರಿ. 25 ಕೋಟಿ ಘಟಪ್ರಭಾ ಯೋಜನೆ, 10 – 15 ಕೋಟಿ ಮಲಪ್ರಭಾ ಯೋಜನೆ ಇದೆ. ಈ ಪ್ರದೇಶದಲ್ಲಿ ಐದಾರು ಲಕ್ಷ ಎಕರೆ ಭೂಮಿಯಲ್ಲಿ ಆಹಾರ ಬೆಳೆಸು ವುದಕ್ಕೆ ಏನು ಪ್ಲಾನ್ ಮಾಡಿದ್ದೀರಿ? ಎಷ್ಟು ಹಣ ಖರ್ಚಾಗಿದೆ? ಬೆಳೆ ಏನಾದರೂ ಬಂದಿದೆಯೇ ಅಂದರೆ, ದೊಡ್ಡ ಸೊನ್ನೆ. ಮೈಸೂರು ದೇಶದಲ್ಲಿ ಜನ ಎರಡು ಹೊತ್ತು ಹೊಟ್ಟೆ ತುಂಬಾ ಅನ್ನ ಸಿಕ್ಕುವಂತೆ ಆಗಬೇಕು. ಆಹಾರ ಸಚಿವರಾದ ಶ್ರೀ ಜತ್ತಿಯವರು ಜಾಣತನದಿಂದ ಚಾಣಕ್ಯತನದಿಂದ ಯಾವ ಮಾತಿನಲ್ಲಿಯೂ ಸಿಕ್ಕುವುದಿಲ್ಲ. ಅವರು ಜಾರಿಕೊಳ್ಳುತ್ತಾರೆ. ಒಟ್ಟಿನಲ್ಲಿ ಹೇಳುವುದೇನೆಂದರೆ, ಆಹಾರದ ವಿಚಾರದಲ್ಲಿ ಅನ್ನದ ವಿಚಾರದಲ್ಲಿ ಮಾತ್ರ ದ್ರೋಹ ಮಾಡುವುದಕ್ಕೆ ಪ್ರಯತ್ನ ಮಾಡ ಬೇಡಿ. ಅಧಿಕಾರ ಕಸಿದುಕೊಳ್ಳುವುದಕ್ಕೆ ಏನು ಬೇಕಾದರೂ ಮಾಡಿ. ಮೊದಲು ಜನರಿಗೆ ಅನ್ನ ಕೊಟ್ಟು ಕಷ್ಟ ದೂರ ಮಾಡಿ ಎಂದು ಹೇಳುತ್ತೇನೆ.

ಇವತ್ತಿನ ದಿವಸ ಸರ್ಕಾರದವರು ಆಹಾರವನ್ನು ಬೆಳೆಯುವುದಕ್ಕೆ ಏನು ಏನು ಸಹಾಯವನ್ನು ರೈತರಿಗೆ ಒದಗಿಸಿದ್ದೀರಿ, ಎಷ್ಟು ಲಕ್ಷ ಎಕರೆ ಸ್ಟಾಂಡಿಂಗ್ ಕ್ರಾಪ್ಸ್ ಉಳಿಸಿದ್ದೀರಿ ಎಂದು ಕೇಳುತ್ತೇನೆ. ಬೇಕಾದಷ್ಟು ಮಾಸ್ಟರ್ ಪ್ಲಾನ್‌ಗಳನ್ನು ಕಾಗದದ ಮೇಲೆ ಮಾಡಿದ್ದೀರೇ ಹೊರತು, ಕಾರ್ಯತಃ ಮಾಡಿ ತೋರಿಸಿಲ್ಲ. ಇವತ್ತಿನ ದಿವಸ ಲಕ್ಷಾಂತರ ಎಕರೆಯಲ್ಲಿನ ಬೆಳೆ ನಷ್ಟವಾಗಿದೆ. ಸರ್ಕಾರದವರು ಕಾಲಕ್ಕೆ ಸರಿಯಾಗಿ ಬೇಕಾದಂಥ ಸಹಾಯನ್ನು ಮಾಡಲಿಲ್ಲ. ಶ್ರೀಮಾನ್ ನಾರಾಯಣಗೌಡರು ಸಹ ಈಗ ರಾಜ್ಯದಿಂದ ಹೊರಟುಹೋಗಿದ್ದಾರೆ. ಅನೇಕ ಸಾರಿ ಈ ವಿಷಯವಾಗಿ ಮಾನ್ಯ ಮುಖ್ಯಮಂತ್ರಿ ಗಳಿಗೆ ಮನವಿ ಮಾಡಿಕೊಂಡರೂ ಸಹ ಅವರು ಒಂದು ರೀತಿ ಉಧಾಸೀನ ಭಾವನೆಯಿಂದ ಯಾವ ಸಹಾಯವನ್ನೂ ನಮ್ಮ ಜಿಲ್ಲೆಗೆ ಮಾಡಲಿಲ್ಲ. ಇಷ್ಟಾದರೂ ಸಹ ಸರ್ಕಾರದವರು ತಾವು ಮಾಡುತ್ತಿರು ವುದು ತಪ್ಪು ಎಂದು ಒಪ್ಪಿಕೊಳ್ಳುವುದಿಲ್ಲ. ಇಂತಹರನ್ನು ದೇಶಕ್ಕೆ ದ್ರೋಹ ಮಾಡಿದ ಜನಗಳು ಎಂದು ಹೇಳಬೇಕಾಗುತ್ತದೆ. ಇವತ್ತಿನ ದಿವಸ ದನಗಳಿಗೆ ಮೇವು ಇಲ್ಲ, ನೀರಿಲ್ಲ, ಜನಗಳಿಗೆ ಆಹಾರವಿಲ್ಲ. ನನ್ನ ಕ್ಷೇತ್ರದ ಜನಗಳು ಆಹಾರವಿಲ್ಲದೆ ವಲಸೆ ಹೋಗುತ್ತಿದ್ದಾರೆ. ಈ ವಿಚಾರವನ್ನು ಪತ್ರಿಕೆಗಳಲ್ಲಿ ಪ್ರಚಾರ ಮಾಡಬಾರದು, ಇರುವ ಕಷ್ಟಸುಖಗಳನ್ನು ಸರ್ಕಾರದವರಲ್ಲಿ ಹೇಳಿಕೊಳ್ಳೋಣ ಎಂದು ಇದ್ದೆ. ನಿಜ ಹೇಳಬೇಕೆಂದರೆ, ನನ್ನ ತಾಲ್ಲೂಕಿನಲ್ಲಿ ಅನ್ನವಿಲ್ಲದೆ 27–28 ಜನ ಸತ್ತಿದ್ದಾರೆ. ಇದು ಒಂದು ಹೃದಯ ವಿದ್ರಾವಕವಾದುದು. ಬೇಕಾದಷ್ಟು ಜಮೀನು, ಎತ್ತುಗಳು ಇದ್ದ 7 ಜನದ ಒಂದು ಸಂಸಾರದವರು, ಅವರ ಜಮೀನಿನಲ್ಲಿ ಸರಿಯಾಗಿ ಬೆಳೆಯಾಗದೆ 3 ದಿನ ಉಪವಾಸವಿದ್ದು ಸತ್ತಿದ್ದಾರೆ. ಇದನ್ನೆಲ್ಲಾ ಹೇಳಿದರೆ, ಎಷ್ಟು ಬೇಕಾದರೂ ಗೋಧಿ ಕೊಡುತ್ತೇವೆ ಎಂದು ಹೇಳಿದರು. ಅದನ್ನೂ ಸಹ ಸರಿಯಾಗಿ ಹಂಚುತ್ತಿಲ್ಲ. ಆಹಾರ ಹಂಚುವ ವಿಚಾರದಲ್ಲಿ ಸರ್ಕಾರದವರು ಒಂದು ಇಂಚು ಸಹ ಮುಂದೆ ಹೋಗಿಲ್ಲ. ಇವತ್ತಿನ ದಿವಸ ಮರಗಳಲ್ಲಿ ಹಸಿರು ಎಲೆಗಳೇ ಇಲ್ಲ. ಕಾಡಿನಲ್ಲಿ ಹಸಿರು ಇಲ್ಲದೆ ಎಲ್ಲಾ ಒಣಗಿ ಹೋಗಿದೆ. ಆಹಾರವಿಲ್ಲದೆ ಜನರು ಸಾಯುತ್ತಿದ್ದಾರೆ. ಇದಕ್ಕಿಂತಲೂ ದುರ್ದೈವ ಬರಬಾರದು ಎಂದು ಹೇಳುತ್ತೇನೆ.

ನಮ್ಮ ತಾಲ್ಲೋಕಿನಲ್ಲಿ ಪ್ರೊಕ್ಯೂರ್‌ಮೆಂಟ್ ಇಲ್ಲ. ಪ್ರೊಕ್ಯೂರುಮೆಂಟ್ ವಿಚಾರದ ಬಗ್ಗೆ ನನಗೆ ಹೆಚ್ಚು ಗೊತ್ತಿಲ್ಲ. ತಿಳಿಯದೆ ಇರುವ ವಿಚಾರವನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅಂತೂ ನನ್ನ ತಾಲ್ಲೋಕಿನಲ್ಲಿ ಮಳೆ ಆಗಿಲ್ಲ, ಬೆಳೆ ಆಗಿಲ್ಲ. ಆದ್ದರಿಂದ ಪ್ರೊಕ್ಯೊರ್‌ಮೆಂಟ್ ಇಲ್ಲ. ಒಂದು ವಿಚಾರ ಹೇಳಬೇಕೆಂದರೆ, ಚಿಕ್ಕನಾಯಕನ ಹಳ್ಳಿಯಲ್ಲಿ ಒಬ್ಬ ರೈತ 12 ಫಲ್ಲ ಬತ್ತವನ್ನು ಬೆಳೆದಿದ್ದ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಆದರೆ 25 ಫಲ್ಲ ಬತ್ತವನ್ನು ಸರ್ಕಾರಕ್ಕೆ ಕೊಡಬೇಕೆಂದು ಅಧಿಕಾರಿಗಳು ಹೇಳಿದ್ದಾರೆ. ಇವತ್ತಿನ ದಿವಸ ಕೆಲವರು ದೇಶಾಭಿಮಾನಿಗಳು ಸರ್ಕಾರಕ್ಕೆ ಕೊಡಬೇಕಾದ ಭಾಗವನ್ನು ಸಹ ಕೊಡದೆ ಬ್ಲ್ಯಾಕ್ ಮಾರ್ಕೆಟ್‌ನಲ್ಲಿ ಮಾರಿ ಬೇಕಾದಷ್ಟು ಹಣ ಮಾಡುತ್ತಿದ್ದಾರೆ. ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಿದ್ದಾರೆ. ಇವತ್ತಿನ ದಿವಸ ಸರ್ಕಾರಿ ಅಧಿಕಾರಿಗಳು ಬತ್ತವನ್ನು ವಸೂಲಿ ಮಾಡುವ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ. ಅದಕ್ಕೋಸ್ಕರವಾಗಿ ನಾನು ಹೇಳುವುದು, ಯಾರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆ, ಯಾರು ಸರಿಯಾಗಿ ಮಾಡುತ್ತಿಲ್ಲ ಎಂಬುದನ್ನು ನೋಡಿ, ಸರಿಯಾಗಿ, ನ್ಯಾಯವಾದ ರೀತಿಯಲ್ಲಿ ಆಹಾರವನ್ನು ವಸೂಲಿ ಮಾಡುವುದಕ್ಕೆ ಅಧಿಕಾರಿಗಳಿಗೆ ತಿಳಿವಳಿಕೆಯನ್ನು ಕೊಡಿ. ತಮಗೆ ಇಷ್ಟ ಬಂದಂತೆ ವಸೂಲಿ ಮಾಡುತ್ತಿದ್ದಾರೆ ಎಂದು ನನಗೆ ತಿಳಿದು ಬಂದಿದೆ. ಸರ್ಕಾರದವರ ಪತ್ರಿಕೆ ಮುಖಾಂತರ ಕೇಂದ್ರ ಸರ್ಕಾರದಿಂದ ಅಷ್ಟು ಆಹಾರಧಾನ್ಯ ಬರತ್ತದೆ, ಇಷ್ಟು ಆಹಾರಧಾನ್ಯ ಬರುತ್ತದೆ ಎಂದು ಹೇಳಿಕೆ ಕೊಡುತ್ತಾರೆ. ಬಂದಮೇಲೆ ಸರಿಯಾಗಿ ಹಂಚುವುದಿಲ್ಲ. ನೀವು ಹೇಳಿಕೆ ಕೊಡುವುದರಲ್ಲಿ ಏನೂ ವಿಶೇಷವಿಲ್ಲವೆಂದು ಜನಗಳು ತಿಳಿದಿದ್ದಾರೆ. ನಾನಾದರೂ ಹೇಳುತ್ತೇನೆ, ಕೇಂದ್ರ ಸರ್ಕಾರದಿಂದ ಬಂದ ಆಹಾರವನ್ನು ಸರಿಯಾಗಿ ಹಂಚುವುದು ಸರ್ಕಾರದ ಕರ್ತವ್ಯ. ಶಾಸನ ಸಭೆಯ ಕರ್ತವ್ಯ. ನೀವು ಆಹಾರವನ್ನು ಸರಿಯಾಗಿ ಹಂಚದೆ ಜನಗಳು ಒಂದು ಕಡೆಯಿಂದ ಸಾಯುತ್ತಿದ್ದಾರೆ. ಧಾರವಾಡ, ಗುಲ್ಬರ್ಗ, ರಾಯಚೂರು, ಬೆಳಗಾಂ, ಈ ಕಡೆಗಳಲ್ಲಿ ಬಿಟ್ಟರೆ, ನಮ್ಮ ಕಡೆ ಸರಿಯಾಗಿ ಮಳೆಯಾಗಿಲ್ಲ, ಬೆಳೆಯಾಗಿಲ್ಲ. ಜನರು ಆಹಾರವಿಲ್ಲದೆ ಸಾಯುತ್ತಿದ್ದಾರೆ, ಹೆಚ್ಚು ಆಹಾರ ಧಾನ್ಯವನ್ನು ಒದಗಿಸಬೇಕೆಂದು ನೀವು ಕೇಂದ್ರ ಸರ್ಕಾರಕ್ಕೆ ಕೇಳಿಕೊಳ್ಳಬೇಕು.

ಇವತ್ತಿನ ದಿವಸ ಮಂತ್ರಿಗಳ ಜಿಲ್ಲೆಯಲ್ಲಿ ಹೆಚ್ಚು ಹಣ ಖರ್ಚು ಮಾಡಿ ಕಾಮಗಾರಿಗಳನ್ನು ಮಾಡಿಸುತ್ತಿದ್ದಾರೆ. ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಲಕ್ಷಾಂತರ ರೂಪಾಯಿಗಳ ಕಾಮಗಾರಿಗಳನ್ನು ಮಾಡಿಸುತ್ತಿದ್ದಾರೆ, ಆದರೆ ನನ್ನ ಕ್ಷೇತ್ರದಲ್ಲಿ ಕೇವಲ 5 ಸಾವಿರ ರೂಪಾಯಿಗಳ ಕಾಮಗಾರಿಯನ್ನು ಮಾಡಿಸುತ್ತಿದ್ದಾರೆ. 1,60,000 ಜನರು ಇರುವ ಜಾಗದಲ್ಲಿ ಕೇವಲ 5 ಸಾವಿರ ರೂಪಾಯಿಗಳ ಕಾಮಗಾರಿಯನ್ನು ತೆಗೆದುಕೊಂಡು, ಅಲ್ಲಿಯ ಜನರಿಗೆ ಸರಿಯಾಗಿ ಕೆಲಸ ಸಿಕ್ಕದೆ ತೊಂದರೆಪಡುತ್ತಿದ್ದಾರೆ. ನಮ್ಮ ತಾಲ್ಲೋಕಿನವರು ಮಾಡಿದ ಅಪರಾಧವೇನು, ನಮ್ಮ ಜಿಲ್ಲೆಯವರು ಮಾಡಿದ ಅಪರಾಧವೇನು ? ಮತ್ತೊಂದು ಜಿಲ್ಲೆಯವರು ಮಾಡಿದ ಅಪರಾಧವೇನು ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಮನೆ ಮನೆಗೂ ಹಣವನ್ನು ಹಂಚುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ (ಸಹಕಾರ ಮತ್ತು ವಸತಿ ಶಾಖೆಯ ಮಂತ್ರಿಗಳು).—ಅಂದರೆ ಅರ್ಥವೇನು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಂದರೆ ಅವರ ಜಿಲ್ಲೆಯಲ್ಲಿ, ತಮ್ಮ ಜಿಲ್ಲೆಯಲ್ಲಿ ಬಾವಿ ತೆಗೆಯಿರಿ ತಕಾವಿ ಬೆಳೆ ಬೆಳೆಯಿರಿ, ಸಾಲ ಕೊಡುತ್ತೇವೆ ಎಂದು ಮನೆ ಮನೆಗೊ ಹೋಗಿ ಕೊಡುತ್ತಿದ್ದಾರೆ. ಈ ರೀತಿ ಅನ್ಯಾಯ ಮಾಡುವುದು ಸರಿಯಲ್ಲ. ಅಧ್ಯಕ್ಷರ ಪೀಠದಲ್ಲಿ ತಕ್ಕಡಿ ಇದೆ. ಅದರ ಅರ್ಥ ಎಲ್ಲರನ್ನೂ ಸಮನಾಗಿ ಕಾಣಬೇಕು ಎಂಬುದು. ಆದರೆ ಯಾವು ಆರೀತಿ ನಡೆಯುತ್ತಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಚಿತ್ರದುರ್ಗಕ್ಕೆ 210 ಬಾವಿಗಳನ್ನು ಕೊಟ್ಟಿದೆ. ತುಮಕೂರಿಗೆ 270 ಬಾವಿಗಳನ್ನು ಕೊಟ್ಟಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದೊಂದು ಕಡೆ ಇರುವ ಬಿ. ಡಿ. ಓ. ಗಳು ಒಂದೊಂದು ರೀತಿಯ ವ್ಯವಹಾರ ಮಾಡುತ್ತಿದ್ದಾರೆ. ಈ ರಾಜ್ಯದಲ್ಲಿರುವ ಐದು ಜನ ಡಿವಿಜನಲ್ ಕಮೀಷನರ್‌ಗಳು ಐದು ರೀತಿಯಿಂದ ವ್ಯವಹಾರ ಮಾಡುತ್ತಿದ್ದಾರೆ. ಈ ವಿಚಾರವನ್ನೆಲ್ಲಾ ವಿವರವಾಗಿ ವ್ಯವಸಾಯ ಇಲಾಖೆಯ ವಿಚಾರ ಬಂದಾಗ ಹೇಳುತ್ತೇನೆ. ಈಗ ಹೆಚ್ಚು ಹೇಳುವುದಿಲ್ಲ.

ಮಿಸಲೇನಿಯಸ್ ಡಿಮ್ಯಾಂಡ್ ಬಗ್ಗೆ ಒಂದೆರಡು ವಿಚಾರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಇನ್‌ಫರ್ಮೇಷನ್ ಇಲಾಖೆಯಿಂದ ಜನಗಳಿಗೆ ಯಾವ ರೀತಿಯ ಅನುಕೂಲಗಳೂ ಆಗುತ್ತಿಲ್ಲ. ಹಳೇ ಪುಸ್ತಕದ ಅಂಗಡಿಯಾಗಿ ಇದೆ. ಮಂತ್ರಿಗಳು ಹೇಳಿದ ಹೇಳಿಕೆಯನ್ನು ಪುಸ್ತಕದಲ್ಲಿ ಪ್ರಕಟಣೆ ಮಾಡಿ, ಆ ಪುಸ್ತಕಕ್ಕೆ ರಟ್ಟು ಹಾಕಿ ಇಡುತ್ತಾರೆಯೇ ಹೊರತು, ಜನಗಳಿಗೆ ಯಾವ ವಿಚಾರವೂ ಗೊತ್ತಾಗುವುಲ್ಲ. ಅದ್ದರಿಂದ ನಾನಾದರೂ ಹೇಳುತ್ತೇನೆ, ಇದನ್ನು ರೀಆರ್ಗನೈಸ್ ಮಾಡಬೇಕು ಎಂದು. ತರುಣ ಮಂತ್ರಿವರ್ಯರಾದ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಈ ವಿಚಾರದಲ್ಲಿ ಸರಿಯಾಗಿ ಕೆಲಸಮಾಡಬೇಕು. ರಾಜ್ಯದಲ್ಲಿ ಎಲ್ಲೆಲ್ಲಿ ಏನೇನು ಆಗುತ್ತಿದೆ. ಎಂಬುದನ್ನು ಜನಗಳಿಗೆ ಸರಿಯಾಗಿ ತಿಳಿಯುವಂತೆ ಏರ್ಪಾಡು ಮಾಡಬೇಕು. ಇಲ್ಲದಿದ್ದರೆ ನಾವುಗಳು ಮತ್ತು ನೀವುಗಳು ಇಲ್ಲಿ ಐದು ವರ್ಷ ಇದ್ದು ಹೋಗುವುದು, ಅಷ್ಟಾಗುತ್ತದೆ. ಇದರಿಂದ ರಾಷ್ಟ್ರದ

ಕಲ್ಯಾಣ ಮಾಡಿದ ಹಾಗೆ ಆಗುವುದಿಲ್ಲವೆಂದು ಹೇಳುತ್ತೇನೆ. ಶ್ರೀ ರಾಮಕೃಷ್ಣ ಹೆಗ್ಗಡೆಯವರು ಈ ಇಲಾಖೆಗೆ ಬರುವುದಕ್ಕೆ ಮುಂಚೆಯೂ ಕೂಡ ಈ ಇಲಾಖೆಯಲ್ಲಿ ಸರಿಯಾಗಿ ಕೆಲಸವಾಗುತ್ತಿರಲಿಲ್ಲ ವಿಧಾನಸೌಧದಲ್ಲಿಯೇ ಸರಿಯಾಗಿ ದಕ್ಷತೆಯಿಂದ ಕೆಲಸವಾಗುವುದಿಲ್ಲವೆಂದು ಶ್ರೀಮಾನ್ ರಾಮಕೃಷ್ಣ ಹೆಗಡೆಯವರೇ ಒಪ್ಪಿಕೊಂಡಿದ್ದಾರೆ. ಇನ್ನು ಮುಂದಾದರೂ ಸಹ ಸರಿಯಾಗಿ ಕೆಲಸವಾಗುವಂತೆ ನೋಡಿಕೊಳ್ಳುತ್ತಾರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈ ಆಹಾರದ ಕೊರತೆ ನಮ್ಮ ದೇಶಕ್ಕೆ ಬಂಧಿದೆಯೇ, ಬೇರೆ ದೇಶಕ್ಕೆ ಬಂದಿದೆಯೇ, ಆ ದೃಷ್ಟಿಯಿಂದ ಹಿಂದೆ ನಮ್ಮ ದೇಶ ಯಾವ ರೀತಿ ಇತ್ತು, ಈಗ ನಮ್ಮ ದೇಶದಲ್ಲಿ ಯಾವ ರೀತಿ ಇದೆ, ಇದರಬಗ್ಗೆ ಸರ್ಕಾರದ ಧೋರಣೆ ಏನು ಎಂಬುದರ ಬಗ್ಗೆ ಮತ್ತು ಜನರು ಆಹಾರದವಿಷಯದ ಬಗ್ಗೆ ಏನು ಅಭಿಪ್ರಾಯ ಪಡುತ್ತಾರೆ ಎಂಬ ವಿಚಾರದ ಬಗ್ಗೆ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಹಳ್ಳಿಗಾಡಿನ ಕಡೆ ಅದರಲ್ಲಿಯೂ, ಹಳೇ ಮೈಸೂರಿನ ಕಡೆ ಪ್ರವಾಸ ಮಾಡಿದಾಗ ಅಲ್ಲಿಯ ಜನಗಳಿಂದ ಒಂದು ಮಾತು ಕೇಳಿಬರುತ್ತಿತ್ತು. ಅದು ಏನೆಂದರೆ ಮಹಾರಾಜರು ಹೋದರು, ಈ ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದಮೇಲೆ ಈ ರೀತಿಯಾದ ಆಹಾರ ಅಭಾವ ಸ್ಥಿತಿ ಬಂದಿದೆ ಎಂದು ಹೇಳುತ್ತಾರೆ ವಿಧಿ ಇಲ್ಲದೆ ಜನರು ಈ ಮಾತನ್ನು ಹೇಳುತ್ತಿದ್ದಾರೆ. ಒಂದು ಮಾತ್ರ ನಿಜ. ಜನಗಳು ಸುಖ ಪಡಬೇಕು ಎಂದು ಸ್ವಾತಂತ್ರ್ಯಕ್ಕಾಗಿ ದುಡಿದರು.

ಹಿಂದೆ ಫ್ರಾನ್ಸ್ ದೇಶಕ್ಕೆ ಆಹಾರ ಅಭಾವ ಬಂದಾಗ ಜನರು ಅರಮನೆ ಬಳಿಗೆ ಹೋಗಿ ರೊಟ್ಟಿ ಇಲ್ಲ, ರೊಟ್ಟಿ ಇಲ್ಲ ಎಂದು ಹೇಳಿದಾಗ, ಅಲ್ಲಿಯ ರಾಣಿ ರೊಟ್ಟಿ, ಅನ್ನ ಇಲ್ಲದಿದ್ದರೆ ಹೋಗಲಿ, ಹೋಳಿಗೆ ಮಾಡಿಕೊಂಡು ತಿನ್ನಿ ಎಂದು ಹೇಳಿದಳಂತೆ ನಿಮ್ಮ ಈಗಿನ ಆಧುನಿಕ ಪ್ರತಿಕ್ರಿಯೆ ನೋಡಿ. 1943ನೇ ಇಸವಿಯಲ್ಲಿ ನಾನು ಕಣ್ಣಾರೆ ಕಂಡಿದ್ದು. ಆಗ ಕಲ್ಕತ್ತಾದಲ್ಲಿ ಜನ ಸಾಯುತ್ತಾ ಇದ್ದರು. ಅವರು ಸತ್ತಾಗ ಮೈಮೇಲೆ ಇರುವ ಬಟ್ಟೆ ಮುಖಕ್ಕೆ ಮುಚ್ಚುತ್ತಾ ಇದ್ದರು. ಆಮೇಲೆ ಮುನಿಸಿಪಾಲಿಟಿಯವರು ಹೆಣವನ್ನು ಆಚೆಗೆ ಹಾಕುತ್ತಾ ಇದ್ದರು. ನಾನು ನೋಡುತ್ತಾ ಇದ್ದೆ. ನಮ್ಮಗಳಿಗೆ ಹೊಟ್ಟೆ ಉರಿಯುತ್ತಾ ಇತ್ತು. ಒಂದು ದಿವಸ ಒಬ್ಬ ಬ್ರಿಟಿಷ್ ಅಧಿಕಾರಿ ಊಟ ಮಾಡುತ್ತಾ ಇರಲಿಲ್ಲ. What is wrong with you ಎಂದು ಕೇಳಿದೆ, ಏನೂ ಇಲ್ಲ ಎಂದು ಹೇಳುತ್ತಿದ್ದ. ಆಮೇಲೆ "I say Mr. Deo, how to see a fellow human being dead without food like that" ಎಂದು ಹೇಳಿದ. ನನಗೆ ದುಃಖ ಆಯಿತು. "Churchill, or no Churchill, we will vote this Government out so that Indians will get freedom and you will not starve in future" ಎಂದು ಅವೊತ್ತು ಕೇಳಿದ ಈ ಮಾತು ಇವೊತ್ತು ನನ್ನ ಕಿವಿಯಲ್ಲಿ ಮೊಳಗುತ್ತಾ ಇದೆ. ಮನುಷ್ಯನಿಗೆ ಅಂತರಾತ್ಮ ಇದೆಯೋ ಇಲ್ಲವೋ ಎಂದು ನನಗೆ ಪೂರ್ಣ ಅನುಮಾನ ಬಂದಿದೆ. ಇನ್ನೊಬ್ಬರು ಮಾಡುವುದನ್ನು ನೋಡಿ ನಿಮ್ಮ ನಡವಳಿಕೆಗಳಲ್ಲಿ ನಿಮಗೆ ಅಂತರಾತ್ಮ ಇದೆಯೆಂದು ಗೊತ್ತಾಗಬೇಕು. ಹಿಟ್ಲರ್ ಕಾಲದಲ್ಲಿ ವಾರ್ ಕ್ರಿಮಿನಲ್ಸ್‌ಗೆ ಶಿಕ್ಷಣ ಕೊಡುವಾಗ ಜ್ಯೂಸ್ ಜನರನ್ನು ತೆಗೆದುಕೊಂಡು ಹೋಗಿ ಗ್ಯಾಸ್ ಚೇಂಬರ್‌ನಲ್ಲಿ ಹಾಕಿ ಸಾಯಿಸಿದ್ದು ನೋಡಿದರೆ, ಮನುಷ್ಯನಿಗೆ ಕಾನ್‌ಷನ್ಸ್ ಎಷ್ಟರಮಟ್ಟಿಗೆ ಇದೆ ಎಂದು, ಅನಿಸುತ್ತದೆ. ಮಹಾ ಯುದ್ಧಾನಂತರ ಬ್ರಿಟನ್‌ನಲ್ಲಿ ಲೇಬರ್ ಗವರ್ನಮೆಂಟ್ ಬಂತು. ಹಾಗೆಯೇ ನಮಗೆ ಸ್ವಾತಂತ್ರ್ಯ ಬಂತು. ನಿಮ್ಮ ಆಡಳಿತ ನಡೆಯುತ್ತದೆ. ಈಗ ನಿಮ್ಮ ಅಣ್ಣತಮ್ಮಂದಿರು ಸಾಯುತ್ತಾ ಇದ್ದಾರೆ. ಇದನ್ನು ನೋಡಿದರೆ, ಬಹಳ ಭಯಾನಕವಾಗಿದೆ. ನಿಮ್ಮ ಅಂತರಾತ್ಮ ಹೇಗೆ ಇರಬೇಕು ಎಂದು ಅನ್ನಿಸುತ್ತದೆ. ನಾವು ಆಳವಾಗಿ ಯೋಚನೆ ಮಾಡಬೇಕು. ಜನತೆಯ ದೃಷ್ಟಿಯಲ್ಲಿ ನೀವು ನಮ್ಮವರು ನಮ್ಮ ಸರ್ಕಾರದಲ್ಲಿರುವವರು ನಮ್ಮ ಅಣ್ಣತಮ್ಮಂದಿರು ಎನ್ನುವುದನ್ನು ಪೂರ್ಣವಾಗಿ ಅವರು ಕಳೆದುಕೊಂಡಿದ್ದಾರೆ. ಅದು ನನಗೆ ಬಹಳ ಪೂರ್ಣವಾಗಿ ಮನವರಿಕೆಯಾಗಿದೆ. ನಿಮ್ಮ ಪಾರ್ಟಿ ದೃಷ್ಟಿಯಿಂದ ಹೇಳುತ್ತೇನೆ ಬ್ರಿಟಿಷರನ್ನು ಹೊಡೆದೋಡಿಸಬೇಕು, ನಮಗೆ ಸ್ವಾತಂತ್ರ್ಯ ಬರಬೇಕು, ನಮ್ಮ ರಾಷ್ಟ್ರದ ಆಡಳಿತ ನೆಟ್ಟಗೆ ಆಗಬೇಕು ಎಂದು ನಡೆಸಿದ ಹೋರಾಟದಲ್ಲಿ ಎಷ್ಟೋ ಜನರು ನಿಮ್ಮ ಜೊತೆಗೆ ಬ್ರಿಟಿಷರೊಡನೆ ಹೋರಾಟ ನಡೆಸಿದರು. ಅವರು ಇವೊತ್ತು ಇದ್ದಾರೆ. ಅವರು ದುಡ್ಡು ತೆಗೆದುಕೊಂಡು ಅರಮನೆ ಕಟ್ಟಿಸಲಿಲ್ಲ ಮಣ್ಣಿನ ಗುಡಿಸಲುಗಳಲ್ಲಿಯೇ ಇದ್ದಾರೆ. ಅವರು ನಿಮಗೆ ಎಷ್ಟೋ ಅರ್ಜಿಗಳನ್ನು ಹಾಕಿದ್ದಾರೆ. ಅಂತಹ ಮನುಷ್ಯರು ಭಿಕ್ಷೆ ಬೇಡಬೇಕಾಗಿದೆ, ಹೆಣ್ಣುಮಕ್ಕಳು, ಗಂಡುಮಕ್ಕಳು ಹಸಿವೆಯಿಂದ ಕಷ್ಟಪಡುತ್ತಿದ್ದರೆ ನೀವು ಅದನ್ನು ನೋಡುತ್ತಾ ಇದ್ದರೆ, ನಿಮಗೆ ಅಂತರಾತ್ಮ ಇದೆಯೇ ಎಂದು ಕೇಳುತ್ತಾ ಇದ್ದೇನೆ. ಇದನ್ನು ನಿಮಗೆ ಚುಚ್ಚಬೇಕು ಎಂದು ಹೇಳುತ್ತಿಲ್ಲ. ಹಸಿವಿನ ಪ್ರಶ್ನೆಯಾದ್ದರಿಂದ ಇದನ್ನು ಹೇಳುತ್ತೇನೆ.

(ಶ್ರೀ ಪಿ. ಎಮ್. ದೇವ್)

ಈಗ ಆಹಾರ ಪರಿಸ್ಥಿತಿ ಏನಾಗಿದೆ ಎಂದರೆ, ಎಷ್ಟೋ ಜನ ಟಾಂಗ್ ಬಿರಾಂಗ್ ಆಗುವ ಹಾಗೆ ಮಾತನಾಡುತ್ತಾರೆ. ಆದರೂ ಕೂಡ ಜನರ ಮೇಲೆ ಯಾವ ತರಹ ಪರಿಣಾಮವಾಗಿದೆ ಎನ್ನುವುದನ್ನು ಗದ್ಯರೂಪದಲ್ಲಿ ಹೇಳುತ್ತೇನೆ. ನಡೆವಳಿಕೆಗಳು ಏನಾದರೂ ಆಗಿರಲಿ. ನುಡಿವಳಿಕೆ ಗಳಲ್ಲಿ ಅತಿ ಜಾಣರು ಆಗಿದ್ದಾರೆ, ಕಾಂಗ್ರೆಸಿನವರು, ಭಲೆ ಎಂದು ಹೇಳುತ್ತೇನೆ. ಹೋದ ಸಲ ಯುದ್ಧ ಶುರು ಆದಾಗ, ಎಷ್ಟೋ ವರ್ತಕರು ದಿವಾಳಿ ಆಗುವ ಪರಿಸ್ಥಿತಿ ಬ್ರಿಟನ್‌ನಲ್ಲಿ ಬಂತು. ಆಗ 50 ವರ್ಷದವರೂ ಕಡ್ಡಾಯವಾಗಿ ಸೈನ್ಯದಲ್ಲಿ ಬಂದು ಸೇರಿದರು. ಹೊಟ್ಟೆಗಿಲ್ಲದೆ ಅವರಿಗೆ ಕೆಲಸ ಕೊಡುವ ದೃಷ್ಟಿಯಿಂದ ಹಾಗೆ ಮಾಡಿದರು. ಪ್ರತಿಯೊಬ್ಬರಿಗೂ ಕೆಲಸ ಒದಗಿಸಿದರು. ಆಮೇಲೆ ಆಹಾರವನ್ನು ಎಲ್ಲರೂ ಹಂಚಿಕೊಂಡರು. ಅವರವರ ಜನಗಳನ್ನು ಸರಿಯಾಗಿ ನೋಡಿ ಕೊಂಡರು. ರೇಷನಿಂಗ್ ತಂದು ಆಹಾರವನ್ನು ಸರಿಯಾಗಿ ಹಂಚಿಕೊಂಡರು. ಆದರೆ ಈಗ ನಮ್ಮ ದೇಶದ ಗತಿ ನೋಡಿ, ನಮ್ಮ ಅಣ್ಣತಮ್ಮಂದಿರು ಹಸಿವೆಯಿಂದ ಬಳಲುತ್ತಿರುವಾಗ ರಾಜ್ಯಭಾರ ಹಂಚಿಕೊಳ್ಳೋಣ. ನಾವು ಯಾರಿಗೂ ಬಿಡುವುದಿಲ್ಲ ಎಂದು ಹೇಳುವುದು ಅಪಾಯಕಾರಿಯಾದ ವಿಷಯ. ಆಹಾರ ಪರಿಸ್ಥಿತಿಯನ್ನು ಎದುರಿಸಬೇಕಾದರೆ, ಇರುವ ಆಹಾರವನ್ನು ಸಮವಾಗಿ ಹಂಚ ಬೇಕು. ಹಾಗೆ ಮಾಡುವ ಸೂಚನೆ ಎಲ್ಲೂ ಕಾಣುತ್ತಾ ಇಲ್ಲ. ನಾನು ದುಡ್ಡು ಖರ್ಚು ಮಾಡಿ ನಕಾಶೆ ಬರೆದು ಒಂದು ಪ್ಲಾನ್ ಕೊಟ್ಟೇ. ಕೆರೆಅಂಗಳದ ಅಂಚಿನಲ್ಲಿ ದಿಕ್ಕಿಗೊಂದು ಬಾವಿ ತೋಡಿ ನೀರು ಒದಗಿಸಿ ಟ್ರ್ಯಾಕ್ಟರ್ ಕೊಟ್ಟು ಕಡಿಮೆ ನೀರು ತೆಗೆದುಕೊಳ್ಳುವ ರಾಗಿ, ಮುಂತಾದ ಬೆಳೆ ಬೆಳೆಯಬಹುದಾಗಿತ್ತು. ಈಗಾಗಲೇ ಹಾಗೆ ಮಾಡಿದ್ದರೆ ಲಕ್ಷಾಂತರ ಟನ್ ಧಾನ್ಯ ಬೆಳೆಯುವ ಅವಕಾಶ ಇತ್ತು. ಅದನ್ನು ಮಾಡುವುದಕ್ಕೆ ಬದಲಾಗಿ, ಆರ್ಥಿಕ ವ್ಯವಸ್ಥೆಗೆ ಕೊಡಲಿ ಪೆಟ್ಟು ಖಂಡಿತ ಹಾಕು ತ್ತಿದ್ದೀರಿ. ನಾನು ಆಗಲೇ ಒಂದು ಸಾರಿ ಹೇಳಿದ್ದೆ ಎಂದು ಕಾಣುತ್ತದೆ. ಮಾಜಿ ಗವರ್ನರ್‌ಆಗಿದ್ದ ಶ್ರೀ ಪ್ರಕಾಶರು ಹೇಳಿದ್ದರು, ಅದು ಏನೆಂದರೆ ನಾವು ಹೋರಾಡಿದ ಸ್ವರಾಜ್ಯ ಬಂದಿಲ್ಲ ಎಂದು ಈಗ ಜನ ನೋಡಿದರೆ ಆ ಅಭಿಪ್ರಾಯ ಸಮರ್ಥನೀಯ ಆಗುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಬೇಕು ಎಂದು ಹೊಡೆದಾಡಿದ ಸರ್ಕಾರಕ್ಕೆ ಹೊಟ್ಟೆಬಾಕುತನ ಬರಬಾರದು. 1857ನೇ ಇಸವಿಯಲ್ಲಿ ಒಂದು ಕ್ರೈಸಿಸ್ ಬಂತು. ಹಸಿವು, ನಿರುದ್ಯೋಗದಿಂದ ತೊಳಲುತ್ತಿದ್ದ ಜನವನ್ನು ತುಳಿಯುತ್ತಾ ಇದ್ದರು We come to the inevitable conclusion that the freedom struggle is not finished. It is bound to lead to new crisis. It is the duty of every patriot to shape the people's strength in a way that they will fight and get the freedom and that freedom will ensure that no man will grow hungry in this land and that no man will be denied food. ಹಸಿವು ಆಗಿರು ವಾಗ, ಹೊಟ್ಟೆಬಾಕತನ ಯಾರಿಗೆ ಯಾವಾಗ ಇರುತ್ತದೋ ಆಗ ಅದನ್ನು ಎದುರಿಸಿ ಹೋರಾಡುವುದು ಪ್ರತಿಯೊಬ್ಬ ದೇಶಾಭಿಮಾನಿಯ ಕರ್ತವ್ಯ. ಇನ್ನೊಂದು ಕ್ರೈಸಿಸ್ ಬರುತ್ತದೆ. ಹಿಂದೆ ಪರಕೀಯ ರಿಂದ ಸ್ವಾತಂತ್ರ್ಯ ಬಂತೇ ಹೊರತು ಜನರಿಗೆ ಸ್ವಾತಂತ್ರ್ಯ ಬರಲಿಲ್ಲ. ಜನರಿಗೆ ಸ್ವಾತಂತ್ರ್ಯ ಬರ ಬೇಕಾದರೆ ಇನ್ನೊಂದು ಕ್ರೈಸಿಸ್ ಬರುವುದು ಇದೆ. ನಿಮಗೆ ಇರುವುದು ಎರಡು ಮಾರ್ಗ ಒಂದು ರಕ್ತಪಾತವಾಗಿ ಅಧಿಕಾರದಿಂದ ಇಳಿಯಬಹುದು. ಅದಕ್ಕೆ ಅನುಮಾನ ಇಲ್ಲ. ನೀವು ಅಧಿಕಾರ ಲಾಲಸೆಯಿಂದ ಪಂಚಾಯಿತಿ ಚುನಾವಣೆ ಮುಂದಕ್ಕೆ ಹಾಕಿದಿರಿ. ತಾಲ್ಲೂಕ್ ಎಲೆಕ್ಷನ್ ಮುಂದಕ್ಕೆ ಹಾಕಿದಿರಿ. ಮುಂದಿನ ಮಹಾಚುನಾವಣೆ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಈ ದೃಷ್ಟಿಯಿಂದ ಇಷ್ಟು ಹೇಳುತ್ತೇನೆ. ಕೆರೆ ಅಂಗಳದಲ್ಲಿ ಒಂದೊಂದು ದಿಕ್ಕಗೆ ಒಂದೊಂದು ದೊಡ್ಡ ಪ್ರಮಾಣದಲ್ಲಿ ಬಾವಿಗಳನ್ನು ತೋಡಿಸಿ ಡಿಪಾರ್ಟ್‌ಮೆಂಟ್ ಮುಖಾಂತರ ಸಹಾಯ ಒದಗಿಸಿ. ಅಗ್ರಿಕಲಚರಲ್ ಎಕ್ಸೆಟೆನ್‌ಷನ್ ಆಫೀಸರು ಇದ್ದಾರೆ. ಅವರ ಮುಂಖಾತರ ಅಥವಾ ಇನ್ನೂ ಯಾವ ಎಜೆನ್ಸಿಯ ಮುಖಾಂತರ, ಈ ಕೆಲಸ ಮಾಡಿಸಿ ಎಂದು ಹೇಳಿ ನಮ್ಮ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P.M.

Sri R. S. HEGDE (Honnawar).—Mr. Speaker, Sir, while supporting today's demand, I submit that the problem of food cannot be solved within one or two years. It might take, Sir, more than a generation for being solved. The present distributive system of foodgrains through co-operative generally has been quite wholesome and in my submission

the Government have been watchful of the misuse by this agency. The Leader of the Opposition Sir stated that 50 per cent of the foodgrains entrusted to co-operative societies is going to the blackmarket. I at once dismiss this assertion, bold assertion on the ground that it is not true to the actual state of affairs. I have been a co-operator for the last 20 years and distribution had been going on very efficiently in the co-operative sphere. This assertion of the Leader-of the Opposition also lacks knowledge about the distributive system effected by the Government. There is the Food Director who allots the quota to the district there is the Deputy Commissioner who breaks up the quota and allots it to every taluk; and at the taluk level, the Tahasildar again breaks it up to the urban and rural areas depending upon the exigency and urgency of the situation. Quota system is arrived at on the basis of previous statistics. A particular district or a particular taluk is allotted quota of foodgrains depending upon the necessity of each district or taluk. So, Sir, we have got a Thru-tier system of distribution ? on the one hand, we have got the Food Department which controls the system; on the other hand, we have got the co-operative agency which actually distributes the quota that is granted. Secondly, Sir, even people have become conscious that when a particular qouta is allotted to a taluk, even if one individual or one family does not get the quota, then they raise a hue and cry and large commotion is created. Therefore people are watchful. The Tahasildar is watchful and the co-operative society is watchful. I am stating that to say that 50 per cent of the quota allotted to the co-operative society goes to the black market is something which has to be very stoutly repudiated. Sir, stray cases in the State cannot lead to sweeping statement that co-operative societies are selling foodgrains in the blackmarket. When you are thinking of food problem of the State, we cannot have a narrow outlook. We have to put ourselves in the All-India pattern. There are two problems before the State and the country. Either we have to grow more or we have to borrow more. If we can do none, we have to perish. So, instead of borrowing more which will lead to economic mismanagement consequent on the chronic dependence for food on foreign country, the only irresistible alternative is that we have to depend upon ourselves. We have to grow intensively and extensively. So, Sir, with this point of view, it is absolutely essential to have a comparative study of food production obtaining in India and also in other foreign countries. Sir, the area in Great Britain under crops and pasture land has remained the same as there is no more land to be cultivated for the last 20 years. The soil is being continuously built up and the outturn has increased by 60 per cent. In the United States of America, Sir, crop planning is controlled under the Agricultural Adjustment Act and their present problem is to limit the acreage under various crops with a view to minimise the surplus and storage difficulties. In India the scope for adding cultivable land is quite good; the scope for intensive cultivation is quite good, but unfortunately due to various reasons the apthy of the agriculturists to use modern method in cultivation in preference to the traditional method

(SRI R. S. HEGDE)

is responsible for creating certain difficulties. Secondly, in U. S. A. and Great Britain there is also subsidising of agriculture. In Britain, Sir, it is said that the annual expenditure under this head is Rs. 650 million dollars and it works out at Rs. 1,300 dollars per farmer, i.e., nearly Rs. 6,000. The object of this policy, Sir, it is stated, is to keep the agricultural industry on its toes and to ensure that British farming goes on doing its part in solving the nation's economic problem. It is said that there are 5 lakhs farmers in Great Britain. So also in U. S. A. and the annual expenditure is more or less the same and on each farmer 1,300 dollars are spent, that is amounting to Rs. 6,000. Sir, in Britain the amount of subsidy is decided annually by a Tripartite meeting of National Farmers Union, Merchants and the Government. This system is called deficiency paying system. Even in U. S. A.. price support programme is practically administered by Commodity Credit corporation. Subsidies are generally based on the parities of prices of things the farmers sells and of the things the farmer buys. In this, it is said that in India for the first 9 years of planning Rs. 900 crores are spent and on an average it comes to Rs. 100 crores and it is said that there are hundred million farmers and the Government would be spending Rs. 10 on each farmer annually. So, Sir, according to American economists, the two major factors are responsible for the embarrassing surplus of food production though only 8 per cent of the American Popnlation are doing agriculture. Firstly, research, teaching and expansion activities of the Agricultural Colleges and secondly the motivating force of profit in the conduct of American agricultural business. Profit is a very catalyst of progress and even research draws support from the idea that it will help somebody, somehow and somewhere to derive the practical value. Therefore, profit and research are complimentary. Keeping these two objectives in view, how far it has been made possible to make agriculture a profitable proposition in India is the question. It is this profit motive which is very important to give a sufficient incentive, a sufficient support price and this sufficient progress in that regard. The present rate structure has to be examined from this point of view. Government has given Rs. 45 per quintal—it is the maximum price—and a bonus of Rs. 5 has been declared, *i.e.*, on every quintal of paddy a farmer will get Rs. 50. The paddy that is purchased from the farmer at the rate of Rs. 50 is to be sold at Rs. 97 ultimately to the consumer. The immediate question that one would ask is, whether the price offered to the farmer is sufficient, a supporting price or whether the price is a sufficient incentive to grow more so that the farmer does not devote his attention for growing cash crops ? I submit that the price of Rs. 50 offered is not very encouraging, and the administrative charges of Rs. 4 as pointed out by Sri G. V. Gowda, be given to the farmer instead of the Government taking this, so that the farmer will get Rs. 54 or Rs. 55 for every quintal of paddy. It is something inevitable. Under the present pattern,

we have got the levy system and after paying the levy, the available surplus can be sold in the open market at whatever price he likes by the farmer. When the farmer knows that he is getting a better price in the open market, he will be reluctant to part with the levy. Therefore, the Government should think of subsidising agriculture and also give a proper price to the farmer. The World Bank has given its opinion in "Fifteen Years of Democratic Planning" by Sri S. Kesava Iyengar, regarding monopoly procurement that the Government should not indulge in price control and if there is price control it had given bad repercussions. I shall read a paragraph with your kind permission, Sir.

> "According to the Bank, the measures to keep the prices of essential commodities depressed through administrative action have disturbed the growth of the Indian economy. So long as India adhered to its present pricing system in respect of these commodities, its growth will remain stunted. The removal of unnecessary curbs and controls on the prices of essential commodities will be doubly beneficial. It will, on the one hand, act as an anti-inflationary measure, and, on the other, help remove the sectoral imbalance in the country's economy. The rise in the prices of the essential commodities will be anti-flationary in nature. This has been the experience the world over because it reduces the capacity to buy, thereby 'increasing' the availability of goods in the market. The free play of demand and supply will help remove the sectoral and inter-sectoral imbalance in the Indian economy. The Bank has, in this connection, specially referred to the food grain shortage. Because of the Government's price support and buffer stock policy, grain prices have risen only 'marginally', while prices of the cash crops have been revised up-wards periodically during the 13 years of planning. This has resulted in a large-scale shift to cash crops thus accentuating the Food situation. It has also substantially reduced the capacity of the peasant to reinvest in land".

Therefore, the Government would take note of this guiding principle pointed out by the World Bank, which is stated in relation to the Central Government, but true in respect of the State also.

Thank you.

†ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಸ್ವಾಮಿ ; ಆಹಾರದ ವಿಷಯದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬೇಕೆಂದು ಬಯಸುತ್ತೇನೆ. ನಮಗೆ ಸ್ವರಾಜ್ಯ ಸಿಕ್ಕಿ 18 ವರ್ಷಗಳು ಕಳೆದು ಹೋದರೂ ನಮ್ಮ ಭಾರತ ದೇಶದ ಜನ ಹಿಡಿ ಅನ್ನಕ್ಕಾಗಿ ಪರದೇಶಗಳಲ್ಲಿ ಬಿಕ್ಷೆ ಬೇಡುವ ಪರಿಸ್ಥಿತಿಗೆ ಬಂದಿದೆ. ನಮ್ಮಲ್ಲಿ ಯೋಜನೆಗಳ ಮೇಲೆ ಯೋಜನೆಗಳು ಬಂದು, ಪಂಚಾಯಿತಿ ಸದಸ್ಯರಿಂದ ಹಿಡಿದು ಪಾರ್ಲಿಮೆಂಟ್ ಸದಸ್ಯರ ತನಕ ಪಂಚವಾರ್ಷಿಕ ಯೋಜನೆಗಳ ವಿಷಯ ಮಾತನಾಡುವಾಗ ಪಂಚಪ್ರಾಣದೊಂದಿಗೆ ಮಾತನಾಡಿದರೂ ಕೂಡ ನಮ್ಮ ಆಹಾರ ಉತ್ಪನ್ನ ಅವರ ಭಾಷಣದಲ್ಲಿಷ್ಟೇ ಮುಗಿದಿದೆಯಲ್ಲದೆ ಈ ತನಕ ಏನೇನೂ ಪ್ರಯೋಜನವಾದಂತೆ ಕಾಣುವುದಿಲ್ಲ.

ನಮ್ಮ ದೇಶ ಸ್ವರಾಜ್ಯವನ್ನು ಹೊಂದುವ ಹೊತ್ತಿಗೇ ಎರಡನೆಯ ಮಹಾ ಯುದ್ಧದಲ್ಲಿ ನುಚ್ಚು ನೂರಾದ ಜಪಾನ್ ದೇಶ ಯುದ್ಧ ಕಳೆದ ನಂತರ ನೂರಕ್ಕೆ 25 ಭಾಗದಷ್ಟು ಆಹಾರ ಧಾನ್ಯಗಳನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿತ್ತು. ಅದು ಇಂದು 16-17 ವರ್ಷಗಳ ಅನಂತರ

(ಶ್ರೀ ಬಿ. ಭಾಸ್ಕರಶೆಟ್ಟಿ)

ಬಹು ಹೆಚ್ಚು ಧಾನ್ಯವನ್ನು ಪರದೇಶಗಳಿಗೆ ಕಳುಹಿಸಿಕೊಡುತ್ತಿದೆ. ನಾವಾದರೂ ನಮ್ಮ ಆಹಾರ ಬೆಳೆಯುವ ವಿಷಯದಲ್ಲಿ ಖಾಲಿ ಯೋಜನೆಗಳಿಂದ, ಭಾಷಣಗಳಿಂದ, ಆಹಾರವನ್ನು ಬೆಳೆಸಿದ್ದೇವಲ್ಲದೆ ನಿಜವಾಗಿಯೂ ವಸ್ತು ಸ್ಥಿತಿ ನಾವು ಏನು ಹಣವನ್ನು ಖರ್ಚು ಮಾಡಿದ್ದೇವೆಯೋ, ಅದಕ್ಕೆ ಪ್ರತಿಕೂಲ ವಾಗಿದೆ.

ಸ್ವಾಮಿ, ಈಗ ಆಹಾರ ಧಾನ್ಯವನ್ನು ಹೆಚ್ಚು ಬೆಳೆಸುವುದರಲ್ಲಿ ನಾವಾದರೂ ರೈತರಿಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿಲ್ಲ ಎಂದು, ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ನಮ್ಮ ದೇಶದಲ್ಲಿ ಅಧಿಕ ಆಹಾರ ಬೆಳೆಯಬೇಕಾದರೆ ಸಾಕಷ್ಟು ಲಾಭದಾಯಕವಾದ ಉದ್ಯೋಗವನ್ನು ಮಾಡುತ್ತಿದ್ದೇವೆ ಎಂದು ರೈತರ ಮನಸ್ಸಿಗೆ ಹೋಗಬೇಕು. ನಮ್ಮ ದೇಶದಲ್ಲಿ ಈಗ ಅತಿ ದೊಡ್ಡ ಉತ್ಪಾದನಾ ಶಕ್ತಿ ಎಂದರೆ, ಆಹಾರ ಉತ್ಪಾದನಾ ಶಕ್ತಿ. ನಮ್ಮ ದೇಶ ವರ್ಷ ಒಂದಕ್ಕೆ ಮೂರು ಸಾವಿರ ಕೋಟಿ ರೂಪಾಯಿ ಉತ್ಪಾದನಾ ಶಕ್ತಿಯನ್ನು ಪಡೆದಿದೆ ಮಾತ್ರವಲ್ಲದೆ ನಮ್ಮ ದೇಶದಲ್ಲಿ ನೂರಕ್ಕೆ 75 ಭಾಗ ಜನರು ಹೊಲಗಳಲ್ಲಿ ದುಡಿಯುತ್ತಿದ್ದಾರೆ. ಹೀಗಿದ್ದರೂ ನಮ್ಮ ಆಹಾರ ಪರಿಸ್ಥಿತಿ ದಿನೇ ದಿನೇ ಕೆಡುತ್ತಿದೆ. ನನಗೆ ಒಂದು ವಿಷಯ ನೆನಪಿಗೆ ಬರುತ್ತದೆ, 1965ನೇ ಆಗಸ್ಟ್ ತಿಂಗಳಿನಲ್ಲಿ ಇಂಗ್ಲೆಂಡ್ ದೇಶದ 'ಡೈಲಿ ಮೇಲ್'' ಪತ್ರಿಕೆ ತನ್ನ ಅಗ್ರ ಲೇಖನದಲ್ಲಿ ಒಂದು ವಿಷಯವನ್ನು ಬರೆದಿದೆ. 1964-65ರಲ್ಲಿ ಹಿಂದೂದೇಶದಲ್ಲಿ ವಿಪುಲವಾದ ಬೆಳೆ ಬಂದಿದ್ದರೂ ಕೂಡ ಅಸಮರ್ಪಕವಾದ ವಿತರಣೆಯಿಂದ, ಅಧಿಕ ಲಾಭಕೋರತನದಿಂದ, ಆಹಾರಧಾನ್ಯ ಅಲ್ಲಿನ ಜನರಿಗೆ ಸರಿಯಾಗಿ ದೊರಕುತ್ತಿಲ್ಲ, ಅಲ್ಲಿನ ಬಡವರಿಗೆ ಆಹಾರ ಧಾನ್ಯ ಸಿಕ್ಕುತ್ತಿಲ್ಲ ಎಂದು ಬರೆದು ಆ ಮೇಲೆ ಎಲ್ಲ ದೇಶಗಳೂ ಕೂಡ ಹಿಂದೂ ದೇಶಕ್ಕೆ ಆಹಾರ ಧಾನ್ಯಗಳನ್ನು ಕಳುಹಿಸಿಕೊಡಬೇಕು ಎಂದು ಒಂದು ಲೇಖನವನ್ನು ಬರೆದಿದೆ. ಇದನ್ನು ನೋಡಿದರೆ ನಾವು ಮತ್ತು ನಮ್ಮ ಆಡಳಿತಗಾರರು ನಾಚಿಕೆ ಪಟ್ಟುಕೊಳ್ಳಬೇಕಾಗಿದೆ. ಇಡೀ ಭೂಲೋಕದವರು, ಫೋಪರಾಧಿಯಾಗಿ ಎಲ್ಲರೂ ಹಿಂದೂ ದೇಶದಲ್ಲಿ ಹೊಟ್ಟೆಗೆ ಇಲ್ಲದೆ ಜನ ಸಾಯುತ್ತಾರೆ, ಅವರಿಗೆ ಆಹಾರ ಧಾನ್ಯಗಳನ್ನು ಕಳುಹಿಸಬೇಕೆಂದು ಹೇಳುವ ಪರಿಸ್ಥಿತಿ ಇರುವಾಗ, 18 ವರ್ಷಗಳಲ್ಲಿ ನೀವು ಮಾಡಿದಂಥ ಆಡಳಿತ ಶಿಥಿಲವಾಗಿರುವುದರಿಂದ ತಾವು ರಾಜೀನಾಮೆಯನ್ನು ಕೊಡಬೇಕೆಂದು ಒತ್ತಿ ಹೇಳುತ್ತಿದ್ದೇನೆ. ಇದು ನಿಜವಾಗಿಯೂ ನಿಮಗೆ ಒಂದು ನಾಚಿಕೆಯಾಗಬೇಕಾದ ಪ್ರಸಂಗ. ಆಹಾರ ಧಾನ್ಯವನ್ನು ಬೆಳೆಯುವುದರಲ್ಲಿ ರೈತರಿಗೆ ಕೊಟ್ಟ ಪ್ರೋತ್ಸಾಹವನ್ನು ಗಮನಿಸಿದರೆ ಮಾನ್ಯ ಆಹಾರ ಮಂತ್ರಿಗಳು ಲೆವಿಗಾಗಿ ರೈತರಿಗೆ ಕೊಡುವ ಬೆಲೆಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ನಮ್ಮ ಸರ್ಕಾರಕ್ಕು ಮತ್ತು ಮಹಾರಾಷ್ಟ್ರ ಸರ್ಕಾರಕ್ಕೂ ಹೋಲಿಸಿದರೆ ರೈತರಿಗೆ ಕೊಡುವ ಬೆಲೆಗಳಲ್ಲಿ 15 ರೂಪಾಯಿ ವ್ಯತ್ಯಾಸವಿದೆ. ಅಂತೂ ಈ ಆಹಾರ ದವಸ ಧಾನ್ಯಗಳಿಗೆ ಬೆಲೆಗಳನ್ನು ಕೊಡುವಾಗ, ಲೆವಿಯನ್ನು ವಸೂಲು ಮಾಡುವಾಗ, ಬೆಂಗಳೂರಿನಲ್ಲಿ ಆಫೀಸಿನಲ್ಲಿ ಯಾರೋ ಕುಳಿತುಕೊಂಡು, ಅವರಿಗೆ ವ್ಯವಸಾಯದ ಜ್ಞಾನವಿಲ್ಲದೆ ಯಾವ ತರಹ ಬೀಜ ಬೆಳೆಯುತ್ತಾರೆ ಎನ್ನುವ ಜ್ಞಾನ ಕೂಡ ಇಲ್ಲದೆ-ಲೆವಿ ಮಾಡುವ ಧಾನ್ಯದ ಕ್ರಯವನ್ನು ನಿಗದಿ ಮಾಡಿದ ಹಾಗೆ ಇದೆ. ಇದರಿಂದಾಗಿ ನಮ್ಮ ದೇಶದ ರೈತರಿಗೆ ತುಂಬ ಅನಾನುಕೂಲವಾಗಿದೆ; ಮಾತ್ರವಲ್ಲದೆ ಆಹಾರಧಾನ್ಯ ಹೆಚ್ಚಾಗಿ ಬೆಳೆಸುವ ಇಚ್ಛೆ ಪೂರ್ತಿಯಾಗಿ ಇರವೆ ಜಮೀನಿದ್ದವರಿಗೆ ಕೂಡ ಮನಸ್ಸು ಹಿಂದಕ್ಕೆ ಹೋಗುತ್ತಿದೆ. ಮೊನ್ನೆ ಮಾತನಾಡುವಾಗ ಒಬ್ಬ ಮಂತ್ರಿಗಳು ಹೇಳಿದರು, ಈಗ ಆಹಾರ ಧಾನ್ಯಗಳ ಬೆಲೆ ಲಾಭದಾಯಕವಾಗಿದೆ, ಮೂರು ಕಟ್ಟೆಯಲ್ಲಿ ಅದರ ಬೆಲೆ ಹೆಚ್ಚಿದೆ ಎಂದು ಹೇಳಿದರು. ಈ ಜನರ ದಿನ ನಿತ್ಯದ ಬಳಕೆಗೆ ಬೇಕಾಗಿರುವ ಸಾಮಾನುಗಳಿಗೆ ಕೊಡುವ ಬೆಲೆಯನ್ನೂ ಅವನಿಗೆ ಬರುವ ಬೆಲೆಯನ್ನೂ ತುಲನೆ ಮಾಡಿ ನೋಡಿದರೆ ಒಂದು ವಿಷಯ ನಮಗೆ ಗೊತ್ತಾಗುತ್ತದೆ. ದಿನ ನಿತ್ಯದ ಸಾಮಾನುಗಳು ಮತ್ತು ವ್ಯವಸಾಯಕ್ಕೆ ಬೇಕಾಗುವ ಸಲಕರಣೆಗಳ ಬೆಲೆಗಳು ಕೆಲವು ವರ್ಷಗಳಿಂದ ಸ್ವಲ್ಪ ಸ್ವಲ್ಪವಾಗಿ ಏರಿ ಹೋಗಿದ್ದರೆ, ಆಹಾರದ ಬೆಲೆ ಎರಡು ಮೂರು ವರ್ಷಗಳಿಂದ ಮಾತ್ರ ಸ್ವಲ್ಪ ಏರಿದೆ. ಇದು ಲಾಭದಾಯಕವಲ್ಲ, ರೈತ ತನ್ನ ದುಡಿಮೆಯಿಂದ ನಿತ್ಯ ಜೀವನಕ್ಕೆ ಬೇಕಾದ ಸಾಮಾನುಗಳನ್ನು ಕೊಂಡುಕೊಂಡು ತನ್ನ ಜೀವನವನ್ನು ಸಾಗಿಸುವುದು ಎಂದರೆ ತಾನು ಬೆಳೆದ ಧಾನ್ಯಗಳಿಂದ ಲಾಭದಾಯಕವಾದ ಕ್ರಯ ಬರುವುದಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಒತ್ತಿ ಹೇಳುತ್ತೇನೆ. ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳಬೇಕೆಂದು ಬಯಸುತ್ತೇನೆ. ನಾವು ಸಾಧಾರಣವಾಗಿ 1952ನೇ ಇಸವಿಯಿಂದಲೂ ಅಮೇರಿಕಾ ದೇಶದಿಂದ 350 ಲಕ್ಷ ಟನ್ನುಗಳಷ್ಟು ಆಹಾರ ಸಾಮಗ್ರಿಗಳನ್ನು ಆಮದು ಮಾಡಿಕೊಂಡಿದ್ದೇವೆ. ಇದರಲ್ಲಿ ವರ್ಷ ಒಂದಕ್ಕೆ 60 ಕೋಟಿ ರೂಪಾಯಿಗಳ ವಿದೇಶೀ ವಿನಿಮಯವನ್ನು ನಾವು ಖರ್ಚು ಮಾಡಬೇಕಾಗಿದೆ. ಇದು ಭಾರತ ದೇಶಕ್ಕೆ ಒಂದು ದೊಡ್ಡ ಹೊರೆಯೆಂದು ತಿಳಿದು ಮಹಾತ್ಮ ಗಾಂಧೀಜಿಯವರು ಮೊದಲನೆಯ ಪಾಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ನಮ್ಮ ದೇಶ ಆಹಾರದಲ್ಲಿ ಸ್ವಾವಲಂಬನೆ

ಪಡೆಯಬೇಕೆಂದು ಹೇಳಿದ್ದರು. ನಮ್ಮ ದೇಶ ಕೃಷಿ ಪ್ರಧಾನವಾದ ದೇಶ. ಬೇರೆ ಎಲ್ಲಿಯೂ ಇಷ್ಟು ಕೃಷಿ ಮಾಡುತ್ತಿಲ್ಲ. ಅಂತಹ ಜನತೆ ಇಂದು ಮಣ್ಣು ತಿನ್ನುವ ಒಂದು ನಿಕೃಷ್ಟ ಸ್ಥಿತಿಗೆ ಬಂದಿದೆ ಎಂದು ಹೇಳುವುದಕ್ಕೆ ನನಗೆ ಶೋಚನೀಯವಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ಇಂಗ್ಲಿಷರ ಆಡಳಿತದಲ್ಲಿ ಬಂಗಾಳದಲ್ಲಿ ಭೀಕರ ಕ್ಷಾಮ ಬಂದಾಗ್ಗೆ ಸರೋಜಿನಿ ನಾಯ್ಡು ಅವರು ಒಂದು ಮಾತನ್ನು ಹೇಳಿದರು. ಹಿಂದೂದೇಶದ ಜನತೆ ಈ ಒಂದು ಭೀಕರ ಅವಸ್ಥೆಯನ್ನು ನೋಡಿ ಕಣ್ಣು ಮುಚ್ಚಿಕೊಂಡು ಇದ್ದಾರೆ, ಹಿಂದೂದೇಶದ ಜನತೆಗೆ ಸಹನೆ ಎಷ್ಟು ಇದೆ ಎಂದು ಹೇಳಿದರು. ಆದ್ದರಿಂದ ಇವರು ಆಹಾರದ ವಿಷಯದಲ್ಲಿ ಒಂದು ತಕ್ಕ ಕ್ರಮವನ್ನು ಕೈಗೊಳ್ಳದೇ ಇದ್ದರೆ ಜನತೆ ಸಹನೆ ಮೀರಿ ಹೋಗುತ್ತದೆ. ಈ ವಿಚಾರವನ್ನೂ ಸಹ ಒಂದು ಕಾಲದಲ್ಲಿ ನಮ್ಮ ಸಂಸ್ಥಾನವನ್ನು ಅಲ್ಲಾಡಿಸಿರುವ ವಿಚಾರವನ್ನು ನಾನು ಚರಿತ್ರೆಯಲ್ಲಿ ಹಿಂದೆ ಓದಿದ್ದೇನೆ. ಹೊಟ್ಟೆಗಿಲ್ಲದೆ ಜನತೆ ಇವರ ಮೇಲೆ ನುಗ್ಗಿ ಮುಂದೆ ಈ ಸರ್ಕಾರವನ್ನು ಸುಟ್ಟು ಹಾಕಿಯಾರು ಎಂದು ನಾನು ಹೇಳುತ್ತೇನೆ. ಆದ್ದರಿಂದ ಹೆಚ್ಚು ಹೆಚ್ಚಾಗಿ ಧಾನ್ಯಗಳನ್ನು ಬೆಳೆಸುವ ಹಾಗೆ ವ್ಯವಸ್ಥೆ ಮಾಡಿ ಹಳ್ಳಿಗಾಡುಗಳಲ್ಲಿರುವ ಜನತೆಗೆ ಹೆಚ್ಚು ಆಹಾರ ಧಾನ್ಯಗಳು ದೊರಕುವಂತೆ ಸಂಯಾದ ವ್ಯವಸ್ಥೆಯನ್ನು ಸರ್ಕಾರದವರು ಈ ಕೂಡಲೇ ಮಾಡಬೇಕು. ಹಳ್ಳಿಗಳಿಗೆ ಅಹಾರಧಾನ್ಯಗಳನ್ನು ಕೊಡುವುದರಲ್ಲಿ ಸರ್ಕಾರಕ್ಕೆ ಮಲ ತಾಯಿ ಧೋರಣೆ ಇದ್ದ ಹಾಗೆ ಕಾಣುತ್ತದೆ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಕಡ 75ರಷ್ಟು ಮಂದಿ ಚಾಲುಗೇಣೀದಾರರು ಹೊಲಕ್ಕೆ ಹೋಗಿ ಅವರು ಲೆವಿ ಮಾಡಿದಂತಹ ಬತ್ತದ ಅಕ್ಕಿಯನ್ನು ಅನೇಕರಿಗೆ ಗೇಣಿ ಅಥವಾ ಬಾಡಿಗೆ ರೂಪದಲ್ಲಿ ಕೊಡುತ್ತಿದ್ದಾರೆ. ಅದನ್ನು ಏಪ್ರಿಲ್ ತಿಂಗಳಲ್ಲಿ ಅವರು ಊಟ ಮಾಡಬೇಕಾಗಿದೆ. ಉಣಿಸುವನೇ ಉಣದ ಪರಿಸ್ಥಿತಿಯಲ್ಲಿದ್ದುಕೊಂಡು ಊಟಕ್ಕೇ ಗತಿ ಇಲ್ಲದೆ ಇದ್ದಾನೆ ಎಂದು ಹೇಳುವ ಪರಿಸ್ಥಿತಿ ಈಗ ಒದಗಿದೆ. ಆದ್ದರಿಂದಲೇ ಹಳ್ಳಿಗಳಲ್ಲಿ ಸಾಧಾರಣವಾಗಿ ಶೇಕಡ 25ರಷ್ಟು ಮಂದಿ ಹೊಲದ ದುಡಿಮೆಯಿಂದ ಇಳಿದಿದ್ದಾರೆ. ಅವರು ಈಗ ಮೀನು ವ್ಯವಸಾಯ ಮಾಡುವವ ರಾಗಿದ್ದಾರೆ. ಇನ್ನುಳಿದ ಮಂದಿ ಇತರ ಕೆಲಸಗಳನ್ನು ಮಾಡಿಕೊಂಡು ಇದ್ದಾರೆ. ಅಂತಹವರಿಗಾ ದರೂ ಸರಿಯಾಗಿ ಆಹಾರವನ್ನು ಕೊಡದೇ ಹೋದರೆ ಮುಂದೆ ಹಳ್ಳಿಗಳ ಪರಿಸ್ಥಿತಿ ಬಹಳ ಕಠಿಣ ವಾಗಬಹುದು. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಅದು ಒಂದು ಮಿಗಿತ ಜಿಲ್ಲೆ. ಆಹಾರಧಾನ್ಯಗಳು ಬಹಳ ಹೆಚ್ಚಾಗಿದೆ. ಇದು ಮಿಗಿತ ಜಿಲ್ಲೆಯಾದ್ದರಿಂದಲೇ ಅಲ್ಲಿ ಬೆಳೆದಂತಹ ಆಹಾರಧಾನ್ಯಗಳನ್ನು ಬೇರೆ ಬೇರೆ ಪ್ರಾಂತಗಳಿಗೆ ತೆಗೆದುಕೊಂಡು ಹೋಗಿ ಈಗ ಅಲ್ಲಿ ಬೆಳೆಯತಕ್ಕ ಆಹಾರ ಧಾನ್ಯಗಳು ಅಲ್ಲಿನ ಜನರಿಗೇ ಸಾಕಾಗುವುದಿಲ್ಲ. 1964—65ರಲ್ಲಿ ವಿಪುಲವಾಗಿ ಮಳೆ ಬಂದ ಕಾರಣ ಹೋದ ವರ್ಷ ಮಳೆಗಾಲದಲ್ಲಿ ಆಹಾರ ಮಟ್ಟಿಗೆ ಬಹಳ ಕಷ್ಟವಾಯಿತು.

ಶ್ರೀ ಎ. ಪಿ. ಅಪ್ಪಣ್ಣ (ವಿರಾಜಪೇಟೆ).—ಕೇರಳಕ್ಕೆ ಹೋಗುತ್ತಿತ್ತು.

ಶ್ರೀ ಬಿ. ಭಾಸ್ಕರಶೆಟ್ಟಿ.—ಕೇರಳಕ್ಕೆ ಹೋಗುತ್ತಿದ್ದುದನ್ನು ತಡೆಯಬೇಕಾಗಿತ್ತು. ಅದನ್ನು ತಡೆಯದೇ ಇದ್ದ ಮೇಲೆ ಮಂತ್ರಿಗಳು, ಸದಸ್ಯರುಗಳು ಏಕೆ ಈ ಸರ್ಕಾರದಲ್ಲಿ ಕೂತಿದ್ದಾರೆ? ತಡೆ ಯುವುದಕ್ಕೆ ಶಕ್ತಿ ಇಲ್ಲದಿದ್ದರೆ ರಾಜೀನಾಮೆ ಕೊಡಬೇಕಾಗಿತ್ತು. ಹೋದ ವರ್ಷ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಬೆಳೆ ಬಂದಿತ್ತು. ಈ ಸಾರಿ ನಮಗೂ ಮಳೆ ಬಾರದೇ ಇರುವುದರಿಂದ ಒಂದನೇ ಬೆಳೆ, ಎರಡನೆ ಬೆಳೆಯಲ್ಲಿ ನಮಗೆ ಕಡಮೆ ಉತ್ಪನ್ನವಾಗಿದೆ. ಲೆವಿ ಕೊಡುವುದರಲ್ಲಿ 19 ಜಿಲ್ಲೆಗಳ ಪೈಕಿ ದಕ್ಷಿಣ ಕನ್ನಡ ಜಿಲ್ಲೆಯವರು ಶೇಕಡ 93.3ರಷ್ಟು ಲೆವಿ ಕೊಟ್ಟಿದ್ದಾರೆ. ಬಾಕಿ ಎಲ್ಲಾ ಜಿಲ್ಲೆಗ ಳಲ್ಲಿ ಶೇಕಡ 50ರಷ್ಟಕ್ಕಿಂತಲೂ ಹೆಚ್ಚಾಗಿ ಕೊಟ್ಟಿಲ್ಲ. ಆದರೆ ಮಾನ್ಯ ಮಂತ್ರಿಗಳು ಒದಗಿಸಿರತಕ್ಕ ಅಂಕಿ ಅಂಶಗಳ ಲೆಕ್ಕದಲ್ಲಿ ಏನು ಹೇಳುತ್ತಾರೆಂದರೆ, ಎಲ್ಲಾ ಬೆಳೆಯನ್ನು ಹೆಚ್ಚಿಗೆ ಕೊಡುವವರು ದಕ್ಷಿಣ ಕನ್ನಡ ಜಿಲ್ಲೆಯವರು ಎಂದು ಹೇಳುತ್ತಾರೆ. ಆದರೆ ಅನೌಪಚಾರಿಕ ಪಡಿತರ ಪದ್ಧತಿ ಜಾರಿಗೆ ಬಂದಾಗ ತಲಾ ಒಂದಕ್ಕೆ ತಿಂಗಳಿಗೆ 3 ಕೆ. ಜಿ. ಗೋಧಿ ಕೊಡುತ್ತೇವೆಂದು ಹೇಳಿದರು. ಯಾರು ಬೆಳೆಯುತ್ತಾರೋ, ಯಾರು ಅಕ್ಕಿಯನ್ನು ಉಪಯೋಗ ಮಾಡುತ್ತಾರೋ ಅಂತಹವರಿಗೆ ಕಡಿಮೆ ಗೋಧಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ನಮ್ಮಲ್ಲಿ ಬೆಳೆದ ಎಲ್ಲಾ ಅಕ್ಕಿಯನ್ನೂ ತೆಗೆದು ಕೊಂಡು ಮಣ್ಣು ತಿನ್ನಿ ಎಂದು ಹೇಳುತ್ತಿದ್ದಾರೆ. ಇದಕ್ಕೆ ನಾವು ಖಂಡಿತವಾಗಿ ಒಪ್ಪುವುದಿಲ್ಲ. ಯಾವ ಕಾರಣದಿಂದಲೂ ದಕ್ಷಿಣ ಕನ್ನಡ ಜಿಲ್ಲೆಯ ಅಕ್ಕಿಯನ್ನು ಬೇರೆ ಕಡೆಗೆ ಸಾಗಿಸಕೂಡದು. ನಾವು ಹಾಕುವುದು ಸ್ಪೆಷಲ್ ಬತ್ತ. ಬಾಯಿಲ್ಡ್ ರೈಸ್‌ಗೆ ಉತ್ತಮವಾದ್ದು. ಬೇರೆ ಬತ್ತವನ್ನು ನಾವು ಬಾಯಿಲ್ಡ್ ರೈಸಿಗೆ ಹಾಕುವುದಿಲ್ಲ. ಆದ್ದರಿಂದ ಆ ಬತ್ತವನ್ನು ಬೇರೆ ಎಲ್ಲಿಗೂ ಈ ಸರ್ಕಾರದವರು ಸಾಗಿಸಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Sri Bhaskar Shetty, may please hear me. An adjournment motion, was given notice of by Sri Gopala Gowda, but I

(MR. SPEAKER)

don't find his name here. This was got advanced at the instance of the Member.

† ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೇ, ಈ ಸರ್ಕಾರ ನಮ್ಮ ದೇಶದ ಆಹಾರ ಪರಿಸ್ಥಿತಿಯ ಬಗ್ಗೆ ಏನು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆಯೋ ಅದನ್ನು ವಿರೋಧಿಸುತ್ತೇನೆ. ಇವರು ಯಾವ ಒಂದು ಕ್ರಮವನ್ನೂ ಸರಿಯಾಗಿ ತೆಗೆದುಕೊಳ್ಳದೆ ದೇಶದಲ್ಲಿ ಹಾಹಾಕಾರವನ್ನೂ ಮತ್ತು ಅವ್ಯವಸ್ಥೆಯನ್ನುಂಟುಮಾಡಿರತಕ್ಕಾಂಥಾದ್ದು ಹಾಗೂ ಕೇರಳ ಮತ್ತು ಬಂಗಾಳ ಪ್ರಾಂತಗಳಿಗೆ ಮೈಸೂರು ದೇಶದ ಆಹಾರ ಪರಿಸ್ಥಿತಿಯು ಒಂದು ಆದರ್ಶವನ್ನು ಈ ಸರ್ಕಾರ ಕೊಡುತ್ತಿದೆ ಎಂಬ ಮಾತನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಏಕೆಂದರೆ, ಅತಿ ಮುಖ್ಯವಾಗಿ ಯಾವ ಸರ್ಕಾರವ್ವೇ ದೇಶವನ್ನಾಳಲಿ, ದೇಶದ ಜನತೆಗೆ ಸಾಕಷ್ಟು ಅನ್ನವನ್ನು ಕೊಡದೇ ಇರತಕ್ಕಂಥ ಸರ್ಕಾರ ಹಿಂದಿನ ಚರಿತ್ರೆಯಲ್ಲಿ ಎಲ್ಲಾದರೂ ಇತ್ತೇ ಎಂದು ನಾವು ನೋಡಿದರೆ ಅಂತಹ ಸರ್ಕಾರವಿದ್ದುದು ಎಲ್ಲೂ ಇಲ್ಲವೆಂಬುದು ಚೆನ್ನಾಗಿ ವ್ಯಕ್ತವಾಗುತ್ತದೆ. ಈ ಕಾಂಗ್ರೆಸ್ ಸರ್ಕಾರದ ವಿಚಿತ್ರ ನೀತಿಯು ಧೋರಣೆ ಅನ್ನವನ್ನೂ ಕೂಡ ಜನತೆಗೆ ಕೊಡದೆ ದೇಶದಲ್ಲಿ ಜನರನ್ನು ಸಾಯಿಸುತ್ತಾ ಇರತಕ್ಕಂಥ ನೀತಿಯನ್ನು ನಾನು ವಿರೋಧ ಮಾಡಬೇಕಾಗಿದೆ. ಈ ಕಾಂಗ್ರೆಸ್ ಸರ್ಕಾರ ಅಧಿಕಾರವನ್ನು ತೆಗೆದುಕೊಂಡ ಮೇಲೆ ಒಂದು ದೊಡ್ಡ ಸಮಸ್ಯೆಯನ್ನು ಈ ದೇಶದಲ್ಲಿ ತಂದಿರುವುದು ಅಂದರೆ ಅನ್ನದ ಅಭಾವ. ಯೋಜನೆಗಳಿಗಾಗಿ ಕೋಟಿಗಟ್ಟಲೆ ಸಾಲಗಳನ್ನು ಹಣದ ರೂಪದಲ್ಲಿ ತಂದು ಬೇಕಾದಷ್ಟು ತಿರುಗಿ ಹಣವನ್ನು ವಸೂಲು ಮಾಡಿ ಈ ಅನ್ನದ ಸಮಸ್ಯೆಯನ್ನು ಇವರು ಬಗೆಹರಿಸದೇ ಇರತಕ್ಕದ್ದೇನು ? ಇದನ್ನು ಸಮರ್ಥನೆ ಮಾಡಿದಂಥ ಕಾಂಗ್ರೆಸ್ ಸದಸ್ಯರು ಇಲ್ಲಿ ಬಹುಶಃ ಕಾಂಗ್ರೆಸ್ಸಿನ ಟಿಕೆಟ್ಟಿನ ಆಶೆಯಿಂದ ಈ ಸರ್ಕಾರದ ನೀತಿಯನ್ನು ಸಮರ್ಥನೆಮಾಡುವ ಹಾಗೆ ಮಾತನಾಡುತ್ತಿದ್ದಾರೆಯೇ ಹೊರತು ಹೊರಗಡೆಯ ವಿಷಯದಲ್ಲಿ ಅವರ ಕ್ಷೇತ್ರದಲ್ಲಿ ಹಾಗೂ ತಾಲ್ಲೂಕುಗಳಲ್ಲಿ ಅನ್ನವಿಲ್ಲದೆ ಎಷ್ಟೆಷ್ಟು ಜನರು ಸಾಯುತ್ತಿದ್ದಾರೆಂಬ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತಿಲ್ಲವೆಂದು ಹೇಳಿದರೆ ಅನೇಕ ಮಾನ್ಯ ಸದಸ್ಯರು ಒಪ್ಪುತ್ತಾರೆಂದು ನಾನು ತಿಳಿದಿದ್ದೇನೆ. ಇದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಸರ್ಕಾರದ ಆಹಾರ ನೀತಿ ಮೈಸೂರು ದೇಶದಲ್ಲಿ ಬಹಳ ಕಠಿಣವಾದಂಥ ಪರಿಸ್ಥಿತಿಯನ್ನುಂಟು ಮಾಡುತ್ತಿದೆ. ಅದನ್ನು ಈಗ ಅನುಭವಿಸುವವರಿಗೆ ಚೆನ್ನಾಗಿ ಗೊತ್ತಾಗಿದೆ. ಬೇರೆ ದೇಶಗಳಲ್ಲಿ ಈ ಬಗ್ಗೆ ಮಾಡಿದಂಥ ಕ್ರಾಂತಿಕಾರಕವಾದ ಕ್ರಮಗಳನ್ನು ಇವರೂ ಮಾಡಬೇಕೆಂಬ ಉದ್ದೇಶದಿಂದ ಮೈಸೂರು ದೇಶದ ಜನಗಳಲ್ಲಿಯೂ ಕ್ರಾಂತಿಯ ಕಿಡಿಯನ್ನು ಏಳಿಸುತ್ತಿದ್ದಾರೆಂದು ಹೇಳಿದರೆ ಆ ಮಾತು ತಪ್ಪಾಗಲಾರದು. ಏಕೆಂದರೆ, ಕೇರಳದಲ್ಲಿ ಇದರಂಥ ಒಂದು ದೊಡ್ಡ ಕ್ರಾಂತಿಮಾಡಿ ಪ್ರಾಣಗಳನ್ನು ನೀಡಿದರು. ಅನ್ನಕ್ಕೋಸ್ಕರವಾಗಿ ಆ ಸರ್ಕಾರವನ್ನು ಬೆಂಬಲಿಸುವಂತಹ ಕಾಂಗ್ರೆಸ್ಸಿನವರೂ ವಿರೋಧ ಪಕ್ಷದವರೂ, ಇತರ ಪಕ್ಷದವರೆಲ್ಲರೂ ಸೇರಿ ಒಕ್ಕೂಟದಿಂದ ಒಂದು ದೊಡ್ಡ ಕ್ರಾಂತಿಯನ್ನು ಮಾಡಿದರು. ಆಗ ಮಹಾ ಪ್ರಧಾನಿಯವರಾದ ಶ್ರೀಮತಿ ಇಂದಿರಾ ಗಾಂಧಿಯವರು ಅಲ್ಲಿಗೆ ಮೂಟೆಗಟ್ಟಲೆ ಅಕ್ಕಿಯನ್ನೂ ಮತ್ತು ಗೋಧಿಯನ್ನೂ ಕೊಡುತ್ತೇವೆ, ಅನ್ನಕ್ಕೋಸ್ಕರವಾಗಿ ಕ್ರಾಂತಿ ಮಾಡಕೂಡದು ಎಂದು ಹೇಳಿದರು. ಆಗ ಕ್ರಾಂತಿ ಸ್ವಲ್ಪಮಟ್ಟಿಗೆ ತಹಬಂದಿಗೆ ಬಂತು.

ಆದರೆ ಈಗ ಮೈಸೂರು ದೇಶದಲ್ಲಿ ಜನತೆಗೆ ಸಾಕಷ್ಟು ಅನ್ನ ಕೊಡದೆ ಈ ದೇಶದಲ್ಲಿ ಬ್ಲ್ಯಾಕ್ ಮಾರ್ಕೆಟ್, ಲಂಚಕೋರತನ ಮತ್ತು ಕಳ್ಳಸಾಗಾಣಿಕೆ ಮಾಡತಕ್ಕ ಸಹಕಾರ ಸಂಘಗಳನ್ನು ಇವರು ಏರ್ಪಡಿಸಿ ಇಲ್ಲಿ ಅನ್ನಕ್ಕೇ ಅಭಾವವನ್ನುಂಟುಮಾಡಿ ಒಂದು ಕ್ರಾಂತಿ ಮಾಡಬೇಕೆಂಬ ಈ ಕಾಂಗ್ರೆಸ್ಸಿನ ನೀತಿಯಾದರೂ ಏನು ಎಂಬುದಾಗಿ ನಾನು ಪ್ರಶ್ನೆಮಾಡುತ್ತೇನೆ. ಲೋಹಿಯಾ ಅವರು ಒಂದು ಕಡೆ ಲೋಕಸಭೆಯಲ್ಲಿ ಈ ದೇಶದಲ್ಲಿ ಅನ್ನವಿಲ್ಲದೆ ಜನ ಸಾಯುತ್ತಿರುವಾಗ ಈ ಪ್ರಜಾಪ್ರಭುತ್ವದ ರೀತಿ ನೀತಿಯ ಪ್ರಕಾರ ಜನತೆ ಎಲ್ಲಾ ಕಾರ್ಯ ಕ್ರಮಗಳನ್ನು ತೆಗೆದುಕೊಂಡಾಗ್ಯೂ

5-30 P.M.

ಈ ಕಾಂಗ್ರೆಸ್ ಸರ್ಕಾರ ದೇಶದಲ್ಲಿ ಜನತೆ ರಿವೋಲ್ಟ್ ಆಗತಕ್ಕಂಥ ನೀತಿಯನ್ನು ಪ್ರತಿಪಾದನೆ ಮಾಡುತ್ತಾ ಹೋದರೆ ದೇಶದಲ್ಲಿ ಬಹುಶಃ ಶಾಂತಿ ಚಳುವಳಿ ಆಗತಕ್ಕಂಥಾದ್ದು ಹೋಗಿ ಕ್ರಾಂತಿ ಆಗತಕ್ಕದ್ದು ಆಗಬಹುದು ಎಂದು ಹೇಳಿದ್ದಾರೆ. ಅದಕ್ಕೆ ನಿದರ್ಶನ ಕಲ್ಕತ್ತಾದಲ್ಲಿ ಆದಂಥಾದ್ದು, ಪಂಜಾಬಿನಲ್ಲಿ ಆದಂಥಾದ್ದು, ಕೇರಳದಲ್ಲಿ ಆದಂಥಾದ್ದು ಸಾಕು. ಇದನ್ನ ನೀವು ಮೂಲೋತ್ಪಾಟನೆ ಮಾಡದೇ ಹೋದರೆ ನೆಮ್ಮದಿ ಸಿಕ್ಕುವುದಿಲ್ಲ. ದೇಶದಲ್ಲಿ ನೀವು ಸರ್ಕಾರವನ್ನು ನಡೆಸುವುದಕ್ಕೆ ನಿಮಗೆ ಜನತೆಯ ಬೆಂಬಲವು ಸಿಕ್ಕುವುದಿಲ್ಲ. ನೀವು ಪ್ರಜಾಪ್ರಭುತ್ವಕ್ಕೆ ತಿಲಾಂಜಲಿಯನ್ನು ಕೊಡಬೇಕಾಗು

ತ್ತದೆ. ಬೆಂಗಳೂರು ನಗರದ ಕಾರ್ಪೊರೇಷನ್ ಏರಿಯಾದಲ್ಲಿ ಆಹಾರವನ್ನು ಜನಗಳಿಗೆ ವಿತರಣೆ ಮಾಡತಕ್ಕ ವಿಷಯದಲ್ಲಿ ಸರ್ಕಾರದವರು ಯಾವ ಒಂದು ನೀತಿಯನ್ನು ಅನುಸರಿಸುತ್ತಿದ್ದಾರೆ ಎನ್ನುವುದನ್ನು ನೋಡಿದರೆ ಇದು ಬಹಳ ವಿಚಿತ್ರವಾಗಿದೆ. ಸರ್ಕಾರದ ಆಶ್ರಯವನ್ನು ಮಾಡತಕ್ಕಂಥ ಕಾಂಗ್ರೆಸ್ ಜನರಿಗೆ ಆಹಾರವನ್ನು ವಿತರಣೆ ಮಾಡುವುದಕ್ಕೆ ಲೈಸೆನ್ಸ್‌ಗಳನ್ನು ಕೊಟ್ಟಿದ್ದಾರೆ. ಆಹಾರವನ್ನು ವಿತರಣೆ ಮಾಡುವುದಕ್ಕೆ ಕೊಡುವುದರಲ್ಲಿಯೂ ಯಾವ ರೀತಿಯ ಒಂದು ರಾಜಕೀಯ ನಡೆಯುತ್ತಿದೆ ಎನ್ನುವ ವಿಷಯವನ್ನು ನಾನು ಸರ್ಕಾರದ ಗಮನಕ್ಕೆ ತರುತ್ತೇನೆ. ಆಹಾರ ಧಾನ್ಯದ ಹೋಲ್‌ಸೇಲ್ ವ್ಯಾಪಾರ ಮಾಡತಕ್ಕ ವರ್ತಕರು ಸರ್ಕಾರಕ್ಕೆ ಬೆಂಬಲ ಕೊಡುತ್ತಾರೆಂದು ಅವರಿಗೆ ಕಾಳಸಂತೆ ವ್ಯಾಪಾರ ಮಾಡುವುದಕ್ಕೆ ಸರ್ಕಾರದವರು ಲೈಸೆನ್ಸ್ ಕೊಡುತ್ತಿದ್ದಾರೆ. ಇದಕ್ಕೆ ನಿದರ್ಶನವನ್ನು ನಾನು ತಮಗೆ ಕೊಡಬೇಕಾದರೆ ಬೆಂಗಳೂರು ಸಿಟಿ ಕಾರ್ಪೋರೇಷನ್ ಏರಿಯಾದಲ್ಲಿ 10 ಜನ ವರ್ತಕರಿಗೆ ಆಹಾರ ಧಾನ್ಯದ ಹೋಲ್‌ಸೇಲ್ ವ್ಯಾಪಾರ ಮಾಡಲು ಸರ್ಕಾರದವರು ಲೈಸೆನ್ಸ್ ಕೊಟ್ಟಿದ್ದಾರೆ. ಇದರಲ್ಲಿ ಇನ್ನೊಂದು ವಿಚಿತ್ರವಾದ ಸಂಗತಿ ಏನೆಂದರೆ, ಯಾರು ವ್ಯಾಪಾರಸ್ಥರಲ್ಲವೋ, ಯಾರಿಗೆ ಆಹಾರ ಧಾನ್ಯವನ್ನು ಮಾರಾಟಮಾಡತಕ್ಕ ಅನುಭವ ಇಲ್ಲವೋ ಅಂಥವರಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಚುನಾವಣೆಗಳಲ್ಲಿ ಯಾರು ಕಾಂಗ್ರೆಸ್ಸಿನವರಿಗೆ ಬೆಂಬಲವನ್ನ ಕೊಟ್ಟರು ಯಾರು ಬೆಂಬಲವನ್ನು ಕೊಡಲಿಲ್ಲ ಎನ್ನುವ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು 10 ಜನಗಳಿಗೆ ಸಗಟು ವ್ಯಾಪಾರದ ಲೈಸೆನ್ಸ್‌ಅನ್ನು ಕೊಟ್ಟಿದ್ದಾರೆ. ಈ ವರ್ತಕರು ಈ ಹೋಲ್‌ಸೇಲ್ ಆಹಾರ ಧಾನ್ಯದ ಮಾರಾಟದಲ್ಲಿ 30-40 ಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಡುವುದಾದರೆ ಒಬ್ಬ ವರ್ತಕರ ಹೆಸರನ್ನು ಬೇಕಾದರೆ ಹೇಳುತ್ತೇನೆ. ಬೆಂಗಳೂರು ಸಿಟಿಯಲ್ಲಿ ವೆಂಕಟಸ್ವಾಮಿ ಶೆಟ್ಟಿ ಎನ್ನುವವರಿಗೆ ಹೋಲ್‌ಸೇಲ್ ವ್ಯಾಪಾರದ ಲೈಸೆನ್ಸ್ ಕೊಟ್ಟಿದ್ದಾರೆ. ಅವರಿಗೆ ಅದನ್ನು ಮಾಡುವುದಕ್ಕೆ ಯೋಗ್ಯತೆ ಇಲ್ಲ. ಅವರ ಹತ್ತಿರ 10 ರೂಪಾಯಿ ಕೂಡ ಇಲ್ಲ. ಅವರಿಗೆ ಹಣವನ್ನು ಒದಗಿಸತಕ್ಕ ದಳ್ಳಾಳಿಗಳು ಕಾಳಸಂತೆಯಲ್ಲಿ ವ್ಯಾಪಾರ ಮಾಡುವುದಕ್ಕಾಗಿ ಅದರ ಮೂಲಕ ಅವಕಾಶವನ್ನು ಕಲ್ಪನೆಮಾಡಿಕೊಂಡಿದ್ದಾರೆ. ಇಂಥಾ ಕಾಳಸಂತೆಯಲ್ಲಿ ವ್ಯಾಪಾರ ಮಾಡತಕ್ಕವರು ಆಹಾರ ಧಾನ್ಯವನ್ನು ವಿತರಣೆಮಾಡುವುದಾದರೆ ಜನಗಳಿಗೆ ಆಹಾರ ಧಾನ್ಯ ಸರಿಯಾಗಿ ಸಿಕ್ಕುತ್ತದೆಯೇ ಎಂಬುದನ್ನ ತಾವು ಯೋಚನೆ ಮಾಡಬೇಕು.

18 ವರ್ಷಗಳ ಕಾಂಗ್ರೆಸ್ಸಿನವರ ಆಡಳಿತದಲ್ಲಿ ಆಹಾರದ ಸಮಸ್ಯೆಯನ್ನ ಉಗ್ರಸ್ಥಿತಿಗೆ ತಂದಿದ್ದಾರೆ ಇರತಕ್ಕಂಥ ಅಲ್ಪಸ್ವಲ್ಪ ಅಕ್ಕಿಯನ್ನು ಮತ್ತು ಗೋಧಿಯನ್ನು ವಿತರಣೆ ಮಾಡುವುದರಲ್ಲಿ ಸರಿಯಾದಂತಹ ಒಂದು ನೀತಿಯಿಲ್ಲ. ಕಾಳಸಂತೆ ವ್ಯಾಪಾರ ಮಾಡತಕ್ಕ ಜನಗಳಿಗೆ ಪ್ರೋತ್ಸಾಹ ಮಾಡತಕ್ಕ ಉದ್ದೇಶಕ್ಕಾಗಿ ಯಾರು ಯಾರಿಗೋ ತಮಗೆ ಬೇಕಾದವರಿಗೆ ಹೋಲ್‌ಸೇಲ್ ಲೈಸೆನ್ಸ್ ಕೊಟ್ಟಿದ್ದಾರೆ ಅವರ ಮೇಲೆ ಸರ್ಕಾರದವರು ಕ್ರಮವನ್ನು ತೆಗೆದುಕೊಳ್ಳಬೇಕು. ಮತ್ತು ಅವರನ್ನು ವಜಾ ಮಾಡಬೇಕು. ಬೆಂಗಳೂರು ಸಿಟಿ ಕಾರ್ಪೋರೇಷನ್ ಏರಿಯಾದಲ್ಲಿ ಎಲ್ಲಾ ಡಿವಿಜನ್‌ಗಳಲ್ಲಿಯೂ ಸಮರ್ಪಕವಾಗಿ ಎಲ್ಲಾ ಜನಗಳಿಗೂ ಅಕ್ಕಿ ಮತ್ತು ಗೋಧಿಯನ್ನು ಸಮಗ್ರದೃಷ್ಟಿಯಿಂದ ಹಂಚತಕ್ಕ ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಳ್ಳಬೇಕು.

ಇನ್ನು ಗ್ರಾಮಾಂತರ ಪ್ರದೇಶಗಳ ವಿಷಯವನ್ನು ಹೇಳುವುದಾದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರವನ್ನು ಬೆಳೆಯತಕ್ಕ ರೈತನಿಗೆ ಯಾವ ನೆರವನ್ನೂ ಸರ್ಕಾರದವರು ಒದಗಿಸಿಕೊಟ್ಟಿಲ್ಲ. ತುಮಕೂರು ಜಿಲ್ಲೆಯಲ್ಲಿ ಒಂದು ತಾಲ್ಲೂಕ್ ಮಾರ್ಕೆಟಿಂಗ್ ಕೋಆಪರೇಟೀವ್ ಸೊಸೈಟಿ ಇದೆ. ಆ ಸೊಸೈಟಿಗೆ ಹಿಂದುಗಡೆ ಒಂದು ಬಾಗಿಲು ಮುಂದುಗಡೆ ಒಂದು ಬಾಗಿಲು ಇದೆ. ಮುಂದುಗಡೆ ಬಾಗಿಲಿನಲ್ಲಿ ಕೊಟ್ಟಂತಹ ಆಹಾರಧಾನ್ಯವನ್ನೆಲ್ಲಾ ಹಿಂದುಗಡೆ ಬಾಗಿಲಿನಲ್ಲಿ ಕಾಳಸಂತೆಯ ವ್ಯಾಪಾರ ಮಾಡುತ್ತಾರೆ. ಆ ಪಂಚಾಯಿತಿಗೆ ಅಷ್ಟು ಕೊಟ್ಟಿದ್ದೇವೆ. ಈ ಪಂಚಾಯಿತಿಗೆ ಇಷ್ಟುಕೊಟ್ಟಿದ್ದೇವೆ ಎಂದು ಲೆಕ್ಕ ಬರೆದು ಯಾರಿಂದಲಾದರೂ ಸೈನು ಹಾಕಿಸಿಕೊಳ್ಳುತ್ತಾರೆ. ಈ ಅವ್ಯವಹಾರವನ್ನು ಹಿಡಿಯಬೇಕೆಂದು ನಾವು ಹೇಳಿದರೂ ಕೂಡ ಈ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲು ಸಹಕಾರ ಮಂತ್ರಿಗಳಾಗಲೀ, ಆಹಾರ ಮಂತ್ರಿಗಳಾಗಲೀ ಪ್ರಯತ್ನ ಮಾಡಿಲ್ಲ. ಬತ್ತವನ್ನ ಕೊಳ್ಳುವಾಗ ಹಳೆಯ ಬತ್ತ ಮತ್ತು ಹೊಸ ಬತ್ತದ ಬಗ್ಗೆ ರೇಟುಗಳನ್ನು ಹೆಚ್ಚು ಕಡಿಮೆ ಮಾಡಿದ್ದಾರೆ. ಹೊಸ ಬತ್ತಕ್ಕೆ ಹಳೆಯ ಬತ್ತದ ರೇಟನ್ನು ಫಿಕ್ಸ್‌ಮಾಡಿ ಕಾಳಸಂತೆಯ ವ್ಯಾಪಾರಸ್ಥರಿಗೆ ಮಾರಾಟ ಮಾಡಿದ್ದಾರೆ. ಎಲ್ಲಿ ಬತ್ತದ ಪ್ರೊಕ್ಯೂರ್‌ಮೆಂಟ್ ನಡೆಯುತ್ತದೆಯೋ ಅಲ್ಲೆಲ್ಲಾ ಇದೇರೀತಿ ನಡೆಯುತ್ತಿದೆ. ತುಮಕೂರಿನಲ್ಲಿ ಇಂಥಾದ್ದು ನಡೆಯುತ್ತಿದೆ ಎಂದು ಸರ್ಕಾರದ ಗಮನಕ್ಕೆ ತಂದರೂ ಕೂಡ ಇದರ ಬಗ್ಗೆ ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಗ್ರಾಮಾಂತರ ಪ್ರದೇಶಗಳಿಗೂ ಕೂಡ ಶಾಸನಬದ್ಧ ಪಡಿತರ ಪದ್ಧತಿಯನ್ನು ಜಾರಿಗೆತರುವ ಜವಾಬ್ದಾರಿಯನ್ನು ಹೊತ್ತುಕೊಂಡು ಸರ್ಕಾರದವರು ಅದನ್ನು ಜಾರಿಗೆತರಬೇಕು. ಇಲ್ಲದಿದ್ದರೆ ರಾಜೀನಾಮೆಯನ್ನು ಕೊಡಬೇಕೆಂದು

(ಶ್ರೀ ಕೆ. ಲಕ್ಕಪ್ಪ)

ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಜೆ. ಲಿಂಗೇಗೌಡ (ಚನ್ನಪಟ್ಟಣ).—ಮಾನ್ಯ ಅಧ್ಯಕ್ಷರೇ, ಆಹಾರದ ಉತ್ಪತ್ತಿ, ಆಹಾರದ ಶೇಖರಣೆ ಮತ್ತು ಆಹಾರದ ಹಂಚಿಕೆಯ ವಿಷಯದಲ್ಲಿ ಕೆಲವು ಮಾತುಗಳನ್ನು ಆಡಬೇಕೆಂದು ನಾನು ತಮ್ಮ ಅಪ್ಪಣೆಯನ್ನು ಪಡೆದುಕೊಂಡಿದ್ದೇನೆ. ನನಗೆ ಕಾಲಾವಕಾಶವನ್ನು ಬಹಳ ಕಡಿಮೆ ಕೊಟ್ಟಿರುವುದರಿಂದ ಹೆಚ್ಚಿನ ವಿಷಯಗಳನ್ನು ಮಾತನಾಡದೆ ಈ ಆಹಾರದ ಉತ್ಪತ್ತಿಯ ವಿಚಾರದಲ್ಲಿ ಕೆಲವು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಆಹಾರದ ಉತ್ಪತ್ತಿಯ ಬಗ್ಗೆ ಸರ್ಕಾರದವರು ಹಾಕಿಕೊಂಡಿರತಕ್ಕ ಯೋಜನೆಗಳನ್ನು ಸರಿಯಾಗಿ ಅಧಿಕಾರವರ್ಗದವರು ಇಂಪ್ಲಿಮೆಂಟ್ ಮಾಡುತ್ತಿಲ್ಲ ಎಂದು ನಾನು ಹೇಳುತ್ತೇನೆ. ಈಗ ಉದಾಹರಣೆಗೆ ಹೇಳುವುದಾದರೆ ನಮ್ಮ ಸರ್ಕಾರದವರು ಬೆಂಗಳೂರು ಜಿಲ್ಲಾಧಿಕಾರಿಗಳಿಗೆ ಒಂದು ಪತ್ರ ಬರೆದು ಆಯಾಯ ತಾಲ್ಲೂಕುಗಳಿಗೆ ಒಂದು ದಿವಸದ ಮಟ್ಟಿಗಾದರೂ ಕೂಡ ಭೇಟಿ ಕೊಟ್ಟು ಡಿಪಾರ್ಟ್‌ಮೆಂಟಿನ ಬೇರೆ ಎಲ್ಲಾ ಇಲಾಖೆಗಳ ಅಧಿಕಾರಿಗಳ ಸಂಪರ್ಕವನ್ನು ಪಡೆದು ಆ ಸ್ಥಳದಲ್ಲೇ ತೀರ್ಮಾನಗಳನ್ನು ತೆಗೆದುಕೊಂಡು ರೈತರಿಗೆ ಸೌಲಭ್ಯವನ್ನು ದೊರಕಿಸಬೇಕೆಂದು ಸರ್ಕಾರದವರು ಆದೇಶವನ್ನು ಕೊಟ್ಟಿದ್ದಾರೆ. ಆದರೂ ಕೂಡ ಈಗ ಸುಮಾರು 4—5 ತಿಂಗಳುಗಳಿಂದ ಬೆಂಗಳೂರು ಜಿಲ್ಲಾಧಿಕಾರಿಗಳು ನಮ್ಮ ತಾಲ್ಲೂಕಿನಲ್ಲೇ ಪ್ರವಾಸ ಮಾಡಿರುವುದನ್ನು ನೋಡಿದರೆ ಅವರು ಸರ್ಕಾರದ ಆದೇಶದಂತೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದರಿಂದಾಗಿ ಅನೇಕ ಕೆಲಸಕಾರ್ಯಗಳು ಆಗುವುದು ನಿಧಾನವಾಗಿ ಆಹಾರದ ಉತ್ಪತ್ತಿಯಲ್ಲಿ ಸರಿಯಾದ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತಿಲ್ಲ.

ಇನ್ನು ಆಹಾರದ ಶೇಖರಣೆಯ ವಿಚಾರದಲ್ಲಿ ಹೇಳುವುದಾದರೆ ಯಾರಿಗೆ ಆಹಾರದಿನಸಿಯನ್ನು ಕೊಡುವುದಕ್ಕೆ ಶಕ್ತಿ ಇದೆಯೋ ಅಂಥವರಿಂದ ಸರ್ಕಾರದವರು ವಸೂಲಿ ಮಾಡುತ್ತಿಲ್ಲ. ಒಂದುವೇಳೆ ಅಧಿಕಾರಿಗಳು ಕೇಳಿದರೂ ಕೂಡ ಕೆಲವರು ಸಹಕರಿಸದೇ ಹೋದರೆ ಅಧಿಕಾರಿಗಳೂ ಅವರ ಜೊತೆಯಲ್ಲಿ ಸಹಕರಿಸಿ ತಪ್ಪಿತಸ್ಥರಿಗೆ ಇನ್ನೂ ಹೆಚ್ಚಿನ ಸಹಾಯವನ್ನು ಮಾಡುತ್ತಾರೆ. ಈ ವಿಚಾರವನ್ನು ನಾನು ಹಿಂದೆ ಕೂಡ ಹೇಳಿದ್ದೇನೆ. ಇದಕ್ಕೆ ನಮ್ಮ ಚನ್ನಪಟ್ಟಣದಲ್ಲೇ ಒಂದು ಉದಾಹರಣೆಯನ್ನು ಹೇಳುವುದಾದರೆ, ಕೆಲವು ಐಶ್ವರ್ಯವಂತರು ಸರ್ಕಾರಕ್ಕೆ ಆಹಾರಧಾನ್ಯವನ್ನು ಕೊಡುವುದಕ್ಕೆ ಶಕ್ತಿಯಿದ್ದರೂ ಕೂಡ ಅವರೊಬ್ಬರೂ ಒಂದು ಕಾಳನ್ನೂ ಕೊಡದೆ ಇದ್ದರೂ ಕೂಡ ಅವರ ವಿಚಾರದಲ್ಲಿ ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ಸಕ್ತರಾಗಿಲ್ಲ.

ಇದನ್ನು ಆಹಾರ ಮಂತ್ರಿಗಳಿಗೂ ಬರೆದರೂ ಯಾವ ಪ್ರಯೋಜನವೂ ಆಗಿಲ್ಲಾ. ಆಹಾರಧಾನ್ಯ ಕೊಡುವುದಕ್ಕೆ ಶಕ್ತಿಇಲ್ಲದ ರೈತರಿಂದ ಸಣ್ಣಪುಟ್ಟ ಅಧಿಕಾರಿಗಳು ಅಲ್ಪ ಸ್ವಲ್ಪ ಧಾನ್ಯವನ್ನು ಪಡೆದುಕೊಳ್ಳುತ್ತಿದ್ದಾರೆ ಇದನ್ನು ತಪ್ಪಿಸಬೇಕು ಎಂದು ನಾನು ಸರಕಾರವನ್ನು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಆಹಾರದ ಹಂಚಿಕೆ ವಿಚಾರದಲ್ಲಿ ನಾನು ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ಬಗ್ಗೆ ಮಾತ್ರ ಇಲ್ಲಿ ಹೇಳುತ್ತೇನೆ. ನಮ್ಮ ಮಾನ್ಯ ಆಹಾರ ಮಂತ್ರಿಗಳು ಸುಮಾರು ಆರು ತಿಂಗಳ ಅಂಕಿಅಂಶಗಳನ್ನು ಈ ಸಭೆಗೆ ಒದಗಿಸಿದ್ದಾರೆ. ಈ ಅಂಕಿಅಂಶಗಳನ್ನು ನೋಡಿದರೆ ಇಡೀ ಮೈಸೂರು ದೇಶದ ಬೇರೆ ಜಿಲ್ಲೆಗಳಿಗೆ ಒದಗಿಸಿರತಕ್ಕ ಪ್ರಮಾಣದಲ್ಲಿ ಕೂಡ ನಮ್ಮ ಅಭಾವ ಜಿಲ್ಲೆಗೆ ಒದಗಿಸಿಲ್ಲ. ಉದಾಹರಣೆಯಾಗಿ ಹೇಳುವುದಾದರೆ, ಮೂರು, ನಾಲ್ಕು, ಐದು, ಆರು, ಏಳು, ಎಂಟು ಲಕ್ಷ ಜನಸಂಖ್ಯೆ ಇರುವ ಡಿಸ್ಟ್ರಿಕ್ಟುಗಳಿಗೆ ಒದಗಿಸಿರುವಷ್ಟು ಧಾನ್ಯ ಕೂಡ ಒಂದೇ ಸಮನಾಗಿ ಕಳೆದ ಆರು ತಿಂಗಳಿಂದ ಬೆಂಗಳೂರು ರೂರಲ್ ಜಿಲ್ಲೆಗೆ ಒದಗಿಸಿಲ್ಲ. ಇದಕ್ಕೆ ಕಾರಣಗಳನ್ನು ಕೇಳಿದರೆ ನಮ್ಮ ಆಹಾರ ಮಂತ್ರಿಗಳು ಮಾರ್ಚಿ ತಿಂಗಳು ಹೆಚ್ಚಿನ ಧಾನ್ಯ ಒದಗಿಸುವ ಬಗ್ಗೆ ಏರ್ಪಾಡು ಮಾಡಿಸುತ್ತೇವೆ ಎಂದು ಹೇಳಿದರು. ನಾನು ಸರಕಾರವನ್ನು ಇದರ ಬಗ್ಗೆ ಒಂದು ಪ್ರಶ್ನೆ ಇಲ್ಲಿ ಕೇಳುತ್ತೇನೆ. ಸುಮಾರು ಆರು ತಿಂಗಳಿಂದ ತೀರಾ ಕಡಿಮೆ ಪ್ರಮಾಣದಲ್ಲಿ ಆಹಾರಧಾನ್ಯಗಳನ್ನು ನಮ್ಮ ರೂರಲ್ ಜಿಲ್ಲೆಗೆ ಒದಗಿಸಲು ಕಾರಣವಾದರೂ ಏನು ? ಹೀಗಾಗಿ ನಮ್ಮ ಜಿಲ್ಲೆಯ ಜನ ಬಹಳ ಕಷ್ಟಪಡುತ್ತಿದ್ದಾರೆ. ಇದಕ್ಕೆಲ್ಲಾ ಜವಾಬುದಾರರು ಯಾರು ಎಂದು ನಾನು ಸರಕಾರವನ್ನು ಪ್ರಶ್ನಿಸುತ್ತೇನೆ ! ಈ ದಿವಸ ಮಾನ್ಯ ಆಹಾರ ಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಗ್ರಾಮಾಂತರ ಪ್ರದೇಶಗಳಿಗೂ ಆಹಾರ ದವಸಗಳನ್ನು ಒದಗಿಸುತ್ತಿದ್ದೇವೆ ಎಂದು ಅರ್ಥ ಬರುವ ಹಾಗೆ ಅವರು ಹೇಳಿದ್ದಾರೆ. ಉತ್ತರವನ್ನು ಕೊಡುವುದಕ್ಕೆ ಮುಂಚಿತವಾಗಿ ವಿಷಯವನ್ನು ಕೂಲಂಕಷವಾಗಿ ತಿಳಿದುಕೊಂಡು ಮಂತ್ರಿಗಳು ಉತ್ತರ ಕೊಟ್ಟಿದ್ದರೆ ನನಗೆ ಸಮಾಧಾನವಾಗುತ್ತಿತ್ತು ಎಂದು ನಾನು ಹೇಳುತ್ತೇನೆ. ನಿಜವಾಗಿಯೂ ಕೂಡ ಸುಮಾರು ಮೂರು ನಾಲ್ಕು ತಿಂಗಳಿಂದಲೂ ಒಂದೇ ಸಮನಾಗಿ ನಾವು

ಸರಕಾರಕ್ಕೆ ಕಾಗದಗಳನ್ನು ಬರೆದೂ ಬರೆದೂ ಬೇಜಾರುಆಗಿಬಿಟ್ಟಿದೆ. ಎಷ್ಟು ಪ್ರಯತ್ನಪಟ್ಟರೂ ಈ ದಿವಸದವರೆಗೂ ಒಂದು ಮೂಟೆ ಅಕ್ಕಿ ಕೂಡ ಗ್ರಾಮಾಂತರ ಪ್ರದೇಶಗಳಿಗೆ ಕೊಟ್ಟಿಲ್ಲ ಎಂದು ಹೇಳಿದರೆ ಬಹುಶಃ ಉತ್ಪ್ರೇಕ್ಷೆಯಾಗಲೀ ಅಥವಾ ಸತ್ಯಕ್ಕೆ ದೂರವಾದುದಾಗಲೀ ಇಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಹಳ್ಳಿಯ ಜನತೆ ಎಷ್ಟು ಕಷ್ಟಪಡುತ್ತಿದ್ದಾರೆ ಎಂದು ನಾನು ಹೇಳುವುದಾದರೆ ನಮ್ಮ ವಿರೋಧಪಕ್ಷದ ಕೆಲವು ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಜನ ಹೊಟ್ಟೆಗಿಲ್ಲದೆ ಸಾಯುವುದಕ್ಕೆ ಸರಕಾರ ಅವಕಾಶ ಕೊಡದೇ ಇದ್ದರೂ ಇವೊತ್ತಿನ ದಿವಸ ಎಷ್ಟೋ ಕಡೆಗಳಲ್ಲಿ ಎರಡು ಮೂರು ಹೊತ್ತು ಆಹಾರವಿಲ್ಲದೆ ಹಸಿದುಕೊಂಡು ಕಷ್ಟಪಡುತ್ತಿದ್ದಾರೆ. ಈ ತೊಂದರೆಯನ್ನು ಹೋಗಲಾಡಿಸುವುದಕ್ಕೆ ನಿಜವಾಗಿಯೂ ಯಾವ ಕಾರ್ಯಕ್ರಮವನ್ನೂ ಸರಕಾರ ತೆಗೆದುಕೊಂಡಿಲ್ಲ ಎಂದು ಹೇಳಿದರೆ ಅದು ತಪ್ಪೇನೂ ಆಗುವುದಿಲ್ಲ. ತಾವು ಹಳ್ಳಿಯ ಜನತೆಯ ವಿಚಾರದಲ್ಲಿ ಸ್ವಲ್ಪ ಹೆಚ್ಚು ಮುತುವರ್ಜಿ ಮತ್ತು ಕರುಣೆ ವಹಿಸಬೇಕು. ಅವರು ಬಹಳ ಕಷ್ಟಪಟ್ಟು ಅನೇಕ ವರ್ಷಗಳಿಂದ ಸಿಟಿ ಮತ್ತು ಪಟ್ಟಣಗಳಲ್ಲಿರುವ ಜನಗಳಿಗೆ ಅವರು ಬೆಳೆದು ಆಹಾರವನ್ನು ಒದಗಿಸಿ ಸಾಕುತ್ತಿದ್ದರು. ಏನೋ ನಮ್ಮ ದುರಾದೃಷ್ಟದಿಂದ ಈಗ ಬರಗಾಲ ಬಂದಿರುವುದರಿಂದ ಹಳ್ಳಿಯ ಜನತೆ ನಮ್ಮ ಸರಕಾರದವರಿಂದ ಆಹಾರ ದವಸವನ್ನು ಅಪೇಕ್ಷಿಸುತ್ತಿದ್ದಾರೆ. ಅವರಲ್ಲಿ ದವಸ ಇದ್ದಿದ್ದರೆ ಖಂಡಿತ ಅವರು ನಮ್ಮನ್ನು ಕೇಳುತ್ತಿರಲಿಲ್ಲ. ನಮ್ಮ ಇಡೀ ಮೈಸೂರು ದೇಶದ ಜನತೆ ನಮ್ಮ ದೇಶದ ಪರಿಸ್ಥಿತಿಯನ್ನು ತಿಳಿದುಕೊಂಡು ಅವರು ಬಹಳ ಶಾಂತವಾಗಿದ್ದಾರೆ. ಅದಕ್ಕಾಗಿ ಈ ಮೈಸೂರು ದೇಶದ ಜನತೆಯನ್ನು ನಾವು ಅಭಿನಂದಿಸಬೇಕಾದುದು ನಮ್ಮ ಕರ್ತವ್ಯ. ಆದರೆ ಸರಕಾರ ಅವರ ಕರ್ತವ್ಯವನ್ನು ನಿಷ್ಠೆಯಿಂದ ಮಾಡಬೇಕು ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆಹಾರ ದವಸಗಳನ್ನು ಹಂಚುವುದರಲ್ಲಿಯೂ ಅನೇಕ ಲೋಪದೋಷಗಳು ಆಗುತ್ತಿವೆ. ಅದರಲ್ಲೂ ಬೆಂಗಳೂರು ರೂರಲ್ ಜಿಲ್ಲೆಯಲ್ಲಿ ಹಂಚುವಿಕೆಯಲ್ಲಾಗುತ್ತಿರುವ ಲೋಪದೋಷಗಳನ್ನು ಸರಿಪಡಿಸಬೇಕು ಎಂದು ಸರಕಾರವಲ್ಲಿ ಒತ್ತಾಯಪೂರ್ವಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ, ಚನ್ನಪಟ್ಟಣ ತಾಲ್ಲೂಕಿನ ಬಗ್ಗೆ ಇಲ್ಲಿ ಅಭಾವ ಪರಿಸ್ಥಿತಿಯ ಬಗ್ಗೆ ಸಾಕಷ್ಟು ಪರಿಹಾರ ಕ್ರಮಗಳನ್ನು ಮಾಡುತ್ತಿದ್ದಾರೆ. ಆದರೆ ಶಾಶ್ವತವಾದ ಪರಿಹಾರಕ್ರಮಗಳನ್ನು ಈ ಅಭಾವ ತಾಲ್ಲೂಕಿಗೆ ಒದಗಿಸಿಕೊಡಬೇಕಾದರೆ ನಮ್ಮ ಮಂಚನಬೆಲೆ ಪ್ರಾಜೆಕ್ಟನ್ನು ಆದಷ್ಟು ಜಾಗ್ರತೆ ಮಾಡಿಸಿ ಕಣ್ವಾ ಜಲಾಶಯಕ್ಕೆ ನೀರು ಒದಗಿಸುವುದಾದರೆ ಮಾತ್ರ ನಮ್ಮ ತಾಲ್ಲೂಕಿಗೆ ಸಹಾಯವಾಗುತ್ತದೆ.

ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟುದಕ್ಕಾಗಿ ಅವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸಿ ನಮ್ಮ ಮುಂದಿರುವ ಬೇಡಿಕೆಗಳನ್ನು ಸಮರ್ಥಿಸುತ್ತೇನೆ.

† ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಅಧ್ಯಕ್ಷರೇ, ಸರಕಾರದವರು ಈ ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳನ್ನು ಅಂದರೆ 15 ಮತ್ತು 53 ಡಿಮ್ಯಾಂಡಗಳನ್ನು ವಿರೋಧ ಮಾಡುತ್ತಾ ಕೆಲವು ಮಾತುಗಳನ್ನು ಹೇಳಲು ಇಚ್ಛಪಡುತ್ತೇನೆ. ಕಾಂಗ್ರೆಸ್ಸು ಸರಕಾರ ಬಂದ ಲಗಾಯ್ತು ದೇಶದಲ್ಲಿ ಕೃಷಿ ಉತ್ಪಾದನೆ ಮತ್ತು ಆಹಾರದ ಸರಬರಾಜು ಪರಿಸ್ಥಿತಿಯನ್ನು ಒಂದು ರಾಷ್ಟ್ರೀಯ ನೀತಿಯ ಆಧಾರದ ಮೇಲೆ ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಈಗ ಈ ದಿನ ಇಂತಹ ಉತ್ಕಟ ಪರಿಸ್ಥಿತಿ ದೇಶದ ಮುಂದೆ ಬಂದಿರುವಾಗ ದೇಶದ ಹೊರಗಡೆ ವಿವಿಧ ಊರುಗಳಿಂದ ಬರತಕ್ಕ ವರದಿಗಳನ್ನು ನೋಡಿದರೆ ಇಲ್ಲಿರತಕ್ಕ ಪರಿಸ್ಥಿತಿಗಿಂತ ಮೀರಿದ ವರದಿಗಳನ್ನು ನಾವು ಕೇಳುತ್ತಿದ್ದೇವೆ. ಅನೇಕ ಹೊರ ದೇಶಗಳು ನಮ್ಮ ದೇಶಕ್ಕೆ ಬಹುಮಾನವಾಗಿ ಹಾಗೂ ಕಡವಾಗಿ ಆಹಾರದವಸಗಳನ್ನು ಒದಗಿಸುವ ಭರವಸೆಯನ್ನೂ ಕೊಟ್ಟಿದ್ದಾರೆ. ಭುವನೇಶ್ವರ ಕಾಂಗ್ರೆಸ್ಸಿನಲ್ಲಿ ಆಹಾರ ನೀತಿಯ ಬಗ್ಗೆ ಒಂದು ಸಮಿತಿಯನ್ನು ಮಾಡಿದ್ದರು. ಅದರಲ್ಲಿ ಮಾನ್ಯ ಶ್ರೀ ಧೇಬರರು ಹಾಗೂ ಶ್ರೀ ಸುಬ್ರಮಣ್ಯಂರವರೂ ಇದ್ದರು. ಅನಂತರ ಶ್ರೀ ಸುಬ್ರಮಣ್ಯಂರವರೇ ಈ ದೇಶದ ಆಹಾರ ಮಂತ್ರಿಗಳಾಗಿದ್ದಾರೆ ಮತ್ತು ಅವರು ಇನ್ನೂ ಹಾಗೇ ಉಳಿದುಕೊಂಡು ಬರುತ್ತಿದ್ದಾರೆ. ಮತ್ತು ಅವರು ಆಗ ಒಂದು ವರದಿಯನ್ನು ಸರಕಾರಕ್ಕೆ ಕೊಟ್ಟಿದ್ದರು ಎನ್ನುವುದು ತಮಗೆಲ್ಲರಿಗೂ ಗೊತ್ತೇ ಇದೆ. ನಾನು ಹೇಳುವುದು ಒಟ್ಟು ಆಹಾರ ಧಾನ್ಯಗಳ ವಿತರಣೆಯನ್ನು ಸರಕಾರವೇ ವಹಿಸಿಕೊಳ್ಳಬೇಕು ಮತ್ತು ಅಂತಹ ಮಾರ್ಗಗಳನ್ನು ಸರಕಾರ ಅನುಸರಿಸಬೇಕಾದರೂ ದೇಶದ ಎಲ್ಲಾ ಕಡೆ ಆಹಾರ ಹಂಚಿಕೆ ಮಾಡಲು ಪಡಿತರ ವ್ಯವಸ್ಥೆಯನ್ನು ಜಾರಿಗೆ ತರುವ ತೀರ್ಮಾನ ಮಾಡಬೇಕು. ಆದರೆ ಆ ತೀರ್ಮಾನವನ್ನು ಕಾರ್ಯಗತ ಮಾಡುವುದಕ್ಕೆ ಆಗಲಿಲ್ಲ. ಈಗ ನಮ್ಮ ರಾಜ್ಯದಲ್ಲೂ ಕೂಡ ಆಹಾರಕ್ಕಾಗಿ ಪ್ರತ್ಯೇಕವಾದ ಒಬ್ಬ ಮಂತ್ರಿಗಳನ್ನು ನೇಮಿಸಿದ್ದಾರೆ ಮತ್ತು ಸರಕಾರದವರು ಅದಕ್ಕಾಗಿ ಪ್ರತ್ಯೇಕವಾದ ಒಂದು ಇಲಾಖೆಯನ್ನೇ ಈಗ ರಚನೆ ಮಾಡಿಕೊಂಡಿದ್ದಾರೆ. ಜೊತೆಗೆ ಆಹಾರದ ಕಾರ್ಪೊರೇಷನ್ ಎನ್ನುವುದೂ ಒಂದು ಇದೆ. ಇಲ್ಲಿ ಅನೇಕ ಆಶ್ವಾಸನೆಗಳನ್ನು

(ಶ್ರೀ ಎಸ್. ಗೋಪಾಲಗೌಡ)

ಸರಕಾರ ಕೊಟ್ಟರು. ಜನವರಿ ಒಂದನೇ ತಾರೀಖಿನಿಂದ ಪಡಿತರ ವ್ಯವಸ್ಥೆ ಎಂದರೆ ಸ್ಟ್ಯಾಟುಟರಿ ರೇಷನಿಂಗ್ ಜಾರಿಗೆ ತರುತ್ತೇವೆ ಎಂದರು, ಫೆಬ್ರವರಿಯಲ್ಲಿ ತರುತ್ತೇವೆ ಎಂದರು. ಆ ನಂತರ ಮಾರ್ಚಿಯಲ್ಲಿ ತರುತ್ತೇವೆ ಎಂದರು. ಕೊನೆಗೆ ಏಪ್ರಲ್ ಒಂದನೇ ತಾರೀಖಿನಿಂದ ತರುತ್ತಾರೋ ಇಲ್ಲವೋ ಇನ್ನೂ ಗೊತ್ತಾಗುತ್ತಿಲ್ಲ. ಶ್ರೀಮಾನ್ ಜತ್ತಿಯವರ ಬಗ್ಗೆ ನನಗೆ ಬಹಳ ಗೌರವಿದೆ. ಆದರೆ ಅವರು ಕೊಡುವ ಉತ್ತರಗಳನ್ನು ನೋಡಿದರೆ ಅವರು ಸತ್ಯವನ್ನು ಅದಷ್ಟು ಮರೆ ಮಾಡು ತ್ತಾರೆ. ಮತ್ತು ಟೆಕ್ನಿಕಲ್ ಆಗಿ ಏನು ಉತ್ತರ ಕೊಡಬೇಕೋ ಅದನ್ನು ಮಾತ್ರ ಕೊಡುತ್ತಾರೆ ಎನ್ನುವುದು ಈಗಾಗಲೇ ಮಾನ್ಯ ಸಭೆಗೆ ಹಾಗೂ ದೇಶಕ್ಕೆ ಗೊತ್ತಾಗಿದೆ. ಇದರ ಬಗ್ಗೆ ವ್ಯಾಖ್ಯಾನ ಮಾಡುವ ಅಗತ್ಯವಿಲ್ಲ. ಬಹುಶಃ ಒಂದು ಪೇಚಿಗೆ ಸಿಕ್ಕಿಕೊಂಡು ಸರಕಾರ ದೇಶದ ಜನತೆಯ ಮುಂದೆ ಗೊಂದಲವಾಗುತ್ತದೆ ಎಂದುಕೊಂಡು ಅವರು ಇಲ್ಲಿ ಅಭಯವನ್ನು ಕೊಡಲು ಹೆದರಿಕೆ ಇರಬಹುದು. ಅದೇನೇ ಇರಲಿ ಎಲ್ಲಿಯತನಕ ಇಂತಹ ಹೇಳಿಕೆಗಳಿಂದ ಜನರನ್ನು ತೃಪ್ತಿಪಡಿಸಿ ಕೊಂಡು ಹೋಗುವುದಕ್ಕೆ ಸಾಧ್ಯ ಎನ್ನುವುದನ್ನು ಮಾನ್ಯ ಸಚಿವರು ಹಾಗೂ ಸರಕಾರ ಬೇಗ ತಿಳಿದು ಕೊಂಡರೆ ಅವರಿಗೂ ಕ್ಷೇಮ, ಮತ್ತು ಜನತೆಗೂ ಕ್ಷೇಮ ಎಂದು ನನಗನಿಸುತ್ತದೆ. ರಾಜ್ಯಪಾಲರ ಭಾಷಣವನ್ನು ಯಾರು ತಯಾರು ಮಾಡಿದರೋ ನನಗೆ ಗೊತ್ತಿಲ್ಲ. ಅದರಲ್ಲಿ 8.9 ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯದ ಕೊರತೆ ಇದೆ ಎಂದು ಹೇಳಿಬಿಟ್ಟರು. ಅದಾದ ಮೇಲೆ ನಮ್ಮ ಆಹಾರ ಧಾನ್ಯಗಳಲ್ಲಿ ಸುಮಾರು 18 ಲಕ್ಷ ಟನ್ನುಗಳಷ್ಟು ಕೊರತೆ ಇದೆ ಎಂದು ಈಗ ಸರಕಾರ ಹೇಳುತ್ತಾ ಅದರ ಅಂಕೆ ಸಂಖ್ಯೆಗಳನ್ನು ಒದಗಿಸಿಕೊಟ್ಟಿದೆ. ಅಧಿಕಾರಿಗಳು ಯಾವ ದೃಷ್ಟಿ ಕೋನದಿಂದ ಒದಗಿಸಿದರೋ ಗೊತ್ತಿಲ. ಇವುಗಳನ್ನೆಲ್ಲಾ ಸೇರಿಸಿ ರಾಜ್ಯದ ದೃಷ್ಟಿಯಿಂದ ಮಾತನಾಡುವಾಗ ಜವಾಬುದಾರಿ ಯಾದವರು ಖಚಿತವಾದ ಒಂದು ವರದಿಯನ್ನು ನಮ್ಮ ಲೆಜಿಸ್ಲೇಚರಿನ ಮುಂದೆ ಇಡಲು ಪ್ರಯತ್ನ ಮಾಡಬೇಕು. ಆದರೆ ಇದನ್ನು ಮಾಡುತ್ತಿಲ್ಲ. ಕೇಂದ್ರದವರು ಆಹಾರ ಕೊಟ್ಟರೆ ಜನತೆಗೆ ಆಹಾರ ವನ್ನು ಒದಗಿಸುತ್ತೇವೆ ಎಂದು ಹೇಳುತ್ತಾ ಇದ್ದಾರೆ. ಬಹುಶಃ ಮೇ ಜೂನ್ ನಂತರದಲ್ಲಿ ಈ ಸರ್ಕಾರ ಯಾವ ರೀತಿ ಆಹಾರವನ್ನು ಒದಗಿಸುತ್ತದೆ ಅಂತ ನನಗಂತೂ ಯಾವುದೇ ಭರವಸೆ ಉಳಿದಿಲ್ಲ.

ಇನ್ನೊಂದು ವಿಷಯ ಸ್ವಾಮಿ! 50 ಲಕ್ಷ ಜನ ನಗರದಲ್ಲಿ ವಾಸ ಮಾಡತಕ್ಕವರು ಹಾಗೂ ಹೇಗೂ ಸ್ವಲ್ಪ ಪಡಿತರವನ್ನು ಪಡೆಯಲು ಕೆಲವು ಕಡೆ ಇನ್‌ಫಾರ್ಮಲ್, ಇನ್ನು ಕೆಲವು ಕಡೆ ಫಾರ್ಮಲ್ ರೇಷನಿಂಗ್ ವ್ಯವಸ್ಥೆಯನ್ನು ಮಾಡಿದರೆ ಸಾಕು ಎಂದು ತಿಳಿಸಿದ್ದಾರೆ. ನಿಜವಾದ ಸ್ಥಿತಿಯನ್ನು ನೋಡುವುದಾದರೆ ಈ ವರ್ಷ ಮಳೆ ಬಾರದೆ ಬೆಳೆಗಳಿಗೆ ನಷ್ಟವಾಗಿ ಈ ದೇಶದಲ್ಲಿ ಪಟ್ಟಣಗಳಿಗಿಂತ ಹೆಚ್ಚು ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರ ಧಾನ್ಯ ಸಿಕ್ಕುವುದಿಲ್ಲ. ಬೆಳಿಗ್ಗೆ ಕೂಡ ಪ್ರಶ್ನೆ ಹಾಕಿದೆ ಶ್ರೀಮಾನ್ ಜತ್ತಿಯವರಿಗೆ. ಸ್ವಾಮಿ, ಗ್ರಾಮಾಂತರ ಪ್ರದೇಶದಲ್ಲಿ ನೀವು ಡಿಪೋಗಳನ್ನು ತೆಗೆದು ಅಲ್ಲಿ ಕೊಂಡು ತಿನ್ನತಕ್ಕ ಜನರಿಗೆ ಆಹಾರ ಧಾನ್ಯವನ್ನು ಒದಗಿಸುವ ಏರ್ಪಾಡನ್ನು ಮಾಡಿಲ್ಲ, ಡಿ. ಐ. ಆರ್. ಇರುವುದರಿಂದ ವ್ಯಾಪಾರಗಾರರು ಮಾರಾಟ ಮಾಡಿದರೆ ತೊಂದರೆ ಅಂತ ಹೇಳಿ ಅವರು ಮಾರಾಟ ಮಾಡುವುದಿಲ್ಲ, ಅಲ್ಪ ಸ್ವಲ್ಪ ಬೆಳೆದು ತಮ್ಮ ಉಪಯೋಗಕ್ಕೆ ಇಟ್ಟುಕೊಂಡಿರತಕ್ಕ ಬೇಸಾಯಗಾರರು ಅವರಿಗೆ ಏನೂ ಕೊಡುವುದಿಲ್ಲ ಅಂತಹ ಪರಿಸ್ಥಿತಿಯಲ್ಲಿ ಆ ಜನರು ಏನು ಮಾಡ ಬೇಕು ? ಎಲ್ಲಿ ಅವರಿಗೆ ಕಾಳು, ಆಹಾರ ಧಾನ್ಯ ಸಿಕ್ಕುತ್ತದೆ ಎಂಬ ಮಾತನ್ನು ಕೇಳಿದೆ. ಅವರು ಹಾರಿಕೆಯ ಉತ್ತರವನ್ನು ಕೊಟ್ಟರು. ಮುಳಬಾಗಿಲಿನ ಪ್ರಶ್ನೆ ಇದು, ಅಲ್ಲಿ ಡಿಪೋನಲ್ಲಿ ಕೊಂಡು ಕೊಳ್ಳತಕ್ಕವರಿಗೆ ಏನೂ ಸಿಕ್ಕುತ್ತಾ ಇಲ್ಲ ಎಂದರೆ ತಪ್ಪಾಗುತ್ತದೆ ಎಂದು ಹೇಳಿದರು. ಮೈಲೋ ಇರಬಹುದು ಮುಳಬಾಗಲು ಡಿಪೋನಲ್ಲಿ. ಅಲ್ಲಿ ಡಿಪೋ ಇದೆಯೋ ಇಲ್ಲವೊ ; ಅಂತೂ ಈ ಮಾತು ಗಳನ್ನು ಒಂದೇ ಸಮನೆ ಶ್ರೀಮಾನ್ ಜತ್ತಿಯವರು ಹೇಳುತ್ತಾರೆ. ಅದಕ್ಕೇ ರೋಸಿ ಹೋಗಿ ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಆಹಾರದ ಇಲಾಖೆಯಿಂದ ಅವರನ್ನು ನಿವೃತ್ತಿ ಮಾಡಿಬಿಡಿ, ಬೇರೇ ಯಾರೊ ಒಬ್ಬರು ಜವಾಬ್ದಾರಿ ಇರುವವರು, ಪ್ರಾಮಾಣಿಕರಾಗಿರುವವರು ಯಾರಿದ್ದಾರೆ ಅವರಿಗೆ ಈ ಇಲಾಖೆಯನ್ನು ವಹಿಸಿ ಎಂದು ಹೇಳಿದೆ. ಈ ರೀತಿ ಹೇಳಿಕೆ ಕೊಡುವುದರಿಂದ ಪ್ರಯೋಜನವಾಗು ವುದಿಲ್ಲ ಎಂಬ ಮಾತನ್ನು ಮಾತ್ರ ಹೇಳುತ್ತೇನೆ. ಅಷ್ಟೇ ಅಲ್ಲ ಒಂದು ದೊಡ್ಡ ವಂಚನೆಯನ್ನು ಮಾಡಿದ ಹಾಗಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಅಂಕಿಅಂಶಗಳ ಗೋಜಿಗೆ ನಾನು ಹೋಗುವುದಿಲ್ಲ. ಕಾಲಾವಕಾಶ ಇಲ್ಲದೇ ಇರುವುದ ರಿಂದ ಅದಷ್ಟು ಬೇಗ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತು ಲೆವಿ ಆಜ್ಞೆ ಇಟ್ಟಿದ್ದೀರಿ. ಪ್ರೊಕ್ಯೂರ್‌ಮೆಂಟ್ ಅದೂ ಅಷ್ಟೇ ಅಸಮಂಜಸವಾಗಿದೆ, ಬೆಲೆಯನ್ನು ಬಹಳ ಕಡಿಮೆ ಗೊತ್ತು

ಮಾಡಿದ್ದೀರಿ ಏಕೆ ಈ ತರಹ ಇಟ್ಟಿದ್ದೀರಿ ಎಂದು ಶ್ರೀಮಾನ್ ಜತ್ತಿಯವರನ್ನು ಕೇಳಿದೆ. ಅದಕ್ಕೆ ಅವರು ಇದು ಆಲ್ ಇಂಡಿಯಾ ಬೆಲೆ, ತಜ್ಞರ ಸೇರಿ ಇದನ್ನು ಗೊತ್ತು ಮಾಡಿದ್ದಾರೆ ಎಂದು ಹೇಳಿದರು. ಆ ತಜ್ಞರು ಯಾರು ? ಏಕೆ ಈ ರೀತಿ ಗೊತ್ತು ಮಾಡಿದರು ? ಒಂದೊಂದು ರಾಜ್ಯದಲ್ಲಿ ಒಂದೊಂದು ತರಹ ಏಕೆ ಗೊತ್ತು ಮಾಡಿದರು ? ನಮ್ಮ ರಾಜ್ಯದಲ್ಲಿ ಹೋದ ಸಲ 5 ರೂಪಾಯಿ ಜಾಸ್ತಿ ಇದ್ದದ್ದು ಈ ಸಾರಿ ಎರಡು ರೂಪಾಯಿ ಕಡಿಮೆ ಮಾಡಿದ್ದಾರಲ್ಲಾ ಎಂದರೆ ಟೆಕ್ನಿಕಲ್ ಆಗಿ ಅವರು ಉತ್ತರ ಕೊಡುತ್ತಾರೆ. ಯಾರು ತಜ್ಞರು ಇದ್ದಾರೆ ಮೇಲ್‌ಗಡೆ ಅವರು ಇದನ್ನೆಲ್ಲಾ ಮಾಡಿ ಕಳುಹಿಸುತ್ತಾರೆ ಎಂದು ಹೇಳುತ್ತಾರೆ. 5 ರೂಪಾಯಿ ಬೋನಸ್ ಕೊಡುತ್ತೇವೆ ಎಂದು ಒಪ್ಪಿಕೊಂಡರು. ಶ್ರೀಮಾನ್ ನಿಜಲಿಂಗಪ್ಪನವರೇ ಮುಂಡಗದ್ದೆ ತೀರ್ಥಹಳ್ಳಿಯಲ್ಲಿ ಇನ್ನೂ 5 ರೂಪಾಯಿ ಕೊಡುತ್ತೇವೆ ಎಂದು ಹೇಳಿದರು ಅಷ್ಟೇ ಅಲ್ಲ ಇನ್ನೂ ಸ್ವಲ್ಪ ದೂರ ಹೋಗಿ ಓಪನ್ ಮಾರ್ಕೆಟ್‌ನಲ್ಲಿ ತಂದರೂ ಕೂಡ ಕೊಂಡು ಕೊಳ್ಳುತ್ತೇವೆ ಎಂದು ಹೇಳಿದರು. ಇನ್ನು ಸ್ವಲ್ಪ ದಿವಸ ಬಿಟ್ಟು 50 ಕೋಟಿ ರೂಪಾಯಿ ಯಾರಾದರೂ ಕೊಡುವುದಾದರೆ ಎಲ್ಲಾ ವ್ಯಾಪಾರ ನಾನೇ ಮಾಡುತ್ತೇನೆ ಎಂದರು. ಬಾಯಿಗೆ ಬಂದ ಹಾಗೆ ಈ ಮೂರು ತಿಂಗಳಿನಿಂದ ಹೇಳಿಕೆಗಳನ್ನು ಕೊಟ್ಟುಕೊಂಡು ಓಡಾಡಿದರು. ಶ್ರೀಮಾನ್ ಕೃಷ್ಣಪ್ಪನವರು ಹೇಳುತ್ತಾರೆ 75 ಲಕ್ಷ ಜನರಿಗೆ 6 ತಿಂಗಳಿಗೆ ಆಹಾರವನ್ನು ಕೊಡುವುದಾದರೆ ಸರಿ ಇಲ್ಲದೇ ಹೋದರೆ ಅವರು ಯಾರೂ ಉಳಿಯುವುದಿಲ್ಲ ಎಂದು. ಇವರು 50 ಲಕ್ಷ ಇದ್ದುದನ್ನು 25 ಲಕ್ಷ ಮಾಡಿದರು. ಶ್ರೀಯಾಡ್ಡಿಯವರು 4 ಲಕ್ಷಕ್ಕೆ ಇಳಿಸಿದರು, ಇಳಿಸಿ ಈ ನಾಲ್ಕು ಲಕ್ಷ ಜನಕ್ಕೆ ಕೊಡುವಷ್ಟು ಕೆಲಸದ ದಿನಗಳು ಎಂದರೆ ಸುಮಾರು ಎರಡು ಲಕ್ಷದ 215 ಕೆಲಸದ ದಿನಗಳನ್ನು ಈ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಮೊದಲನೆಯ ವರ್ಷದಲ್ಲಿ ಒದಗಿಸಬಹುದು ಅವರು ಹೋದ ಕಡೆ 100 ಜನ ಇದ್ದಾರೆ, 125 ಜನ ಇದ್ದಾರೆ ಕೆಲಸಕ್ಕೆ ಜನ ಬಂದಿರಲಿಲ್ಲ ಎಂದು ಹೇಳಿ ಒಂದು ಹೇಳಿಕೆಯನ್ನು ಕೊಟ್ಟು ಹೋದರು. ಅವರ ವರದಿಯನ್ನು ಸರ್ಕಾರದವರು ಒಪ್ಪಿಕೊಂಡರಂತೆ, ಮಾನ್ಯ ಮಂತ್ರಿಗಳೆಲ್ಲಾ ಅದನ್ನು ಗುಟ್ಟಾಗಿ ಓದಿಬಿಟ್ಟರಂತೆ. ಅದು ನಮಗೆ ಅನುಕೂಲಕರವಾಗಿದೆ ಎಂದು ಹೇಳುತ್ತಾ ಇದ್ದಾರೆ. ಅನುಕೂಲಕರವಾಗಿದ್ದರೆ ಬಹಳ ಸಂತೋಷ ನಮಗೆ ಅದರ ಬಗ್ಗೆ ದುಃಖ ಇಲ್ಲ. ವಸ್ತುಸ್ಥಿತಿ ಏನಿದೆ ಈಗ ? ಶ್ರೀ ಯಾಡ್ಡಿಯವರು ಹೇಳಿಕೆಗೂ, ಶ್ರೀ ಕೃಷ್ಣಪ್ಪನವರ ಹೇಳಿಕೆಗೂ ಮಧ್ಯೆ ಏನಿದೆ ಎಂಬುದನ್ನು ಯಾರೂ ಹೇಳಬೇಕಾಗಿಲ್ಲ. ಆದ್ದರಿಂದ ಶ್ರೀಮಾನ್ ಜತ್ತಿಯವರು ಏನು ಮಾಡುವವರು ಇದ್ದಾರೆ ? ಪ್ರತಿ ತಿಂಗಳೂ 60 ಸಾವಿರ ಟನ್ ಧಾನ್ಯಗಳನ್ನು ಕೇಂದ್ರದವರು ಕೊಡದಿದ್ದರೆ ಅವರು ಏನು ಮಾಡುತ್ತಾರೆ ? ಇದನ್ನು ಶ್ರೀಮಾನ್ ಜತ್ತಿಯವರು ಮತ್ತು ಸರ್ಕಾರದವರು ಯೋಚನೆ ಮಾಡಬೇಕು.

ಲೆವಿ ಆಜ್ಞೆಯ ಬಗ್ಗೆ ನಾನು ಮೊದಲಿನಿಂದಲೂ ಹೇಳುತ್ತಾ ಬಂದೆ. ರೈತನಿಂದ ಬತ್ತ ವಸೂಲು ಮಾಡುವುದಕ್ಕೆ ಡಿ. ಐ. ಆರ್. ಏಕೆ, ಸಾಮಾನ್ಯ ಕಾನೂನಿನಿಂದ ಸಾಧ್ಯವಿಲ್ಲವೇ ಪೋಲೀಸರು ಮನೆಗೆ ನುಗ್ಗುತ್ತಾರೆಯಲ್ಲಾ ಅಂತ. ನಾನು ಹೇಳಿದಾಗಲೆಲ್ಲಾ ಜತ್ತಿಯವರು ಹೇಳುತ್ತಾರೆ ಎಲ್ಲಿ ಬೆಳೆಯಾಗಿಲ್ಲವೋ ಅಲ್ಲಿ ಲೆವಿ ವಸೂಲು ಮಾಡಬೇಡಿ ಎಂದು ಹೇಳಿ ಆಜ್ಞೆ ನೀಡಿದೆ, ಸರ್ಕಾರ ಅಂತ. ಇವರು ಯಾರಿಗೆ ಆಜ್ಞೆ ನೀಡಿರುವುದು ! ಡೆಪ್ಯೂಟಿ ಕಮಿಷನರಿಗೆ. ಡೆಪ್ಯೂಟಿ ಕಮಿಷನರು ಯಾರಿಗೆ ನೀಡಿದ್ದಾರೆ ! ತಹಸೀಲ್ದಾರರಿಗೆ. ತಹಸೀಲ್ದಾರರು ಯಾರಿಗೆ ನೀಡಿದ್ದಾರೆ, ಪಟೇಲ್ ಶ್ಯಾನುಭೋಗರಿಗೆ, ಅಥವಾ ಗ್ರಾಮಾಧಿಕಾರಿಗಳಿಗೆ. ಅವರಿಗೆ ಎರಡು ಕೆಲಸ ಇದೆ. ಈ ಕಡೆ ಬೆಳೆ ಏನೂ ಆಗದಿದ್ದರೂ 8 ಆಣೆ 10 ಆಣೆ 13 ಆಣೆ ಬೆಳೆ ಆಗಿದೆ ಎಂದು ಬರೆಯಬೇಕು. ಆ ಕಡೆ ಲೆವಿ ಆಜ್ಞೆ ಪ್ರಕಾರ ಬತ್ತ ವಸೂಲು ಮಾಡಬೇಕು. 4 ಲಕ್ಷ ಕ್ವಿಂಟಾಲ್ ಬತ್ತ ಶಿವಮೊಗ್ಗ ಜಿಲ್ಲೆಯಲ್ಲಿ ವಸೂಲು ಮಾಡಬೇಕು ಎಂದು ಗುರಿ ಇಟ್ಟುಕೊಂಡಿದ್ದೀರಿ. ಈಗಾಗಲೇ ಒಂದು ಲಕ್ಷದ ಮೇಲೆ ವಸೂಲು ಆಯಿತು, ಮನೆಗಳಿಗೆ ನುಗ್ಗುವುದು ಸಾರೋದ್ಧಾರವಾಗಿ ನಡೆದಿದೆ ಅದನ್ನು ಕೊಟ್ಟೇ ತೀರಬೇಕು ಎಂದು ಹೇಳಿ ವಸೂಲಿ ಕ್ರಮ ಜರುಗಿಸುತ್ತಾ ಇದ್ದಾರೆ. ಮಾನ್ಯ ಸಭೆಯ ಗಮನಕ್ಕೆ ಒಂದು ಮಾತನ್ನು ತರಲು ಇಚ್ಛಿಸುತ್ತೇನೆ. ಶ್ರೀಮಾನ್ ನಾರಾಯಣ ಗೌಡರು ಕಳೆದ ವಿಧಾನ ಸಭೆಯ ಅಧಿವೇಶನದ ನಂತರ ಶಿವಮೊಗ್ಗಾಕ್ಕೆ ಭೇಟಿ ಕೊಟ್ಟಿದ್ದರಂತೆ. ಆ ಸಮಯದಲ್ಲಿ ಶಿವಮೊಗ್ಗದ ಜಿಲ್ಲಾಧಿಕಾರಿಗಳು ಅವರನ್ನು ಸ್ವಾಗತ ಮಾಡುತ್ತ I have great pleasure... ಇತ್ಯಾದಿ ಇತ್ಯಾದಿ ಹೇಳಿ. ಆ ಹೇಳಿಕೆಯಲ್ಲಿ ಅಂಕಿ ಅಂಶಗಳನ್ನು ಕೊಟ್ಟರು. ಅದರಲ್ಲಿ ಒಂದು ಮಾತನ್ನು ಹೇಳಿದ್ದಾರೆ ಅದೇನೆಂದರೆ :

> "Speaking in terms of anevari, paddy crop may be taken as less than 4 annas in respect of rain-fed lands to an extent of 91 thousand acres, 4 to 6 annas in respect of lands under tanks

(ಶ್ರೀ ಎಸ್. ಗೋಪಾಲಗೌಡ)

covering an area of 1,72,000 acres. 9-12 annas in respect of channel fed lands spread over 1,06,000 acres''.

ನಿಮ್ಮ ಅಧಿಕಾರಿಗಳು ತಮಗೆ ಈ ಮಾತನ್ನು ಹೇಳಿದರು. ಅನಂತರದಲ್ಲಿ ಬಂದ ಮಳೆಯಿಂದ ನಮ್ಮ ಬೆಳೆ ಹೆಚ್ಚಾಗಲಿಲ್ಲ ಬೆಳೆ ನಾಶವಾಯಿತು. ಕೊಯ್ದು ಹಾಕಿದ್ದ ಫಸಲಿನ ಮೇಲೆ ಮಳೆ ಬಿದ್ದರೆ ಹಣದ ಮೇಲೆ ನೀರು ಹಾಕಿದ ಹಾಗೆ ಆಗುತ್ತದೆ. ಅದರಿಂದ ಏನೂ ಬರುವುದಿಲ್ಲ. ಮಳೆ ಬಂತು ಅಂತ ಕಾರಣಕ್ಕಾಗಿ ಲೆವಿ ಆಜ್ಞೆಯನ್ನು ಪುನರ್ವಿಮರ್ಶೆ ಮಾಡಲಿಲ್ಲ, ಪುನರ್ವಿಮರ್ಶೆ ಮಾಡಬೇಕೆಂದು ನಾನು ಮತ್ತೆ ಮತ್ತೆ ಅವರನ್ನು ಕೇಳಿಕೊಂಡರೂ ಮಾಡದೆ ಹೋದರು. ಸುಮಾರು 65ರ ಸೆಪ್ಟೆಂಬರ್‌ನಲ್ಲಿ ಈ ಲೆವಿ ಆಜ್ಞೆ ಬಂದಿದೆ ಬೆರೆ ಗೊತ್ತು ಮಾಡಿದರು. ಈ ಆಜ್ಞೆಯನ್ನು ಅವರು ಪುನರ್ವಿಮರ್ಶೆ ಮಾಡಲಿಲ್ಲ. ಇವತ್ತು ನಮ್ಮ ಜಿಲ್ಲೆಯಲ್ಲಿ ಕೇಳುತ್ತಾ ಇದ್ದೇನೆ. ಶಿಕಾರಿಪುರದಲ್ಲಿ ಇಷ್ಟು ಕೇಸುಗಳನ್ನು ಹಿಡಿದಿದ್ದೇವೆ ಎಂದು ಹೇಳುತ್ತಾ ಇದ್ದೀರಿ. ಈ ಆಜ್ಞೆಯ ವಿರುದ್ಧವಾಗಿ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೈಕೋರ್ಟ್‌ನಲ್ಲಿ ರಿಟ್ ಹೋಗಿದ್ದಾರೆ. ಇದೆಲ್ಲಾ ನಡೆಯುತ್ತಾ ಇದೆ. ಶಿವಮೊಗ್ಗ ಜಿಲ್ಲೆಯಲ್ಲಿ ಶ್ರೀಮಾನ್ ಕೃಷ್ಣಪ್ಪನವರು ಒಂದು ಆಶ್ವಾಸನೆಯನ್ನು ಕೂಡ ಈ ಲೆವಿ ಆಜ್ಞೆಯನ್ನು ಪುನರ್ವಿಮರ್ಶೆ ಮಾಡಿಸುತ್ತೇನೆ ಎಂದು ಕೊಟ್ಟರು. ಶಿವಮೊಗ್ಗಾದಲ್ಲಿ ತಾವು ಈಗ ನಡೆಸುತ್ತಾ ಇರತಕ್ಕ ಕಾರ್ಯಕ್ರಮಗಳನ್ನು ಇದೇ ರೀತಿ ಮುಂದುವರಿಸುವುದಾದರೆ ನಾವು ಗತ್ಯಂತರವಿಲ್ಲದೇ ಡಿ. ಐ. ಆರ್. ಆಜ್ಞೆಯನ್ನು ಮುರಿದು ಸಹಸ್ರ ಸಂಖ್ಯೆಯಲ್ಲಿ ರೈತರು ಪ್ರದರ್ಶನ ಹೋಗುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತೀರಿ ಎಂಬ ಮಾತನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅದು ಅನಿವಾರ್ಯವಾಗುತ್ತದೆ. ರೈತರಿಂದ 45-50 ರೂಪಾಯಿನಂತೆ ಬತ್ತವನ್ನು ಖರೀದಿ ಮಾಡುತ್ತೀರಿ. ಒಂದು ಕ್ವಿಂಟಾಲ್ ಮೇಲೆ ಎಷ್ಟು ಲೆಕ್ಕ ಹಾಕಿದ್ದೀರಿ ಎಂಬುದನ್ನು ನೋಡಿ.

6-00 P.M.

ಮಾನ್ಯ ವೆಂಕಟೇಗೌಡರು ಮುಂತಾದವರು ಲೆಕ್ಕ ಕೊಟ್ಟಿದ್ದಾರೆ, 67 ಪೈಸೆ ಇದ್ದುದ್ದು ಎಲ್ಲಾ ಸೇರಿ ಒಂದೂವರೆ ಕ್ವಿಂಟಾಲಿಗೆ 89-90 ಪೈಸೆಗೆ ಬರುತ್ತದೆ, ಸೇಲ್ಸ್ ಟ್ಯಾಕ್ಸ್ ಇದರಲ್ಲಿ ಸೇರಿಲ್ಲ. ಸರಕಾರದ ಲೆಕ್ಕದ ಪ್ರಕಾರ ಒಂದು ರೂಪಾಯಿಗೆ ಒಂದು ಕಿಲೋ ಅಕ್ಕಿ ಬೆಲೆ ಇದೆ. ಫುಡ್ ಕಾರ್ಪೊರೇಷನ್ನಿನವರು ಇನ್ನೂ ಹೆಚ್ಚು ದರದಲ್ಲಿ ಮಾರುತ್ತಿದ್ದಾರೆ. ಹೀಗಾದರೆ ಕೊಳ್ಳುವವರ ಗತಿಯೇನು? ಎನ್. ಜಿ. ಒ. ಗಳಿಗೆ ಎಷ್ಟು ತುಟಿಭತ್ಯ ಕೊಡಬೇಕು? ಕಾಸ್ಟ್ ಆಫ್ ಲಿವಿಂಗ್ ಇಂಡೆಕ್ಸ್ (cost of living index) ಎಷ್ಟು ಹೆಚ್ಚುತ್ತದೆ! ಈಗ ಅದು 160 ಪಾಯಿಂಟೋ ಏನೋ ಇದೆ. ಇದನ್ನು ಹೇಗೆ ಸರಿಪಡಿಸುವುದು? ಬೆಲೆಗಳು, ಆಹಾರ, ಸಂಬಳ ಇವು ಒಂದೇ ಸಮಸ್ಯೆಯ ಮೂರು ಮುಖಗಳಾಗಿವೆ. ಇವುಗಳಲ್ಲಿ ಒಂದನ್ನು ಪರಿಹಾರ ಮಾಡಿ ಇನ್ನೊಂದನ್ನು ಹಾಗೆಯೇ ಬಿಟ್ಟರೆ ಸರಕಾರ ಕುಸಿದು ಬೀಳುತ್ತದೆ, ಖರ್ಚುವೆಚ್ಚವನ್ನು ಸರಿದೂಗಿಸುವುದಕ್ಕಾಗುವುದಿಲ್ಲ. ಇಂಥ ಪರಿಸ್ಥಿತಿ ಇದೆ.

ಇನ್ನು ಈಗ ಸರಕಾರದವರು ಇಂದಿನ ಅಭಾವ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ಸುಮಾರು 4 ಕೋಟಿ ರೂಪಾಯಿಗಳಷ್ಟು ಪರಿಹಾರವನ್ನು ರೈತರಿಗೆ ಕೊಡಲು ಮುಂದೆ ಬಂದಿದೆ. ಸಾಲ ವಸೂಲು ಮಾಡುವುದು, ಮುಂದಕ್ಕೆ ಹಾಕುವುದು, ಜಮೀನು ಕಂದಾಯದ ವಸೂಲಿ ಸಸ್ಪೆಂಡ್ ಮಾಡುವುದು ಇತ್ಯಾದಿ ಕ್ರಮಗಳಿಂದಾಗಿ ಎಲ್ಲಾ ಸೇರಿ 3 ಕೋಟಿ 69 ಲಕ್ಷ ಚಿಲ್ಲರೆ ಪರಿಹಾರ ದೊರೆಯುವುದು. ಹೀಗೆ ಗಂಭೀರವಾಗಿ ಡಿಸ್ಟ್ರಿಕ್ಟ್ ಅಧಿಕಾರಿಗಳು ಹಿಂದಿನ ಫ್ಯಾಮಿನ್ ಕೋಡ್ ಅನುಸರಿಸಿ, ಲ್ಯಾಂಡ್ ರೆವೆನ್ಯೂ ನೀತಿಯನ್ನನುಸರಿಸಿ ಕೆಲಸ ಮಾಡುತ್ತಿದ್ದಾರೆ. ಇದನ್ನು ಹೀಗೆ ಎದುರಿಸಲು ಸಾಧ್ಯವಾಗುವುದಿಲ್ಲ. ಇದಕ್ಕೆ ಮೇಲಧಿಕಾರಿಗಳು ಮತ್ತು ಸರಕಾರದ ಗಮನವನ್ನು ದಿವಂಗತ ಸರ್. ಎಂ. ವಿಶ್ವೇಶ್ವರಯ್ಯನವರ ಮೆಮಾಯಿರ್ ಕಡೆಗೆ ಸೆಳೆಯುತ್ತೇನೆ. ಹಿಂದೆ ಧಾತು—ಈಶ್ವರ ಕ್ಷಾಮ ಎಂದು ಬಂತು. ಆಗ ಎಷ್ಟು ಪರಿಹಾರ ಕಾರ್ಯ ನಡೆಯಿತೆಂಬುದನ್ನು ದಯೆಯಿಟ್ಟು ಸರಕಾರ ನೋಡಿ ತಿಳಿದುಕೊಳ್ಳಬೇಕು. ಅಂಥ ಪರಿಸ್ಥಿತಿ ಇದೆ. ಇದಕ್ಕೆ ಸರಕಾರದವರು ಸರಿಯಾದ ರೀತಿ ನೀತಿ ಅನುಸರಿಸಬೇಕು. ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರದವರು ಒಟ್ಟಿಗೆ ಕಲೆತು ಲೆವಿ ಆರ್ಡರನ್ನು ರದ್ದುಮಾಡಿ ಸಂಪೂರ್ಣವಾಗಿ ಆಹಾರಧಾನ್ಯಗಳ ವ್ಯಾಪಾರವನ್ನು ಸರಕಾರದ ಕೈಗೆ ತೆಗೆದುಕೊಂಡು ಹೋರ್ಡರ್ಸ್ ಮತ್ತು ಲಾಭಕೋರರ ವಶದಲ್ಲಿರುವ ಎಲ್ಲಾ ಧಾನ್ಯಗಳನ್ನೂ ವಶಪಡಿಸಿಕೊಂಡು ನೇರವಾಗಿ ಪಡಿತರ ವ್ಯವಸ್ಥೆಯನ್ನು ಜಾರಿಗೆ ತರಬೇಕು ಎಂದು ಮಾನ್ಯ ಸಭೆಯ ಮೂಲಕ ಸರಕಾರವನ್ನು ಒತ್ತಾಯಪಡಿಸುತ್ತೇನೆ.

ಬೇರೆ ಇಲಾಖೆಗಳ ಬಗ್ಗೆ ಮಾತನಾಡಲು ಅವಕಾಶವಿಲ್ಲ, ಆಹಾರದ ವಿಚಾರದಲ್ಲಿ ಪ್ರತ್ಯೇಕ ಚರ್ಚೆಗೆ ಅವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡಿದ್ದೆ. ಮಾನ್ಯ ಅಧ್ಯಕ್ಷರು ಹೇಗಾದರೂ ಆಹಾರದ ವಿಚಾರಕ್ಕೆ ಸಂಬಂಧಪಟ್ಟ ಡಿಮ್ಯಾಂಡು ಬರುತ್ತದೆ ಅದರ ಮೇಲೆ ಚರ್ಚೆಮಾಡಿ ಎಂದು ಹೇಳಿದರು. ಈಗ ಪಬ್ಲಿಸಿಟಿ ಮತ್ತು ಇನ್‌ಫರ್ಮೇಷನ್ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಇಲಾಖೆ ಬೇಕಿಲ್ಲದ ರೀತಿಯಲ್ಲಿ ಕೆಲಸಮಾಡುತ್ತಿದೆ. ಹೊಸ ಹೊಸ ಮ್ಯಾಗ್‌ಜಿನ್ ಗಳನ್ನು ಹೊರಡಿಸಿ ಅದರಲ್ಲಿ ಮಂತ್ರಿಗಳ ಫೋಟೋವನ್ನು ಹಾಕುತ್ತಿದ್ದಾರೆ. ಹೋದ ವರ್ಷ 35 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರು. ಒಂದು ಕರಪತ್ರವನ್ನಾದರೂ ಹೊರಡಿಸಿ ಲೆವಿ ಆರ್ಡರಿನ ವಿಚಾರ, ಸೋಷಿಯಲ್ ಸೆಕ್ಯೂರಿಟಿ ವಿಚಾರ ಮುಂತಾದುವನ್ನಾದರೂ ಏಕೆ ಪ್ರಕಟಿಸಬಾರದು ? ಸುಮ್ಮನೆ ಮಂತ್ರಿಗಳ ಫೋಟೋವನ್ನು ಹಾಕಿದರೆ ಅದನ್ನು ಯಾರು ನೋಡುತ್ತಾರೆ ! ಈ ಇಲಾಖೆಯ ಕೆಲಸ ಅಷ್ಟು ಆಕರ್ಷಕವಾಗಿಲ್ಲ, ಕೆಲಸಕ್ಕೆ ಬಾರದ್ದನ್ನು ಹಾಕಿದರೆ ಯಾರಿಗೂ ಪ್ರಯೋಜನವಾಗುವುದಿಲ್ಲ. ಫೋಟೋಗಳನ್ನು ಮಂತ್ರಿಗಳ ಮನೆಯವರು ನೋಡಬಹುದು. ಈ ಫೋಟೋ ಹಾಕುವುದು ಮುಂತಾದ ಒಂದು ಹವ್ಯಾಸಕ್ಕೆ ತೊಡಗಿ ಇಲಾಖೆ ಕಾಲ ಕಳೆಯುವುದಕ್ಕಿಂತ ಅದಕ್ಕೆ ಬದಲಾಗಿ ಜನರಸೇವೆ ಮಾಡಬೇಕು, ಜನತೆಗೆ ಉಪಯೋಗವಾಗುವಂಥ ವಿಚಾರಗಳನ್ನು ಪ್ರಕಟಿಸಬೇಕು, ಹೀಗೆ ಮಾಡಬೇಕಾದ್ದು ಬೇಕಾದಷ್ಟಿದೆ. ಪತ್ರಿಕೆಗಳಲ್ಲಿ ಸರಕಾರವನ್ನು ಟೀಕಿಸಿದರೆ, ಲೆವಿ ಆರ್ಡರನ್ನು ಸರಿಯಾಗಿಲ್ಲವೆಂದು ಹೇಳಿದರೆ ಬೇಕಾದರೆ ಆರ್ಟಿಕಲ್ಲುಗಳನ್ನು ಬರೆದು ಸರಕಾರವನ್ನು ಅಡ್ವೋಕೇಟ್ ಮಾಡಿಕೊಳ್ಳಲಿ. ಅಡ್ವರ್ಟೈಸ್‌ಮೆಂಟ್ ವಿಚಾರದಲ್ಲಿ ಹಿಂದೆ ಆರ್. ಎಂ. ಪಾಟೀಲರು ಒಂದು ಸಲಹೆ ಮಾಡಿದ್ದರು. ಈ ವಿಚಾರದಲ್ಲಿ ನಾನೊಂದು ಪ್ರಶ್ನೆ ಕಳಿಸಿದ್ದೆ, ಅದಕ್ಕೆ ಉತ್ತರ ಬಂದಿಲ್ಲ. ಮಂತ್ರಿಗಳು ಹೇಳುವ ರೀತಿಯಲ್ಲಿ ಚೆನ್ನಾಗಿ ಬರೆಯುವವರಿಗೆ ಅಡ್ವರ್ಟೈಸ್‌ಮೆಂಟ್ ಕೊಡುವುದಾಗಿ ಕಾಣುತ್ತದೆ. ಈ ನೀತಿ ಅನುಸರಿಸಬಾರದು. ಅಡ್ವರ್ಟೈಸ್‌ಮೆಂಟನ್ನು ಸಣ್ಣ ಪತ್ರಿಕೆ ಮತ್ತು ದೊಡ್ಡ ಪತ್ರಿಕೆಗಳೆರಡಕ್ಕೂ ಕೊಡಬೇಕು ಯಾವ ಪತ್ರಿಕೆ ಎಲ್ಲಿ ಪ್ರಸಾರವಾಗುವುದು ಎಂಬುದನ್ನು ನೋಡಿ ಅದಕ್ಕೆ ಜಾಹೀರಾತು ಕೊಡುವ ಏರ್ಪಾಡು ಮಾಡಬೇಕು. ನಮ್ಮ ಇನ್‌ಫರ್ಮೇಷನ್ ಮತ್ತು ಪಬ್ಲಿಸಿಟಿ ಇಲಾಖೆ ಸ್ವಲ್ಪ ಆಧುನಿಕ ರೀತಿಯಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಪ್ರಚಾರಕಾರ್ಯ ಮಾಡಬೇಕೆಂಬುದಕ್ಕೆ ಸರಕಾರ ಗಮನಹರಿಸಬೇಕು ಮತ್ತು ಇದು ಸಾರ್ವಜನಿಕರಿಗೂ ಮತ್ತು ಸರಕಾರಕ್ಕೂ ಮಧ್ಯೆ ಒಂದು ಜೀವಂತ ಸಂಸ್ಥೆಯಾಗಿ ಕೆಲಸಮಾಡಬೇಕು ಎಂದು ಹೇಳಿ ಈ ಬೇಡಿಕೆಗಳನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now stand adjourned to meet tomorrow at 8-30 A.M.

The House adjourned at Ten Minutes past Six of the Clock to meet again at Thirty Minutes past Eight of the Clock on Tuesday, the 22nd March 1966.